ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

20 ಏಪ್ರಿಲ್ 2016 ಪುಟ 20 ರೂ. 15/-



ವಿಮರ್ಶೆ
ಮುರುಗನ್‌ರ ಅರ್ಧನಾರೀಶ್ವರ



ಕಾಮಕಾಂಡ ಸಾಬೀತು




ಐರನ್ ಲೇಡಿಯ ಸಂಕಟ



ಮಂಡ್ಯ
ಹೆತ್ತಮಗಳನ್ನೇ ಕೊಲ್ಲಿಸಿತು ಜಾತಿ






ಮೈಸೂರು ಜಿ.ಪಂ
ಅಧ್ಯಕ್ಷಗಾದಿಗೆ ಆಪರೇಷನ್ ಶುರು

ಅಂಕೋಲ
ಮಯೂರನಿಗೆ ಮದವೇರಿದೆ





ವಕೀಲರು ಕಾನೂನಿಗೆ ಅತೀತರೂ, ಪತ್ರಕರ್ತರು ನೀತಿಸಂಹಿತೆಗೆ ಅತೀತರೂ ಆದದ್ದು ಹೇಗೆ?

ಈ ಅಂಕಣದಲ್ಲಿ ವೈದ್ಯರೇಕೆ ದೇವಲೋಕದಿಂದ ಬಂದಂತೆ ಆಡುತ್ತಾರೆ ಎಂಬುದನ್ನು 2-3 ಸಾರಿ ಚರ್ಚಿಸಲಾಗಿದೆ. ಸಮಾಜದಲ್ಲಿ ಮುಖ್ಯ ಪಾತ್ರ ವಹಿಸುವ ಇನ್ನೂ ಎರಡು ಬಗೆಯ ವೃತ್ತಿನಿರತರ ಕುರಿತೂ ಗಂಭೀರವಾಗಿ ಪ್ರಶ್ನಿಸುವ ಕಾಲ ಬಂದಿದೆ. ಇದು ವಕೀಲರು ಮತ್ತು ಪತ್ರಕರ್ತರ ನಡುವೆ ಕೆಲವು ವರ್ಷಗಳ ಕೆಳಗೆ ನಡೆದ ಜಗಳದ ಹಿನ್ನೆಲೆಯಲ್ಲಿ ಚರ್ಚಿಸುತ್ತಿರುವ ಅಂಶವಲ್ಲ, ಮಂಡ್ಯ ತಾಲೂಕಿನಲ್ಲಿ ಈ ವಾರ ನಡೆದ ಘಟನೆಯೊಂದರ ಸುತ್ತ ವಕೀಲ ಸಮುದಾಯ ನಡೆದುಕೊಂಡ ಬಗೆಯ ಹಿನ್ನೆಲೆಯಲ್ಲಿ ಏಳುತ್ತಿರುವ ಪ್ರಶ್ನೆಯಾಗಿದೆ. ಆ ಘಟನೆಯು ಹೃದಯವಿದ್ದ ಯಾಶೇ ಆದರೂ ಬೆಚ್ಚಿ ಬೀಳುವ ಘಟನೆಯಾಗಿತ್ತು, ತಂದೆ ಮತ್ತು ಸೋದರ ಮಾವಂದಿರಿಬ್ಬರು ಸೇರಿ ತಮ್ಮ ಮನೆ ಮಗಳನ್ನು ಕೊಂದು ಹಾಕಿದ್ದರು. ಬೇರೆ ಜಾತಿಯ ಹುಡುಗನನ್ನು ಆಕೆ ಪ್ರೀತಿಸಿದ್ದೇ ಇದಕ್ಕೆ ಕಾರಣವೆಂದು ಅವರು ಪೊಲೀಸರ ಹತ್ತಿರ ಹೇಳಿದ್ದಾರೆ.

ಮಗಳನ್ನು ನಂಬಿಸಿ ಮನೆಗೆ ಕರೆದುಕೊಂಡು ಹೋಗಿ, ಕತ್ತಿನ ಮೇಲೆ ಕಾಲು ಇಟ್ಟು ತುಳಿದು ಮೋನಿಕಾಳನ್ನು ಕೊಂದಿದ್ದಾರೆ. ಆ ನಂತರ ಮರಕ್ಕೆ ತಾವೇ ನೇಣು ಹಾಕಿದ್ದಾರೆ. ನೇಣಿನ ಸ್ಥಿತಿಯಲ್ಲಿ ಹಲವರು ನೋಡಿದ ಮೇಲೆ ಇಳಿಸಿ, ಕಬ್ಬಿನ ಗದ್ದೆಯಲ್ಲಿ ಸುಟ್ಟು ಹಾಕಿದ್ದಾರೆ. 3 ವರ್ಷಗಳ ಕೆಳಗೆ ಇದೇ ಜಿಲ್ಲೆಯಲ್ಲಿ ಇದೇ ಕಾರಣಕ್ಕೆ ತಂದೆಯೇ ಮುಂದೆ ನಿಂತು ಮಗಳನ್ನು ಕೊಂದಿದ್ದ. ಆಗಲೂ ಕರ್ನಾಟಕ ಬೆಚ್ಚಿತ್ತು, ಉತ್ತರ ಭಾರತದಲ್ಲಿ ಈಚೆಗೆ ಹೆಚ್ಚಾಗುತ್ತಿದೆಯೆಂದು ಪತ್ರಿಕೆಗಳಲ್ಲಿ ಓದುತ್ತಿದ್ದ 'ಮರ್ಯಾದೆಗೇಡು ಹತ್ಯೆ' ಇಲ್ಲಿಯೂ ಬಹಿರಂಗಕ್ಕೆ ಬಂದಿತ್ತು, ಆ ಪ್ರಕರಣದಲ್ಲಿ ಒಂದು ತಿಂಗಳಾದರೂ ದೂರು ದಾಖಲಾಗಿರಲಿಲ್ಲ. ಸಂಘಟನೆಗಳ ಮಧ್ಯಪ್ರವೇಶದ ನಂತರ ದೂರು ದಾಖಲಾಯಿತು; ಪ್ರತಿಭಟನೆಗಳು ನಡೆದವು, ಪ್ರತಿಭಟನೆಯ ವಿರುದ್ಧ ಪ್ರತಿಭಟನೆಗಳಾದವು.

ಬಂಧಿತನಾದ ತಂದೆಗೆ ಬಹುಬೇಗ ಜಾಮೀನೂ ಸಿಕ್ಕಿತು. ಜಾಮೀನು ಪಡೆದು ಊರಿಗೆ ಹೋದ ಆರೋಪಿ ತನ್ನ ಮಗಳನ್ನು ಪ್ರೀತಿಸಿದ್ದ ಹುಡುಗನ ಮನೆಯವರ ಮೇಲೆ ಹಲ್ಲೆ ನಡೆಸಿದ. ಆಗ ರದ್ದಾದ ಜಾಮೀನು ಮತ್ತೆ ಲಭ್ಯವಾಗಲು ಹೆಚ್ಚೇನೂ ಸಮಯ ತೆಗೆದುಕೊಳ್ಳಲಿಲ್ಲ, ನ್ಯಾಯಾಲಯ ಇಂತಹ ಮೊಕದ್ದಮೆಗಳಲ್ಲಿ ಇಷ್ಟು ಸಂವೇದನಾರಹಿತವಾಗಿ ಹೇಗೆ ನಡೆದುಕೊಳ್ಳುತ್ತದೆಂಬ ಪ್ರಶ್ನೆ, ಇಂತಹ ಭೀಕರ ಘಟನೆ ನಡೆದಾಗ ಅದನ್ನು ಸಮರ್ಥಿಸುವ ರೀತಿಯಲ್ಲಿ ಬೀದಿಯಲ್ಲಿ ಪ್ರತಿಭಟನೆ ಮಾಡಲು ಹೇಗೆ ಸಾಧ್ಯವೆಂಬ ಪ್ರಶ್ನೆ ಆಗಲೂ ಎದ್ದಿತ್ತು, ಆದರೆ, ಹುಡುಗಿಯ ಜಾತಿಯ ಪ್ರಗತಿಪರರೂ ಮುಂಚೂಣಿಯಲ್ಲಿ ನಿಂತು ಅಮಾನವೀಯ ಕೃತ್ಯವನ್ನು ಖಂಡಿಸಿದ್ದರು. ಹಿರಿಯರಾದ ಮಾದೇಗೌಡರೂ ಪ್ರಗತಿಪರರ ಪ್ರತಿಭಟನೆಯಲ್ಲಿ ಜೊತೆಯಾಗಿದ್ದರು.

ಇಂತಹ ವಿರೋಧ ವ್ಯಕ್ತವಾಗುವುದರಿಂದ ಮಾತ್ರ ಈ ಸಮಾಜ ಮುಂದಕ್ಕೆ ಹೋಗಲು ಸಾಧ್ಯ, ಇಲ್ಲದಿದ್ದರೆ ನಮ್ಮನ್ನು 'ಮಧ್ಯಯುಗ'ಕ್ಕೆ ವಾಪಸ್ಸು ಎಳೆದೊಯ್ಯುವ ಕೆಲಸಕ್ಕೇ ಹೆಚ್ಚು ಇಂಬು ಸಿಗುತ್ತದೆ. ಹಾಗಾಗಿಯೇ ಮೋನಿಕಾ ಸತ್ತ ಎರಡನೇ ದಿನಕ್ಕೇ ಪ್ರಕರಣದ ಆರೋಪಿಗಳನ್ನು ಬಂಧಿಸಲಾಯಿತು. ದೂರೂ ದಾಖಲಾಯಿತು. ಆದರೆ ಈ ಪ್ರಕರಣದಲ್ಲಿ ಇನ್ನೊಂದು ತಿರುವು ಇತ್ತು, ಆರೋಪಿಗಳಲ್ಲಿ ಒಬ್ಬ ವಕೀಲನಾಗಿದ್ದ. 'ವಕೀಲನೊಬ್ಬನನ್ನು ಆರೋಪಿಯನ್ನಾಗಿಸಿದ್ದನ್ನು' ವಕೀಲರ ಸಂಘ ಖಂಡಿಸಿತು. ಜೊತೆಗೆ ನ್ಯಾಯಾಲಯದ ಕಲಾಪದ ಬಹಿಷ್ಕಾರಕ್ಕೆ ಕರೆ ನೀಡಿತು. ದುರಂತವೇನೆಂದರೆ, ಈ ಬಹಿಷ್ಕಾರವು ಸಂಪೂರ್ಣ ಯಶಸ್ವಿಯಾಯಿತು (2-3 ವಕೀಲರು ಮಾತ್ರ ಕಲಾಪಕ್ಕೆ ಹಾಜರಾಗುವ ಧೈರ್ಯ ತೋರಿದರು).

ನಡೆದಿರುವ ಘಟನೆ ಭೀಕರವಾದದ್ದು, ಆರೋಪಿಗಳ ಜಾತಿಗೆ ಸೇರಿದ ಬಹುಸಂಖ್ಯಾತರೂ ಅದನ್ನು ಸಮರ್ಥಿಸುವುದಿಲ್ಲ, ತನಗೆ ಇಷ್ಟವಿಲ್ಲದಿದ್ದರೆ 'ಹಾಳಾಗಿ ಹೋಗು, ನಿನಗೂ ನನಗೂ ಸಂಬಂಧವಿಲ್ಲ ಎಂದು ಮಗಳನ್ನು ಮನೆಯಿಂದ ಹೊರಗೆ ಹಾಕಬಹುದಿತ್ತು, ಇದಂತೂ ಅಮಾನವೀಯವಾದದ್ದು' ಎಂದೇ ಜಿಲ್ಲೆಯ ಎಲ್ಲಾ ಜಾತಿಗಳಿಗೆ ಸೇರಿದ ಬಹುಸಂಖ್ಯಾತ ಮಾನವಂತರು ಹೇಳುತ್ತಾರೆ. ಆದರೆ, ಸಂವಿಧಾನ ಮತ್ತು ಕಾನೂನು ಎಲ್ಲರಿಗೂ ಒಂದು ಎಂದು ಪ್ರತಿಪಾದಿಸುವ ಹಾಗೂ ಅದನ್ನು ನ್ಯಾಯಾಲಯದಲ್ಲಿ ಸಾಧಿಸಲು ಹಗಲಿರುಳೂ ಕೆಲಸ ಮಾಡುವ ವಕೀಲ ಸಮುದಾಯ ಭಿನ್ನವಾಗಿ ನಡೆದುಕೊಂಡಿತು. ಹೌದು, ಕೊಲೆಯ ಕುರಿತಾಗಿ ವಕೀಲರ ಸಂಘ ಯಾವ ಮಾತೂ ಆಡಿಲ್ಲ; ಅದನ್ನು ಸಮರ್ಥಿಸಿಲ್ಲ, ಅವರ ಆಕ್ಷೇಪ 'ವಕೀಲನೊಬ್ಬನನ್ನು ಈ ಕೇಸಿನಲ್ಲಿ ಆರೋಪಿ ಮಾಡಿದ್ದರ' ಕುರಿತಾಗಿ. ಅಂದರೆ ವಕೀಲನಾಗಿದ್ದ ಮಾತ್ರಕ್ಕೆ ಅವರಿಗೆ ಎಂತಹ ಕೃತ್ಯಕ್ಕೆ ಬೇಕಾದರೂ ಅನುಮತಿ ಯಿದೆಯೇ? ಇದನ್ನು ಕೊಟ್ಟವರು ಯಾರು?



ಬೇರೆ ಇನ್ನಾವುದೋ ಆರೋಪಿಯ ಮೇಲೆ ಒಂದು ವೇಳೆ ಪೊಲೀಸರು ಕೇಸು ದಾಖಲಿಸಿಕೊಳ್ಳದಿದ್ದರೆ, ನೇರ ನ್ಯಾಯಾಲಯಕ್ಕೇ ಹೋಗಿ ಕೇಸು ದಾಖಲಿಸುವ ಅವಕಾಶವನ್ನೂ ವಕೀಲರು ಪಡೆದುಕೊಂಡಿದ್ದಾರೆ. ಕೆಲವು ಪ್ರಕರಣಗಳಲ್ಲಿ ಕೆಳಹಂತದ ಪೊಲೀಸ್ ಅಧಿಕಾರಿಗಳು ಮೊಕದ್ದಮೆ ದಾಖಲಿಸುವುದಿಲ್ಲವೆಂಬ ಕಾರಣಕ್ಕೆ, ಸಾಕಷ್ಟು ಹೋರಾಟ, ಚಿಂತನೆ ನಡೆದು ಈಗ ಅದನ್ನು ಕಡ್ಡಾಯಗೊಳಿಸಿದ್ದಾರೆ. ಏಕೆಂದರೆ, ಸಾಮಾನ್ಯವಾಗಿ ಇಂತಹವು ನಡೆಯುವುದು ಬಲಾಢ್ಯರ ವಿರುದ್ಧ ಸಾಮಾನ್ಯರು ನೀಡುವ ದೂರುಗಳ ವಿಚಾರದಲ್ಲಿ, ಹಾಗಾಗಿಯೇ 'ಕಾನೂನು ಎಲ್ಲರಿಗೂ ಒಂದೇ' ಎಂಬುದನ್ನು ಎತ್ತಿ ಹಿಡಿಯಲೆಂದೇ, ಇಂತಹ ಕೆಲವು ಬದಲಾವಣೆಗಳು ಬಂದಿವೆ. ಖಂಡಿತವಾಗಿ ಅಂತಹ ಹೋರಾಟಗಳಲ್ಲಿ ವಕೀಲರದ್ದೂ ಒಂದು ಪಾತ್ರವಿದೆ. ದೇಶದ ಬೇರೆ ಬೇರೆ ಭಾಗಗಳ ಸಾವಿರಾರು ವಕೀಲರು, ಸಂವಿಧಾನದ ಅರ್ಥ ವಿಸ್ತರಣೆ, ಪ್ರಜಾತಂತ್ರದ ವಿಸ್ತರಣೆಯಲ್ಲಿ ಮುಖ್ಯ ಪಾತ್ರ ವಹಿಸುವ ಕಾರ್ಯ ಮಾಡುತ್ತಾ ಬಂದಿದ್ದಾರೆ.

ಆದರೆ, ಇದೇ ವಕೀಲ ಸಮುದಾಯ ಒಂದು ಸಮೂಹವಾಗಿ ಕೆಲವೊಮ್ಮೆ ಈ ರೀತಿಯಲ್ಲೂ ವರ್ತಿಸುತ್ತಾ ಬಂದಿದೆ. ಮಂಡ್ಯದ ಪ್ರಕರಣವು, ಆರೋಪಿತ ಘಟನೆಯ ಕಾರಣಕ್ಕೆ ಮತ್ತಷ್ಟು ಕೆಟ್ಟದಾಗಿ ಕಾಣುತ್ತಿದೆ ಎಂಬುದನ್ನು ಬಿಟ್ಟರೆ, ವಕೀಲರನ್ನು ಆರೋಪಿಯನ್ನಾಗಿಸಬಾರದೆಂದು ಹೇಳಿ ಕಲಾಪ ಬಹಿಷ್ಕಾರ ಬಹಳ ಸರ್ವೇಸಾಮಾನ್ಯವಾಗಿ ನಡೆಯುತ್ತದೆ. ಈ ಪ್ರಕರಣದಲ್ಲಿ ಅಂತಹ ಬಹಿಷ್ಕಾರದ ಕರೆಯನ್ನು ಗಣನೀಯ ಸಂಖ್ಯೆಯ ವಕೀಲರು ವಿರೋಧಿಸಲಿಲ್ಲ ವೆಂಬ ಅಂಶ ನಿಜಕ್ಕೂ ವಿಷಾದ ಮೂಡಿಸುತ್ತದೆ. ವಕೀಲರ ವಿರುದ್ಧ ನಿಂತ (ಅಥವಾ ವಕೀಲರ ಸಂಘದ ಪರವಾಗಿ ನಿಲ್ಲದ) ನಿರ್ದಿಷ್ಟ ಸಂಘಟನೆಗಳ ಮೇಲಿನ ಮೊಕದ್ದಮೆಯನ್ನು ಯಾವ ವಕೀಲರೂ ತೆಗೆದುಕೊಳ್ಳಬಾರದೆಂಬ ಅಲಿಖಿತ ನಿಯಮಗಳೂ ಕೆಲವು ಸಾರಿ ಜಾರಿಗೆ ಬಂದುಬಿಡುತ್ತವೆ. ಸುಪ್ರೀಂಕೋರ್ಟ್ ಮಾತ್ರ ಸಂವಿಧಾನದ ರಕ್ಷಕ **(custodian of constitution)** ಅಲ್ಲ, ನ್ಯಾಯ ಪ್ರಕ್ರಿಯೆಯ ಭಾಗವಾಗಿರುವ ಎಲ್ಲರೂ ಸಮಾನ ಅವಕಾಶ, ಸಮಾನ ನ್ಯಾಯದ ಪ್ರತಿಪಾದಕರೂ, ರಕ್ಷಕರೂ ಆಗಿಯೇ ಇರುತ್ತಾರೆ.

ಇಂತಹುದೇ ರೀತಿಯಲ್ಲಿ ಸಾರ್ವಜನಿಕ ನೀತಿಸಂಹಿತೆಗಿಂತ ಮೇಲಿದ್ದೇವೆ ಎಂದು ಭಾವಿಸುವ ಇನ್ನೊಂದು ವೃತ್ತಿನಿರತ ಸಮುದಾಯವೆಂದರೆ ಪತ್ರಕರ್ತರದ್ದು. ಎಲ್ಲರನ್ನೂ ಪ್ರಶ್ನಿಸುವ ಹಕ್ಕು ಮತ್ತು ಕರ್ತವ್ಯವನ್ನು ಹೊಂದಿರುವ ಕಾರಣಕ್ಕೆ ತಾವು ಪ್ರಶ್ನಾತೀತರು ಎಂದು ಈ ಸಮೂಹ ಭಾವಿಸಿದೆ. ಒಂದು ನಿರ್ದಿಷ್ಟ ಉದಾಹರಣೆಯ ಮೂಲಕ ಈ ಸಮೂಹದ ಆಷಾಢಭೂತಿತನವನ್ನು ನಿಮ್ಮ ಮುಂದಿಡ ಬಯಸುತ್ತೇನೆ. ಯೋಗೇಶ್ ಮಾಸ್ಟರ್ ಅವರ ಡುಂಢಿ ಕಾದಂಬರಿಯ ಕುರಿತು ವಿವಾದವಾದಾಗ ನಡೆದ ವಿದ್ಯಮಾನವಿದು. ಆ ಸಂದರ್ಭದಲ್ಲಿ ಒಂದು ಚಾನೆಲ್‌ನಲ್ಲಿ ಯೋಗೇಶ್ ಮಾಸ್ಟರ್ ಅವರ ಬಗ್ಗೆ ಅವಹೇಳನಕಾರಿ ಕಾರ್ಯಕ್ರಮವೊಂದು ಪ್ರಸಾರವಾಯಿತು. ಆ ಕಾದಂಬರಿಯ ಲ್ಲೇನಿದೆ, ಅದನ್ನು ಬರೆದಿದ್ದರಲ್ಲಿ ತಪ್ಪೇನಿದೆ ಎಂಬ ಚರ್ಚೆಗಿಂತ ಯೋಗೇಶ್ ಅವರ ಕೆಲವು ಫೋಟೋಗಳು ಕಾರ್ಯಕ್ರಮದ ಮುಖ್ಯ ಅಂಶಗಳಾಗಿದ್ದವು. ರಂಗಕರ್ಮಿಯೂ, ಸೃಜನಶೀಲ ಕಲಾವಿದನೂ ಆಗಿದ್ದ ಅವರು ವಿವಿಧ ಭಾವಭಂಗಿಗಳ ಕೆಲವು ಫೋಟೋಗಳನ್ನು ತಮ್ಮ ಜಾಲತಾಣದಲ್ಲಿ ಹಾಕಿಕೊಂಡಿದ್ದರು. ಅವು ಟಿವಿ ಚಾನೆಲ್‌ನವರ ಪ್ರಕಾರ ವಿಕೃತವಾಗಿದ್ದವು. ಅರೆನಗ್ನ ಫೋಟೋಗಳನ್ನು ಈ ರೀತಿ ಹಾಕಿಕೊಂಡಿರುವುದು ಸದರಿ ವ್ಯಕ್ತಿಯ ವಿಕೃತಿ ಎಂದು ವಿಕೃತವಾಗಿ ಬಣ್ಣಿಸಿ ಅವರ ಮೇಲೆ ವಾಗ್ದಾಳಿ ನಡೆಸಲಾಯಿತು. ಇನ್ನೊಂದು ಚಾನೆಲ್ ನಂತರ ದೈಹಿಕ ದಾಳಿಯನ್ನೇ ಯೋಜಿಸುವ ವಿಕೃತತೆಗೆ ಇಳಿಯಿತು.

ಇದು ನಡೆದ ಆಸುಪಾಸಿನಲ್ಲೇ, ನಟಿಯೊಬ್ಬಳ ಅಶ್ಲೀಲ ವಿಡಿಯೋವನ್ನು ಯಾರೋ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿದ್ದಾರೆಂಬ ವಿವಾದವು ಚಾಲ್ತಿಯಲ್ಲಿತ್ತು, ಅಂತಹ ವಿಡಿಯೋವನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿರು ವುದು ಅಪರಾಧವೂ, ಮಹಿಳೆಯರೊಬ್ಬರ ಘನತೆಗೆ ಕುಂದು ತರುವುದೂ, ಸಾರ್ವಜನಿಕ ನಡವಳಿಕೆಯ ಶಿಷ್ಟಾಚಾರದ ಉಲ್ಲಂಘನೆಯೂ ಆಗಿದ್ದುದರ ಬಗ್ಗೆ ಇದೇ ಚಾನೆಲ್‌ನಲ್ಲಿ ಕಾರ್ಯಕ್ರಮ ಬಿತ್ತರವಾಯಿತು. ಅದರ ಉದ್ದಕ್ಕೂ ಅದೇ ವಿಡಿಯೋಗಳನ್ನು ಪ್ರದರ್ಶಿಸಲಾಯಿತು!! ಇದು ಇವರ ನೀತಿಸಂಹಿತೆ. ಕೇವಲ ಇಷ್ಟು ಮಾತ್ರವಲ್ಲದೇ, ನಿರಂತರವಾಗಿ ಅಶ್ಲೀಲವಾದ, ವಿಕೃತವಾದ ಚಿತ್ರಗಳನ್ನು, ವಿಚಾರಗಳನ್ನು



ಪ್ರಸಾರ ಮಾಡುವುದರಲ್ಲೂ ಬಹುತೇಕ ಚಾನೆ ಪೈಪೋಟಿಗಿಳಿದಿವೆ. ಅದು ಕೇವಲ ಹುಚ್ಚಾ ಸಂದರ್ಭದಲ್ಲಿ ಮಾತ್ರವೇ ಕಂಡಿದ್ದಲ್ಲ, ಬೆಂಗಳೂ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾ ಎಡವಟ್ಟು ಮತ್ತು ನಂತರದ ಪ್ರಕರಣಗಳನ್ನು ಇಟ್ಟುಕೊಂಡು, ಆವರನ್ನೂ ಟಿಆರ್‌ಪಿ ಸರಕನ್ನಾ ಇವೇ ಚಾನೆಲ್‌ಗಳು. ಸದರಿ ಅಧಿಕಾರಿಯ ಬ ಬಹಳ ಅನುಕಂಪ ಇಟ್ಟುಕೊಂಡಂತೆ ಕಣ್ಣೀರು ಸುರಿಸಿದ ಎಲ್ಲಾ ಚಾನೆಲ್‌ಗಳು ಆ ಸರಣಿ ಮುಗಿಯುವಷ್ಟರಲ್ಲಿ, ಆತನನ್ನು ಹಾಸ್ಯಾಸ್ಪದ ವ್ಯಕ್ತಿಯನ್ನಾಗಿಸಿದ್ದರು.

ಮಾಧ್ಯಮಗಳ ವಿಕೃತವಾದ ನಡವಳಿಕೆಗಳಿಗೆ ಮಿತಿಯೇ ಇಲ್ಲದಷ್ಟು ಉದಾಹರಣೆಗಳನ್ನು ನೀ ಹೋಗಬಹುದು. ತಮಗೆ ಅನ್ವಯಿಸದ ನೀತಿಸ ಇತರರಲ್ಲಿ ಮಾತ್ರ ನೋಡುವ ಆಷಾಢಭೂತಿತ ಮಾಧ್ಯಮಗಳಲ್ಲಿ ಬೇರು ಬಿಡುತ್ತಾ ಹೋಗುತ್ತಿರು ಹೇಗೆ? ಮೇಲೆ ಹೇಳಿದ ರೀತಿಯಲ್ಲಿ ವಕೀಲರ ಮಾಧ್ಯಮಗಳೂ ತಮಗೊಂದು ನ್ಯಾಯ, ಇತರರಿಗೊಂದು ನ್ಯಾಯವನ್ನು ಸಾಧಿಸಿಕೊಳ್ಳುತ್ತಿ ವುದು ಹೇಗೆ ಸಾಧ್ಯವಾಗುತ್ತಿದೆ? ಜೆಎನ್‌ಯು ವಿಡಿಯೋ ಪ್ರಕರಣದಲ್ಲಿ ಮಾತ್ರ ಮಾಧ್ಯಮಗಳ ಒಂದು ವಿಭಾಗವು ಇತರರ ತಪ್ಪನ್ನು ಬಹಿರಂಗ ಹೇಳುವ ಧೈರ್ಯ ತೋರಿದವು.

ಈ ರೀತಿ ವರ್ತಿಸುತ್ತಿರುವ ಎರಡೂ ಸಮುದಾಯಗಳೂ ಪರಸ್ಪರ ಮುಖಾಮುಖಿಯಾ ಬೆಂಗಳೂರಿನಲ್ಲಿ ನಡೆದ ಘಟನೆಯಲ್ಲಿ, ಆ ಸಂದರ್ಭದಲ್ಲಿ ಪೊಲೀಸರೂ ಮಾಧ್ಯಮಗಳ ಜೊ ನಿಂತಿದ್ದರು. ಇಷ್ಟು ಕಾಲವಾದ ಮೇಲಾದರೂ, ಘಟನೆಗಳ ಕುರಿತು ಎರಡೂ ಸಮೂಹಗಳಲ್ಲಿ ಆತ್ಮಾವಲೋಕನ ನಡೆದಿದೆಯೇ? ಬಹಿರಂಗವಾಗಿ ಅಂತಹ ಒಂದು ಆತ್ಮಾವಲೋಕನದ ಜಂಟಿ ಚರ್ಚೆಯನ್ನು ನಡೆಸುವಷ್ಟು ಪ್ರಬುದ್ಧತೆಯನ್ನು ನಿರೀಕ್ಷಿಸಲಾದೀತೇ?

ಬೇರೆಯವರ ಸೆನ್ಸಾರ್, ಅದರಲ್ಲೂ ಪ್ರಭುತ್ವ ಸೆನ್ಸಾರ್‌ಅನ್ನು ಒಪ್ಪದ ಮಾಧ್ಯಮಗಳು ತಾವೇ ಸ್ವ ಸೆನ್ಸಾರ್ ವಿಧಿಸಿಕೊಳ್ಳಲು ಕೆಲವು ಏರ್ಪಾಡುಗಳ ಮಾಡಿಕೊಂಡಿವೆ. ಮುದ್ರಣ ಮಾಧ್ಯಮದ ವಿಚಾ ಅದೊಂದು ಸಾಂಸ್ಥಿಕ ಸ್ವರೂಪವನ್ನೂ ಹೊಂದಿದೆ. ಒಂದಲ್ಲಾ ಒಂದು ಮಟ್ಟಿಗೆ ಸರ್ಕಾರ, ನ್ಯಾಯಾಲ ಮಧ್ಯ ಪ್ರವೇಶವೂ ಅದರಲ್ಲಿ ಸಾಧ್ಯ. ಆದರೆ, ಅ ಸಹ ಕೆಲವು ಪತ್ರಿಕೆಗಳು ಯಾವುದಕ್ಕೂ 'ಹೆದರದ ತಮ್ಮ ದಾರಿಯಲ್ಲಿ ನಡೆಯುತ್ತಿದ್ದಾರೆ. ಓದುಗರ ಅಭಿಪ್ರಾಯವನ್ನು ಆಹ್ವಾನಿಸಿ, ಕನ್ನಡದ ಕೆಲವು ಮಹತ್ವದ ಲೇಖಕರ ಮೇಲೆ ದಾಳಿ ನಡೆಸಿದ ಉದಾಹರಣೆಗಳನ್ನು ಈ ರಾಜ್ಯದಲ್ಲೇ ನೋಡಿದ್ದೇ ಎಡಿಟರ್ಸ್ ಗಿಲ್ಡ್ ಮೂಲಕ ನೀತಿಸಂಹಿತೆಯ ನಿಯಮಗಳನ್ನು ಬರೆದುಕೊಂಡಿರುವ ಟಿವಿ ಮಾಧ್ಯಮವು, ಎಲ್ಲವನ್ನೂ ಗಾಳಿಗೆ ತೂರಿಕೊಂಡು ಇನ್ನೂ ಕೆಟ್ಟ ಸ್ಥಿತಿಗೆ ಕುಸಿದಿದೆ.

ಈ ದೇಶದಲ್ಲೇ ಬಾಬಾ ರಾಂದೇವ್ 'ಸಂವಿಧ ವೊಂದಿಲ್ಲದಿದ್ದರೆ ಭಾರತ್ ಮಾತಾಕೀ ಜೈ ಹೇಳದ ರುಂಡ ಚೆಂಡಾಡುತ್ತೇನೆ' ಎನ್ನುತ್ತಾನೆ. ಬಿಜೆಪಿ, ಕಾಂಗ್ರೆಸ್, ಎಸ್‌ಪಿ, ಎಂಐಎಂ ಇತ್ಯಾದಿ ಪಕ್ಷಗಳಿಗೆ ಸೇರಿದ ನೇತಾರರೂ ಬಾಯಿಗೆಬಂದಂತೆ ಮಾತನಾಡುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ವಕೀಲರು, ಪತ್ರಕರ್ತರೇ ಮೊದಲಾದ ವೃತ್ತಿನಿರತ ಮಧ್ಯಮವರ್ಗಗಳು ದೇಶದ ಅಂತಃಸಾಕ್ಷಿಯನ್ನು ಕಾಪಾಡಬೇಕು. ಆದರೆ, ಈ ಮಧ್ಯಮವರ್ಗವೇ ಫ್ಯಾಸಿಸ್ಟ್ ಪ್ರತಿಗಾಮಿಗಳಿಗೆ ಪೂರಕವಾದ ಸಾರ್ವಜ ನೀತಿ ಸಂಹಿತೆಯನ್ನು ಮರುರೂಪಿಸುತ್ತಾ ಸಾಗಿದಾ ಕೆಲವರಾದರೂ ಧೈರ್ಯ ಮಾಡಿ ಪ್ರತಿರೋಧ ತೋರಬೇಕು. ಜೆಎನ್‌ಯು ಪ್ರಕರಣದಲ್ಲಿ ಕೆಲವು ಮಾಧ್ಯಮಗಳು ತೋರಿದಂತೆ. ಮೊನ್ನೆ ಮಂಡ್ಯದಲ್ಲೂ ಸಹಾ 25 ಹಿರಿಯ ವಕೀಲರಾದರೂ, ನಾವಿದನ್ನು ಒಪ್ಪುವುದಿಲ್ಲ ಎಂದಿದ್ದರೆ, ಬಹಿಷ್ಕಾರದ ಕರೆ ಸೋಲುತ್ತಿತ್ತು, ಏಕೆಂದರೆ, ಈ ವೃತ್ತಿಯಲ್ಲೂ ದೊಡ ಸಂಖ್ಯೆಯ ಮಾನವಂತರು ಇದ್ದಾರೆ. ಆದರೆ, ಪ್ರವಾ ವಿರುದ್ಧ ತಾವೇ ಹೋಗಲು ಹೆದರಿ ಬೆಕ್ಕಿಗೆ ಗಂಟೆ ಕಟ್ಟುವವರಿಗಾಗಿ ಕಾಯುತ್ತಿದ್ದಾರೆ.

ಪ್ರತಿಭೆಗಳನ್ನು ರೂಪಿಸುತ್ತಿರುವ ವಿವಿಗಳು ಉಳಿಯಬೇಕು

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಇವತ್ತು 'ಹೈದರಾಬಾದ್ ಚಲೋ' ಎಂಬ ೋರಾಟಕ್ಕೆ ಕರೆಕೊಡಲಾಗಿತ್ತು, ಅದಕ್ಕೊಂದು ಬೆಂಗಳೂರು ತ್ತು ರಾಜ್ಯದ ಇತರೆ ಹಲವು ಕಡೆಗಳಿಂದ ವಿದ್ಯಾರ್ಥಿಗಳು ೀದರು ಕೂಡ. ಮೊನ್ನೆ ಹೈದರಾಬಾದಿನಿಂದ ಫೋನ್ ಿದಿದ ಉಮಾಮಹೇಶ್ವರ ರಾವ್ "ಅಮ್ಮಾ, ನೀವೂ ಧವಾರ ಬನ್ನಿ ಹೈದರಾಬಾದಿಗೆ" ಎಂದು ಆಹ್ವಾನಿಸಿದ. ತೆಗೆ ಇವತ್ತು ಶಾಸಕರ ಭವನದಲ್ಲಿ ಬಿ.ಆರ್.ಪಾಟೀಲ್, ಟ್ಟಣ್ಣಯ್ಯ ಮತ್ತು ಪಿ.ರಾಜೀವ್ ಅವರು ಸಮಾನ ಮನಸ್ಕರ ಕರೆದಿದ್ದರು. ಅವರುಗಳು 'ರಾಷ್ಟ್ರೀಯವಾದ-ಪ್ರಜಾಸತ್ತೆ ಷ್ಟೆಗೆ ಆಪತ್ತು' ಎಂಬ ವಿಷಯವನ್ನು ಎಲ್ಲರೊಂದಿಗೆ ರ್ಚಿಸಿ ಇನ್ನು ಮುಂದೆ ಜನಪರವಾದ ನಿಲುವನ್ನು ವಿಧಾನ ಭೆಯಲ್ಲಿ ಎತ್ತಿಕೊಳ್ಳುವುದಾಗಿ ಹೇಳಿದ್ದರು. ಆದರೆ ಧವಾರ ಪತ್ರಿಕೆ ಮುದ್ರಣಕ್ಕೆ ಹೋಗುವುದರಿಂದ ನಾನು ತ್ತು ಕಚೇರಿಯಲ್ಲೇ ಬಂಧಿ. ಹಾಗಾಗಿ ಎಲ್ಲಿಗೂ ೋಗಲಾಗಲಿಲ್ಲ.

ಈ ಅಂಕಣವನ್ನು ಬರೆಯಲು ಪ್ರಾರಂಭಿಸುವ ಮುನ್ನ ಲವು ಮಿತ್ರರು ವಾಟ್ಸ್‌ಅಪ್‌ನಲ್ಲಿ "ಹೈದರಾಬಾದಿನಲ್ಲಿ ಲವು ಕರ್ನಾಟಕದ ವಿದ್ಯಾರ್ಥಿಗಳ ಬಂಧನವಾಗಿದೆ. ವರನ್ನು ಎಲ್ಲಿಗೆ ಕರೆದುಕೊಂಡು ಹೋಗಿದ್ದಾರೆ ಿತ್ತಾಗುತ್ತಿಲ್ಲ" ಎಂದು ಆತಂಕ ವ್ಯಕ್ತಪಡಿಸಿದರು. ಈಗಲೂ ನನ್ನು ಬರೆಯುತ್ತಿರುವಾಗ, ಟಿವಿಗಳಲ್ಲಿ ಹಲವಾರು ದ್ಯಾರ್ಥಿಗಳನ್ನು ಹೈದರಾಬಾದ್ ಪೊಲೀಸರು ಂಧಿಸುತ್ತಿರುವ ದೃಶ್ಯಗಳು ಬಿತ್ತರಗೊಳ್ಳುತ್ತಿವೆ.

ಎಲ್ಲರಿಗೂ ಗೊತ್ತಿರುವಂತೆ ಇವತ್ತು ಮೋದಿಯ ದುಷ್ಟ ರ್ಕಾರದ ವಿರುದ್ಧ ಗಟ್ಟಿಯಾಗಿ ನಿಂತಿರುವುದು ೈದರಾಬಾದ್ ಸೆಂಟ್ರಲ್ ವಿವಿ ಮತ್ತು ದೆಹಲಿಯ ಎನ್‌ಯು ವಿದ್ಯಾರ್ಥಿಗಳು. ಈಗ ಮಹಾರಾಷ್ಟ್ರ, ಉತ್ತರ ದೇಶ ಮತ್ತು ಪಂಜಾಬಿನ ಹಲವಾರು ವಿದ್ಯಾರ್ಥಿ ಘಟನೆಗಳೂ ಈ ವಿವಿಗಳ ವಿದ್ಯಾರ್ಥಿಗಳ ಜೊತೆ ಗೂಡಿಸಿವೆ. ಇವತ್ತು ಇತರೆ ಸಮುದಾಯಗಳು ಮತ್ತು ಘಟನೆಗಳು ತೆಪ್ಪಗಿರುವಾಗ ಈ ವಿದ್ಯಾರ್ಥಿಗಳೇ ಯಾಕೆ ೋದಿ ಮತ್ತು ಸಂಘಪರಿವಾರದ ವಿರುದ್ಧ ನಿಂತಿವೆ ಬುದು ಕುತೂಹಲಕರವಾಗಿದೆ ಮಾತ್ರವಲ್ಲ, ಇದು ೇಗೆ ಸಾಧ್ಯವಾಯಿತು ಎಂಬುದೂ ಅಚ್ಚರಿ ೂಡಿಸುವಂತಿವೆ. ಅಜಾಜ್ ಅಶ್ರಫ್, ಕಾಂಚಾ ಇಲ್ಲಯ್ಯ ತ್ತು ಸಾಕೀಬ್ ಸಲೀಂ - ಈ ಮೂವರು ಬರೆದಿರುವ ವಿಧ ಲೇಖನಗಳನ್ನು ಇಲ್ಲಿ ಮಿಶ್ರಣ ಮಾಡಿ ನಿಮಗೆ ಪ್ಪಿಸುತ್ತಿದ್ದೇನೆ.

ಕಾಂಚಾ ಇಲ್ಲಯ್ಯ ಅವರು ಒಸ್ಮಾನಿಯಾ ಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗಲೇ ಜೆಎನ್‌ಯು ರಬೇಕೆಂಬ ಆಸೆ ಇತ್ತಂತೆ. ಯಾಕೆಂದರೆ ಆಗ - 70, ರ ದಶಕದಲ್ಲಿ - ಪರಿಶಿಷ್ಟ ಸಮುದಾಯಗಳ ಓದುಬರಹ ತ ಮೊದಲನೆ ತಲೆಮಾರಿಗೆ ಜೆಎನ್‌ಯು ಎಂಬುದು ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿವಿಗಳಿಗೆ ಸಮಾನವಾಗಿತ್ತು. ುನ್ನತ ಶಿಕ್ಷಣವನ್ನು ವಿದೇಶದಲ್ಲಿ ಪಡೆಯುವ ಆರ್ಥಿಕ ಕತ್ತು ನಮಗಿರಲಿಲ್ಲ, ದೆಹಲಿಗೂ ನಾವು ಕಷ್ಟಪಟ್ಟೆ ರಬೇಕಿತ್ತು. ಆದಕ್ಕಿಂತಲೂ ಮುಖ್ಯವಾಗಿ ಆಗ ಎನ್‌ಯುನಲ್ಲಿ ಸಮಾಜ ವಿಜ್ಞಾನ ವಿಭಾಗದಲ್ಲಿ ಪ್ರಖ್ಯಾತ ಧ್ಯಾಪಕರಿದ್ದರು. ರಶೀದುದ್ದೀನ್ ಖಾನ್, ಕೆ.ಶೇಷಾದ್ರಿ, ್.ಗೋಪಾಲ್, ಬಿಪಿನ್ ಚಂದ್ರ ಮತ್ತು ರೋಮಿಲಾ ಪರ್ ಥರದವರು ಆಗ ಅಲ್ಲಿ ಪಾಠ ಮಾಡುತ್ತಿದ್ದರು. ತ್ತು ಬಲಪಂಥೀಯರು ಬನಾರಸ್ ಹಿಂದೂ ವಿವಿಯನ್ನು ೊಗಳುತ್ತಿದ್ದಾರೆ. ಆದರೆ ಸತ್ಯವಾಗಲೂ ಆ ವಿವಿಯಿಂದ ಾವುದೇ ಮಹತ್ತರವಾದ ವಿಶ್ವಾಸಯೋಗ್ಯ ಕೆಲಸ ನಡೆದಿಲ್ಲ, ್ಲಿ ಓದಿದ ಪ್ರಮುಖ ದಲಿತ ವಿದ್ಯಾರ್ಥಿ ಬಾಬು ಗಜೀವನ್ ರಾಮ್ ಮಾತ್ರ. ಅವರು ಕೂಡ ಅಲ್ಲಿನ ತಿ ತಾರತಮ್ಯವನ್ನು ಸಹಿಸಲಾಗದೆ, ಕೊಲ್ಕತ್ತ ವಿವಿಗೆ ೋಗಿ ಅಲ್ಲಿ ತಮ್ಮ ಪದವಿಯನ್ನು ಪಡೆಯಬೇಕಾಯಿತು" ನ್ನುತ್ತಾರೆ ಇಲ್ಲಯ್ಯ.

ಕಳೆದ ನಲವತ್ತು ವರ್ಷಗಳಲ್ಲಿ ಹೈದರಾಬಾದ್ ಕೇಂದ್ರ ವಿ ಮತ್ತು ಜೆಎನ್‌ಯುಗಳಿಂದ ಪ್ರಖ್ಯಾತ ದಲಿತ ಚಿಂತಕರು ೊರಬಂದಿದ್ದಾರೆ. ಸುಖದಿಯೋ ಥೋರಟ್, ಗೋಪಾಲ್ ರು ಮತ್ತು ವಿವೇಕ್ ಕುಮಾರ್ ಅವರು ಜೆಎನ್‌ಯುನಲ್ಲಿ ಿದರೆ, ಎನ್.ಸುಕುಮಾರ್, ಪಿ.ಕೇಶವ ಕುಮಾರ್ ಮತ್ತು ಂಥ್ಯ ಭುಕ್ಯ ತರಹದ ಚಿಂತಕರನ್ನು ಎಚ್‌ಸಿಯು ರೂಪಿಸಿದೆ ನ್ನುತ್ತಾರೆ ಇಲ್ಲಯ್ಯ. "ಓದಿರುವ ಮತ್ತು ಚಿಂತಿಸುವ ಲಿತ ವಿದ್ಯಾರ್ಥಿಗಳಿಗೆ ಸಹಜವಾಗಿಯೇ ಎಡಪಂಥೀಯ ಂತನೆ ಮತ್ತು ಅಂಬೇಡ್ಕರ್ ವಾದ ಇಷ್ಟವಾಗುತ್ತದೆ. ವರಿಗೆ ಎಂದಿಗೂ ಸಾವರ್ಕರ್ ಅಥವಾ ಗೋಲ್ವಾಲ್ಕರ್ ವರ ಸಿದ್ಧಾಂತಗಳು ಪಥ್ಯವಾಗುವುದಿಲ್ಲ, ಮಾರ್ಕ್ಸ್ ಮತ್ತು ಂಬೇಡ್ಕರ್ ಅವರನ್ನು ಓದುವ ವಿದ್ಯಾರ್ಥಿಗಳು ಲಪಂಥೀಯರು ಪ್ರೋಷಿಸುವ ಜಾತಿ ತಾರತಮ್ಯ ಮತ್ತು ಕೇಂದ್ರೀಕೃತ ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ, ವಿರೋಧಿಸುತ್ತಾರೆ. ದನ್ನು ಸಂಘಪರಿವಾರಕ್ಕೆ ಸಹಿಸಲಾಗುವುದಿಲ್ಲ" ಎಂದೂ ಲ್ಲಯ್ಯ ಹೇಳುತ್ತಾರೆ.

ಅಜಾಜ್ ಅಶ್ರಫ್ ಅವರು ಹತ್ತು ವರ್ಷಗಳ ಹಿಂದೆ ಂದ್ರ ಸರ್ಕಾರ ಈ ವಿವಿಗಳ ಪ್ರವೇಶಾತಿ ಮೀಸಲಾತಿ ಕ್ರಿಯೆಯನ್ನು ಬದಲಾಯಿಸಿದ್ದೇ ಇವತ್ತಿನ ಪ್ರತಿರೋಧವನ್ನು ಸಾಧ್ಯವಾಗಿಸಿದೆ ಎನ್ನುತ್ತಾರೆ. ಅವರ ಲೇಖನದ ಮುಖ್ಯಾಂಶಗಳು ಹೀಗಿವೆ:

ಈ ಹಿಂದೆ ವಿದ್ಯಾರ್ಥಿಗಳು ಹಲವಾರು ಚಳವಳಿಗಳಲ್ಲಿ ಭಾಗಿಯಾಗಿದ್ದರು. 1975ರಲ್ಲಿ ಇಂದಿರಾ ಗಾಂಧಿ ಹೇರಿದ್ದ ತುರ್ತುಪರಿಸ್ಥಿತಿ ವಿರುದ್ಧದ ಹೋರಾಟದಲ್ಲೂ ವಿದ್ಯಾರ್ಥಿಗಳು ಪ್ರಮುಖ ಪಾತ್ರ ವಹಿಸಿದ್ದರು. ಅದಕ್ಕೂ ಮುನ್ನ ಕೆಂಪು ಕ್ರಾಂತಿಯನ್ನು ಬಯಸಿ ಹಲವಾರು ವಿದ್ಯಾರ್ಥಿಗಳು ಭೂಗತರಾಗಿದ್ದರು ಕೂಡ. ಹಾಗೆಯೇ 1990ರಲ್ಲಿ ಮೀಸಲಾತಿ ವಿರೋಧಿ ಹೋರಾಟದಲ್ಲೂ ವಿದ್ಯಾರ್ಥಿಗಳು ಇದ್ದರು. ಆದರೆ ಈಗ ಆಗುತ್ತಿರುವ ವಿದ್ಯಮಾನಗಳು ಅದಕ್ಕಿಂತ ಭಿನ್ನ. ಯಾಕೆಂದರೆ ಆಗ ಯಾವ ಮೀಸಲಾತಿಯನ್ನು ವಿರೋಧಿಸಿ ಮೇಲುಜಾತಿಯ ವಿದ್ಯಾರ್ಥಿಗಳು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ನೋಡಿದ್ದರೋ ಈಗ ಅವರ ವಿರುದ್ಧ ಜಾತಿ ಮತ್ತು ವರ್ಗದ ಕಾರಣಕ್ಕೆ ಅಂಚಿಗೆ ತಳ್ಳಲ್ಪಟ್ಟಿದ್ದ ವಿದ್ಯಾರ್ಥಿಗಳು ಪ್ರತಿರೋಧ ವ್ಯಕ್ತಪಡಿಸುತ್ತಿದ್ದಾರೆ, ತಮ್ಮ ಹಕ್ಕುಗಳಿಗಾಗಿ ಒತ್ತಾಯಿಸುತ್ತಿದ್ದಾರೆ, ಮೇಲು ಜಾತಿಯವರನ್ನು ಪ್ರಶ್ನಿಸುತ್ತಿದ್ದಾರೆ.

2006ರಲ್ಲಿ ಕೇಂದ್ರ ಸರ್ಕಾರವು ತಾನು ಧನಸಹಾಯ ಮಾಡುವ ಕೇಂದ್ರ ವಿವಿಗಳಲ್ಲಿ ಪರಿಶಿಷ್ಟ ಸಮುದಾಯಗಳಿಗೆ ಇದ್ದ 22.5 % ಮೀಸಲಾತಿಯೊಂದಿಗೆ ಇತರೆ ಹಿಂದುಳಿದ ವರ್ಗಗಳಿಗೆ 27 % ಮೀಸಲಾತಿಯನ್ನು ನೀಡಿತು. ಇದರಿಂದಾಗಿ ಒಟ್ಟು ಮೀಸಲು ಸೀಟುಗಳು 49.5 %



ಆಯಿತು. ಇದರಿಂದಾಗಿ ಇಂತಹ ವಿವಿಗಳಲ್ಲಿ ಇದ್ದ ಮೇಲು ಜಾತಿಯವರ ಪ್ರಮಾಣ ಕಡಿಮೆ ಆಯಿತಲ್ಲದೆ, ಪರಿಶಿಷ್ಟ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮೆರಿಟ್ ಮೇಲೂ ಪ್ರವೇಶ ಪಡೆದಿದ್ದರಿಂದ ಅವರ ಸಂಖ್ಯೆ ಶೇ. 50ಕ್ಕಿಂತ ಹೆಚ್ಚಾಯಿತು. ಉದಾಹರಣೆಗೆ ಎಚ್‌ಸಿಯುನಲ್ಲಿ 2008-09ರಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ವಿದ್ಯಾರ್ಥಿಗಳು ಶೇ. 41.4 ಇದ್ದರೆ, 2013-14ರಲ್ಲಿ ಅದು ಶೇ. 58.9ಕ್ಕೆ ಏರಿತು. ಹಾಗೆಯೇ ಜೆಎನ್‌ಯುನಲ್ಲಿ 2013-14ರಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ವಿದ್ಯಾರ್ಥಿಗಳ ಪ್ರಮಾಣ ಶೇ. 47.4 ಇತ್ತು, ಆದರೆ, ಮಾರನೆ ವರ್ಷ ಅದು ಶೇ. 51.4ಕ್ಕೆ ಏರಿತು. ಅಷ್ಟೇ ಅಲ್ಲ, 2013-14ರಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ಸಮುದಾಯಗಳ ಬರೋಬ್ಬರಿ 249 ವಿದ್ಯಾರ್ಥಿಗಳು ಮೆರಿಟ್ ಆಧಾರದ ಮೇಲೆ ಪ್ರವೇಶ ಪಡೆದಿದ್ದರು.

ಜೆಎನ್‌ಯು ತನ್ನ ಪ್ರವೇಶಾತಿ ನೀತಿಯಲ್ಲಿ 'ಆದ್ಯತೆ ಅಂಕ' ಎಂಬ ಪದ್ಧತಿಯನ್ನು ಪಾಲಿಸುತ್ತದೆ. ಆದರಡಿ ನಗರದಲ್ಲಿ ಓದಿರುವ ಓರ್ವ ಓಬಿಸಿ ಯುವಕನಿಗಿಂತ ಹಿಂದುಳಿದ ಪ್ರದೇಶದಲ್ಲಿ ಓದಿರುವ ಓರ್ವ ಓಬಿಸಿ ಯುವತಿಗೆ ಆದ್ಯತೆ ಸಿಗುತ್ತದೆ. ಹಾಗೆಯೇ ನಗರದಲ್ಲಿ ಓದಿರುವ ಮೇಲುಜಾತಿಯ ಯುವಕನ ಬದಲಾಗಿ ಹಿಂದುಳಿದ ಪ್ರದೇಶದಿಂದ ಬಂದ ಅದೇ ಜಾತಿಯ ಯುವಕನಿಗೆ ಆದ್ಯತೆ ನೀಡಲಾಗುತ್ತದೆ. ಈ ಕಾರಣಕ್ಕಾಗಿಯೇ ಇವತ್ತು ಜೆಎನ್‌ಯುನಲ್ಲಿ ಒಬ್ಬ ಕನ್ಹಯ್ಯ ಕುಮಾರ್ ತರಹದ ವಿದ್ಯಾರ್ಥಿ ಸಿಗುವುದು ಸಾಧ್ಯವಾಗಿದೆ.

ಅಲಹಾಬಾದ್ ವಿವಿಯಲ್ಲೂ 2013-14ರಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ವಿದ್ಯಾರ್ಥಿಗಳ ಪ್ರಮಾಣ ಶೇ. 54.2 ಇತ್ತು. ಜೆಎನ್‌ಯುನಲ್ಲಿ ಶೇ. 60 ವಿದ್ಯಾರ್ಥಿನಿಯರಿದ್ದರೆ, ಅಲಹಾಬಾದ್ ವಿವಿಯಲ್ಲಿ ಓದುತ್ತಿರುವ ಮಹಿಳೆಯರ ಪ್ರಮಾಣ ಶೇ 31.6.

ಹೀಗೆ ಹಿಂದುಳಿದ ಜಾತಿ, ವರ್ಗ ಮತ್ತು ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳು, ಅಲ್ಪಸಂಖ್ಯಾತ ಸಮುದಾಯಗಳಿಂದ ಬರುವ ಯುವಕರು ಮತ್ತು ಲಿಂಗತಾರತಮ್ಯಕ್ಕೆ ಗುರಿಯಾಗಿರುವ ವಿದ್ಯಾರ್ಥಿನಿಯರು ದುಷ್ಟ ಸರ್ಕಾರಗಳು ರೈತರ, ಆದಿವಾಸಿಗಳ, ಮಹಿಳೆಯರ ಮತ್ತು ಶೋಷಿತ ಸಮುದಾಯಗಳ ವಿರುದ್ಧ ಮಾಡುವ ದಮನವನ್ನು ಸಹಜವಾಗಿಯೇ ವಿರೋಧಿಸುತ್ತಾರೆ. ಯಾಕೆಂದರೆ ಈ ವಿದ್ಯಾರ್ಥಿಗಳು ಜಾತಿ-ವರ್ಗ ಶೋಷಣೆಯನ್ನು ಮತ್ತು ಬಡತನವನ್ನು ಅನುಭವಿಸಿರುವವರೇ ಆಗಿದ್ದಾರೆ. ಆ ಕಾರಣಕ್ಕೆ ಅವರು ಸುಲಭವಾಗಿ ಮಾರ್ಕ್ಸ್ ಮತ್ತು ಅಂಬೇಡ್ಕರ್, ಜ್ಯೋತಿಬಾ ಫುಲೆ ಮತ್ತು ಲೆನಿನ್ ಅವರುಗಳ ಸಿದ್ಧಾಂತವನ್ನು ಮಂಡಿಸುತ್ತಾರೆ. ಹಾಗೆಯೇ ಕಾಶ್ಮೀರವಾಗಲಿ ಅಥವಾ ಛತ್ತೀಸಗಢವಾಗಲಿ, ಎಲ್ಲೇ ಆದರೂ ಮಾನವ ಹಕ್ಕುಗಳಿಗಾಗಿ ತಮ್ಮ ದನಿಗೂಡಿಸುತ್ತಾರೆ. ಅಷ್ಟು ಮಾತ್ರವಲ್ಲ ಎಚ್‌ಸಿಯುನಲ್ಲಿ ದನ ಮತ್ತು ಹಂದಿ ಮಾಂಸ ತಿನ್ನುತ್ತಾರೆ, ಜೆಎನ್‌ಯುನಲ್ಲಿ ಮಹಿಷಾಸುರ ದಿನವನ್ನು ಆಚರಿಸುತ್ತಾರೆ.

ಈ ಹಿಂದೆ ವಿವಿಗಳಲ್ಲಿ ದಲಿತ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಾಗ ಪ್ರತಿಭಟನೆಗಳು ನಡೆದಿದ್ದವು. ಆದರೆ ಆಗ ದಲಿತ ಮತ್ತು ಓಬಿಸಿ ವಿದ್ಯಾರ್ಥಿಗಳ ಸಂಖ್ಯೆ ಅಷ್ಟು ದೊಡ್ಡದಾಗಿರಲಿಲ್ಲವಾದ್ದರಿಂದ ಅವರ ದನಿ ಹೊರ ಜಗತ್ತಿಗೆ ಕೇಳಿಸಿರಲಿಲ್ಲ, ಆದರೀಗ ದಲಿತ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಂಖ್ಯಾಬಲ ಹೆಚ್ಚಾಗಿರುವುದರಿಂದ ಅವರು ಒಗ್ಗಟ್ಟಾಗಿ ಹೋರಾಡುವುದು ಸುಲಭವಾಗಿದೆ. ಆ ಕಾರಣಕ್ಕೇ ಎಬಿವಿಪಿಯ ನಾಯಕ ತಮ್ಮ ಸಂಘಟನೆಯನ್ನು ವಿನಾಕಾರಣ ಟೀಕಿಸಿದಾಗ ರೋಹಿತ್ ವೇಮುಲ ಮತ್ತು ಆತನ ಮಿತ್ರರಿಗೆ ಆತನನ್ನು ಪ್ರಶ್ನಿಸುವ ಗಟ್ಟಿತನ ಸಿಕ್ಕಿದ್ದು. ಈಗಲೂ ಎಚ್‌ಸಿಯು ವಿದ್ಯಾರ್ಥಿಗಳು ತಮ್ಮ ಹೋರಾಟವನ್ನು ಮುಂದುವರೆಸುತ್ತಿರುವುದಕ್ಕೆ ಅವರ ನೈತಿಕ ಪ್ರಜ್ಞೆ, ನ್ಯಾಯಕ್ಕಾಗಿ ಒತ್ತಾಯ ಮತ್ತು ಅವರ ಹಿನ್ನೆಲೆಯೂ ಪ್ರಮುಖ ಪ್ರೇರಣೆ ಆಗಿದೆ.

ಎಡ ಪಂಥೀಯ ಮತ್ತು ಅಂಬೇಡ್ಕರ್ ಪ್ರಭಾವಕ್ಕೆ ಒಳಗಾಗುವ ವಿದ್ಯಾರ್ಥಿಗಳು ಸಂಘಪರಿವಾರದ ಹಿಂದೂ ಧರ್ಮದ ಕಲ್ಪನೆಯನ್ನು ವಿರೋಧಿಸುತ್ತಾರೆ ಮಾತ್ರವಲ್ಲ, ಅವರು ಅದನ್ನು ಕಟುವಾಗಿ ಟೀಕಿಸುತ್ತಾರೆ. "ಆದಿವಾಸಿಗಳನ್ನು, ಹಿಂದುಳಿದವರನ್ನು, ದಲಿತರನ್ನು ಕೊಂದ ದೇವಾನುದೇವತೆಗಳನ್ನು ನಾವು ಪೂಜಿಸುವುದಿಲ್ಲ, ನೀವು ನಿಮ್ಮ ಮತಗ್ರಂಥಗಳಲ್ಲಿ ನಮ್ಮ ಹೀರೋಗಳನ್ನು ವಿಲನ್‌ಗಳಂತೆ ಚಿತ್ರಿಸಿದ್ದೀರಿ. ಆದರೆ ನಾವು ಅವರನ್ನೆಲ್ಲ ನಿಮ್ಮ ಬ್ರಾಹ್ಮಣ ಗ್ರಂಥಗಳಿಂದ ಹೊರತಂದು ಮತ್ತೆ ಅವರನ್ನು ನಮ್ಮ ಹೀರೋಗಳಾಗಿ ಪ್ರತಿಷ್ಠಾಪಿಸುತ್ತೇವೆ" ಎಂದು ಗುಡುಗುತ್ತಾರೆ.

ಅವರ ಈ ಸಾಂಸ್ಕೃತಿಕ ಪ್ರತಿರೋಧ ಮೋದಿ ಸರ್ಕಾರ ಅಧಿಕಾರಕ್ಕೆ ಬಂದನಂತರ ಶುರುವಾದದ್ದೇನಲ್ಲ, ಈ ಹಿಂದೆಯೂ ಅವರು ಹೀಗೆ ಮಾತಾಡುತ್ತಿದ್ದರು. ಆದರೆ ಹಿಂದಿನ ಯುಪಿಎ ಸರ್ಕಾರ "ವಿದ್ಯಾರ್ಥಿಗಳು ವಿದ್ಯಾರ್ಥಿಗಳಂತೆ ಮಾತನಾಡುತ್ತಾರೆ ಬಿಡಿ" ಎಂದು ಸುಮ್ಮನಾಗುತ್ತಿತ್ತು. ಆದರೆ ಗುಣವಿಶೇಷತೆಯಲ್ಲಿ ಮತ್ತು ನೆಲೆಯಲ್ಲಿ ಸಂಘಪರಿವಾರ ಸಾಂಪ್ರದಾಯಿಕವಾಗಿ ಮೇಲುಜಾತಿ ಆಗಿರುವುದರಿಂದ, ಹಿಂದುಳಿದ ಮತ್ತು ದಲಿತ ಸಮುದಾಯಗಳ ವಿದ್ಯಾರ್ಥಿಗಳ ಇಂತಹ ವಿರುದ್ಧತೆಯನ್ನು ಅದರಿಂದ ಸಹಿಸಿಕೊಳ್ಳಲಾಗುವುದಿಲ್ಲ, ಯಾಕೆಂದರೆ ಅವರ ಇಂತಹ ಮಾತುಗಳು ಅವರ ದೃಷ್ಟಿಕೋನವನ್ನೇ ಪ್ರಶ್ನಿಸುತ್ತದೆ. ಆದ್ದರಿಂದಲೇ ಅದನ್ನು ಅವರು ಬಲವಾಗಿ ದಮನ ಮಾಡಲು ಯತ್ನಿಸುತ್ತಾರೆ. ಸಂಘಪರಿವಾರದ ಮುಖವಾಣಿ 'ಪಾಂಚಜನ್ಯ' ತನ್ನ ಒಂದು ಸಂಚಿಕೆಯನ್ನು ಜೆಎನ್‌ಯುಗೆ ಮೀಸಲಿಟ್ಟು ಅದರಲ್ಲಿ 'ಜೆಎನ್‌ಯು: ವಿಭಜನೆಕಾರರ ಗುಹೆ' ಎಂದು ಕರೆದಿತ್ತು. ಅಷ್ಟೇ ಅಲ್ಲ, ವಿದ್ಯಾರ್ಥಿಗಳ ಬಾಯಿ ಮುಚ್ಚಿಸಲು ಅವರನ್ನು ಬೆದರಿಸುತ್ತಾರೆ, ದೇಶದ್ರೋಹಿಗಳೆಂದು ಹಣೆಪಟ್ಟಿ ಕಟ್ಟುತ್ತಾರೆ. ಸಂಘಪರಿವಾರ ಅರ್ಥಮಾಡಿಕೊಳ್ಳಬೇಕಾದ ಅಂಶ ಯಾವುದೆಂದರೆ ಸಮಾಜದ ವಿವಿಧ ಸಮುದಾಯಗಳಲ್ಲಿ ಆಗುತ್ತಿರುವ ಸಂಘರ್ಷವೇ ವಿವಿಯ ಕ್ಯಾಂಪಸ್‌ಗಳಲ್ಲಿ ವ್ಯಕ್ತವಾಗುತ್ತಿದೆ ಎಂಬುದನ್ನು.

ಕಾಂಚಾ ಇಲ್ಲಯ್ಯ ಅವರು "ಬಿಜೆಪಿ ಇಂತಹ ವಿವಿಗಳನ್ನು ಎಡಪಂಥೀಯರನ್ನು ಹುಟ್ಟುಹಾಕುವ ಸ್ಥಳಗಳು ಎಂದು ಬಣ್ಣಿಸುತ್ತದೆ. ಆದರೆ ಕೆಲ ಜಾತಿಗಳಿಂದ, ಅದರಲ್ಲೂ ಅಸ್ಪೃಶ್ಯ ಸಮುದಾಯಗಳಿಂದ, ಬುದ್ಧಿಜೀವಿಗಳು ಜನ್ಮವೆತ್ತುವುದು ಸಂಘಪರಿವಾರಕ್ಕೆ ಇಷ್ಟವಿಲ್ಲ, ಅದಕ್ಕೆ ಅದು ಮೀಸಲಾತಿಯನ್ನು ವಿರೋಧಿಸುತ್ತದೆ. ನಾನು ಮೇಲೆ ಹೆಸರಿಸಿದ ಬಹುತೇಕ ದಲಿತ ಚಿಂತಕರು ರೂಪಗೊಂಡಿದ್ದೇ ವಿವಿಗಳಲ್ಲಿ ಮೀಸಲಾತಿ ಇದ್ದಿದ್ದರಿಂದ" ಎನ್ನುತ್ತಾರೆ.

ಜೆಎನ್‌ಯುನಲ್ಲಿ ಪ್ರಾಧ್ಯಾಪಕರಾಗಿರುವ ಸಾಕೀಬ್ ಸಲೀಂ ಅವರು ಇನ್ನೊಂದು ಮುಖ್ಯ ಅಂಶವನ್ನು ಮಂಡಿಸುತ್ತಾರೆ. ಅದೇನೆಂದರೆ "ಇವತ್ತು ಜೆಎನ್‌ಯು ಮತ್ತು ಹೈದರಾಬಾದ್ ವಿವಿಗಳ ವಿದ್ಯಾರ್ಥಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ತೀವ್ರವಾಗಿ ವಿರೋಧಿಸುತ್ತಿರುವವರಲ್ಲಿ ಹೆಚ್ಚಿನವರು ಖಾಸಗಿ ಕಾಲೇಜುಗಳಿಂದ ಇಂಜಿನಿಯರಿಂಗ್ ಅಥವಾ ಮ್ಯಾನೇಜ್‌ಮೆಂಟ್ ಪದವಿ ಪಡೆದಿರುವವರು. ಅವರ ಪ್ರಕಾರ ಸಮಾಜ ವಿಜ್ಞಾನಗಳಂತಹ ವಿಷಯಗಳನ್ನು ಹೇಳಿಕೊಡಲು ಸರ್ಕಾರ ಇಂತಹ ವಿವಿಗಳಿಗೆ ಧನಸಹಾಯ ಮಾಡಕೂಡದು; ಇಂತಹ ವಿಜ್ಞಾನಗಳಿಂದ ದೇಶ ಉದ್ಧಾರ ಆಗುವುದಿಲ್ಲ, ಬದಲಾಗಿ ಅವರ ಪ್ರಕಾರ ತಾಂತ್ರಿಕ ಶಿಕ್ಷಣಕ್ಕೆ ಸರ್ಕಾರ ಒತ್ತು ಕೊಡಬೇಕು. ಆದರೆ ಒಂದು ನಾಗರಿಕ ಸಮಾಜವನ್ನು ಕಟ್ಟಿ ಬೆಳೆಸಲು ಸಮಾಜ ವಿಜ್ಞಾನ ಮುಖ್ಯ ಎಂಬ ಅಂಶ ಅವರಿಗೆ ಅರ್ಥವೇ ಆಗುವುದಿಲ್ಲ. ರಾಮಾಯಣ, ಮಹಾಭಾರತ, ಗೀತೆ ಮತ್ತು ಕಾಮಸೂತ್ರವನ್ನು ಬರೆದವರು ತಾಂತ್ರಿಕತೆಯಲ್ಲಿ ಪರಿಣತಿ ಪಡೆದವರಾಗಿದ್ದರೇ? ಹೋಗಲಿ, ಬುದ್ಧ, ಗಾಂಧಿ, ಮಾರ್ಕ್ಸ್, ಮೊಹಮ್ಮದ್ ಮತ್ತು ಏಸುಕ್ರಿಸ್ತ - ಇವರಲ್ಲಿ ಒಬ್ಬನಾದರೂ ತಂತ್ರಜ್ಞನನ್ನು ಅವರು ತೋರಿಸಲಿ ನೋಡುವ" ಎಂದು ಸವಾಲು ಹಾಕುತ್ತಾರೆ.


ಹಾಗೆಯೇ ಅಜಾಜ್ ಅಶ್ರಫ್ ಅವರು ಇವತ್ತು ಕೇಂದ್ರ ವಿವಿಗಳಲ್ಲಿ ನಡೆಯುತ್ತಿರುವ ಸಾಮಾಜಿಕ ಕ್ಷೋಭೆ ಖಾಸಗಿ ವಿವಿಗಳಲ್ಲಿ ನಡೆಯದೆ ಇರುವುದರತ್ತ ಗಮನ ಹರಿಸುತ್ತಾರೆ. 2001ರಿಂದ 2010ರ ತನಕ ಖಾಸಗಿ ವಿಶ್ವವಿದ್ಯಾಲಯಗಳ ಸಂಖ್ಯೆ 254ರಿಂದ 544ಕ್ಕೆ ಏರಿದೆ. 2006ರಲ್ಲಿ ಕೇಂದ್ರ ವಿವಿಗಳ ಪ್ರವೇಶಾತಿ ನಿಯಮವನ್ನು ಬದಲಾಯಿಸುವ ತನಕ ಅಲ್ಲಿ ಮೇಲುಜಾತಿಯ ವಿದ್ಯಾರ್ಥಿಗಳೇ ಅಧಿಕ ಸಂಖ್ಯೆಯಲ್ಲಿದ್ದರು. ಆದರೆ ಅದು ಬದಲಾದ ನಂತರ ಅವರೆಲ್ಲ ಖಾಸಗಿ ವಿವಿಗಳ ಮೊರೆಹೋಗಬೇಕಾಯಿತು. ಆ ಖಾಸಗಿ ವಿವಿಗಳಲ್ಲಿ ಅವರು ದುಪ್ಪಟ್ಟು ಫೀಸುಗಳನ್ನು ತೆತ್ತಬೇಕಾಗಿದೆ. ಮೀಸಲಾತಿಯಿಂದಾಗಿಯೇ ತಾವು ಇಂತಹ ಸ್ಥಿತಿಗೆ ದೂಡಲ್ಪಟ್ಟಿದ್ದೇವೆ ಎಂದೇ ನಂಬಿರುವ ಆ ವಿದ್ಯಾರ್ಥಿಗಳು ಮತ್ತು ಅಂತಹ ಮೇಲುಜಾತಿಗಳಿಂದಲೇ ಉದಯಿಸಿರುವ ಟಿವಿ ಆ್ಯಂಕರ್‌ಗಳು ಕೇಂದ್ರ ವಿವಿಗಳ ಪರ ದನಿ ಎತ್ತುವುದಿರಲಿ, ಅವರು ರಿಯಾಯಿತಿ ದರದಲ್ಲಿ ಶಿಕ್ಷಣ ಪಡೆಯುತ್ತಿರುವ ಯುವಜನತೆ ಬಾಯಿ ಮುಚ್ಚಿಕೊಂಡಿರಬೇಕು ಎಂದೇ ವಾದಿಸುತ್ತಾರೆ ಎಂದು ಅಶ್ರಫ್ ಹೇಳುತ್ತಾರೆ.

ಇವೆಲ್ಲಕ್ಕಿಂತ ಮಿಗಿಲಾಗಿ ಕಾಂಚಾ ಇಲ್ಲಯ್ಯ ಅವರ ಎಚ್ಚರಿಕೆಯನ್ನು ನಾವೆಲ್ಲರೂ ಗಂಭೀರವಾಗಿ ತೆಗೆದುಕೊಳ್ಳಬೇಕಿದೆ. ಅವರು ಹೇಳುವಂತೆ ಬಿಜೆಪಿ ಮೀಸಲಾತಿ ವಿರೋಧಿ. ಆದರೆ ವೋಟ್ ರಾಜಕಾರಣದಿಂದಾಗಿ ಹಾಗೆ ಬಹಿರಂಗವಾಗಿ ಮೀಸಲಾತಿಯನ್ನು ವಿರೋಧಿಸುವಂತಿಲ್ಲ, ಆ ಕಾರಣಕ್ಕೆ ದೇಶದ್ರೋಹಿಗಳು, ಅರಾಜಕತೆ ಇತ್ಯಾದಿ ನೆಪಗಳನ್ನು ನೀಡಿ ಇಂತಹ ವಿವಿಗಳನ್ನು ಮುಚ್ಚಲು ಹುನ್ನಾರ ನಡೆಸಿದ್ದಾರೆ ಇಲ್ಲದಿದ್ದರೆ ಇಂತಹ ವಿವಿಗಳನ್ನೂ ಬನಾರಸ್ ಹಿಂದೂ ವಿಶ್ವವಿದ್ಯಾಲಯಗಳ ಮಟ್ಟಕ್ಕೆ ಇಳಿಸುತ್ತಾರೆ. ಕೊನೆಗೆ ಇವುಗಳನ್ನು ಮುಚ್ಚಿ ಖಾಸಗಿ ವಲಯಕ್ಕೆ ಹಸ್ತಾಂತರಿಸುತ್ತಾರೆ. ಆ ಖಾಸಗಿ ವಿವಿಗಳು ಜಾಹೀರಾತುಗಳನ್ನು ನೀಡಿ ಶಿಕ್ಷಣವನ್ನು ಮಾರಾಟದ ಸರಕಾಗಿಸುತ್ತವೆ. ಆಗ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ಸಮುದಾಯಗಳು ಅತಿಹೆಚ್ಚು ನಷ್ಟವನ್ನು ಎದುರಿಸಬೇಕಾಗುತ್ತದೆ. ಮೀಸಲಾತಿಯನ್ನು ಬಹಿರಂಗವಾಗಿ ವಿರೋಧಿಸದೇ ತಲ ಸಮುದಾಯಗಳಿಂದ ಯೋಚಿಸುವ, ಚಿಂತಿಸುವ ಬುದ್ಧಿಜೀವಿಗಳು ಉದಯಿಸದಂತೆ ನೋಡಿಕೊಳ್ಳುವುದು ಸಂಘಪರಿವಾರದ ಕುತಂತ್ರವಾಗಿದೆ. ಇದನ್ನು ಎಡಪಂಥೀಯರು ಮತ್ತು ದಲಿತ-ಬಹುಜನರು ಅರ್ಥಮಾಡಿಕೊಂಡು ತೀವ್ರವಾಗಿ ವಿರೋಧಿಸಬೇಕಿದೆ ಎನ್ನುತ್ತಾರೆ ಕಾಂಚಾ ಇಲ್ಲಯ್ಯ.

ರೋಹಿತ್ ವೇಮುಲ ಅಪಾರ ಪ್ರತಿಭೆಯನ್ನು ಹೊಂದಿದ್ದ. ಕನ್ಹಯ್ಯ ಕುಮಾರನ ವಾಕ್ಚಾತುರ್ಯ ತನ್ನಿಂತಾನೆ ಬಂದದ್ದಲ್ಲ; ಅದು ಆತನ ಸ್ವಂತ ಅನುಭವ ಮತ್ತು ಓದಿನಿಂದ ಬಂದಿರುವಂಥದ್ದು. ಉಮರ್ ಖಾಲಿದ್ ಮತ್ತು ಅನಿರ್ಬನ ಎಂಬ ವಿದ್ಯಾರ್ಥಿಗಳ ಮಾತುಗಳನ್ನು ಕೇಳಿಸಿಕೊಂಡರೆ ಅವರ ಓದು ಮತ್ತು ಅರಿವಿನ ಆಳ ಎಂಥದ್ದು ಎಂದು ಅರ್ಥವಾಗುತ್ತಿದೆ. ಶೆಹ್ಲಾ ರಶೀದ್ ಎಂಬ ಗಟ್ಟಿಗಿತ್ತಿಯನ್ನು ರೂಪಿಸಿರುವುದೂ ಅದೇ ವಿಶ್ವವಿದ್ಯಾಲಯ. ಒಡಿಶಾದ ಅತಿ ಹಿಂದುಳಿದ ಜಿಲ್ಲೆಯಿಂದ ಬಂದಿರುವ ರಾಮಾ ನಾಗಾ ಎಂಬ ದಲಿತ ಯುವಕನಿಗೆ ಶಿಕ್ಷಣ ಸಾಧ್ಯವಾಗುತ್ತಿರುವುದು ಏಕೆಂದರೆ ಜೆಎನ್‌ಯು ಪ್ರತಿ ಸೆಮಿಸ್ಟರ್‌ಗೆ ವಿಧಿಸುವ ಶುಲ್ಕ ಕೇವಲ 250 ರೂಪಾಯಿಗಳಾಗಿರುವುದರಿಂದ. ಇನ್ನು ಊಟ ಬಟ್ಟೆ ಪುಸ್ತಕಗಳಿಗೆಂದು ಆತನಿಗೆ ನೆರವಾಗುವುದು ಫೆಲೋಶಿಪ್ ಹಣ. ಇಂತಹ ಪ್ರತಿಭೆಗಳನ್ನು ರೂಪಿಸುತ್ತಿರುವ ನಮ್ಮ ಶಿಕ್ಷಣಸಂಸ್ಥೆಗಳನ್ನು ಕಾಪಾಡಿಕೊಳ್ಳುವುದು ಮತ್ತು ಅವುಗಳಲ್ಲಿ ದಲಿತ ಮತ್ತು ಓಬಿಸಿ ವಿದ್ಯಾರ್ಥಿಗಳಿಗೆ ಅವಕಾಶ ಮುಂದುವರೆಯುವಂತೆ ಎಚ್ಚರ ವಹಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ. ■



ಮಂಡ್ಯ ಮನ್‌ಮುಲ್ ನೇಮಕಾತಿಯಲ್ಲಿ ಮುಕ್ಕುತ್ತಿರುವ ಡಿ-ಕಂಪನಿ



ರಾಮಕೃಷ್ಣ | ಬೋರೇಗೌಡ | ಕೆ.ರವಿ | ಬಿ.ಚಂದ್ರ

ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ (ಮನ್‌ಮುಲ್) ನಡೆಸುತ್ತಿರುವ 2016ರ ನೇಮಕಾತಿಯಲ್ಲಿ ಕುರುಡು ಕಾಂಚಾಣದ ನರ್ತನ ಶುರುವಾಗಿದೆ. 75 ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಈ ತಿಂಗಳಲ್ಲಿ ಆರಂಭವಾಗಲಿದ್ದು ಕನಿಷ್ಠವೆಂದರೂ 7ರಿಂದ 8 ಕೋಟಿಯಷ್ಟು ಲಂಚದ ಹಣ ಭ್ರಷ್ಟ ಅಧ್ಯಕ್ಷ, ನಿರ್ದೇಶಕರುಗಳ ಹಾಗೂ ಅಧಿಕಾರಿ ವರ್ಗದ ತಿಜೋರಿ ತುಂಬಲಿದೆ. ಕಳೆದ ವರ್ಷ ನಡೆದ 126 ಹುದ್ದೆಗಳ ನೇಮಕಾತಿಯಲ್ಲಿ 12 ಕೋಟಿಯಷ್ಟು ಹಣವನ್ನು ನುಂಗಿ ನೀರು ಕುಡಿದ ಮನ್‌ಮುಲ್ ಭ್ರಷ್ಟರಕೂಟ ಈ ಸಲವೂ ಮುಕ್ಕಲು ತಯಾರಾಗಿ ಕೂತಿದೆ.

ಡೀಲ್ ಕಂಪನಿ

ಮನ್‌ಮುಲ್‌ನಲ್ಲಿ ನಡೆಯುವ ನೇಮಕಾತಿ, ಖರೀದಿ, ಟೆಂಡರ್, ನೌಕರರ ವರ್ಗಾವಣೆ, ಕಾಮಗಾರಿ ಸೇರಿದಂತೆ ಎಲ್ಲದರಲ್ಲೂ ಮೂಗು ತೂರಿಸಿ ಕೈತುಂಬಾ ಬಾಚುವುದಕ್ಕೆಂದೇ ನಾಲ್ವರು ಭ್ರಷ್ಟರು ಸ್ಥಾಪಿಸಿಕೊಂಡಿರುವ ಡಿ-ಕಂಪನಿ (ಡೀಲ್ ಕಂಪನಿ) ತಲೆ ಎತ್ತಿರುವುದು ಹೊಸ ವಿಷಯವೇನೂ ಅಲ್ಲ. ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣ, ನಿರ್ದೇಶಕರಾದ ಡಾಲು ರವಿ, ಬೋರೇಗೌಡ, ಬಿಳಿದೇಗಲು ಚಂದ್ರೇ ಆ ಖತರ್‌ನಾಕ್ ಡೀಲ್‌ವಾಲಾಗಳು. ಈಗಾಗಲೇ 75 ಹುದ್ದೆಗಳಿಗೆ ಮನಮುಲ್ ಅರ್ಜಿ ಆಹ್ವಾನಿಸಿ, ಏಪ್ರಿಲ್ 16 ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕ ಅಂತಲೂ ಘೋಷಿಸಿದೆ. ಇಂತಿಂತ ಹುದ್ದೆಗೆ ಇಂತಿಷ್ಟು ಹಣ ಅಂತ ಪ್ರೈವೇಟ್ ಬ್ರೋಚರನ್ನೇ ರೆಡಿ ಮಾಡಿಕೊಂಡಿರುವ ಈ ಡೀಲ್ ಕಂಪನಿ ಪ್ರತಿಭಾವಂತ ಬಡಪಾಯಿಗಳ ಹೊಟ್ಟೆಮೇಲೆ ಹೊಡೆಯಲು ಸಜ್ಜಾಗಿದೆ. ವ್ಯವಸ್ಥಾಪಕ ನಿರ್ದೇಶಕ ಕೃಷ್ಣೇಗೌಡನನ್ನು ಅಡ್ಜಸ್ಟ್ ಮಾಡಿಕೊಂಡಿರುವ ಈ ಕೂಟದ ಮೆಯ್ಯಾಟ ಭಯಾನಕವಾಗಿ ಸಾಗುತ್ತಿದೆ.

ಸಹಾಯಕ ವ್ಯವಸ್ಥಾಪಕರು 18 ಹುದ್ದೆ, ಸಹಾಯಕ ವ್ಯವಸ್ಥಾಪಕ (ಡಿಟ) 1, ಖರೀದಿ-ಉಗ್ರಾಣ 2, ತಾಂತ್ರಿಕ ಅಧಿಕಾರಿ (ಡಿಟ) 05, ಮಾರುಕಟ್ಟೆ ಮೇಲ್ವಿಚಾರಕರು 8, ಜೂನಿಯರ್ ಸಿಸ್ಟಂ ಆಪರೇಟರ್ 06 ಸೇರಿದಂತೆ 75 ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಈಗಾಗಲೇ ಡೀಲ್ ಕಂಪನಿ ಸದಸ್ಯರು ಆಕಾಂಕ್ಷಿತ ಅಭ್ಯರ್ಥಿಗಳನ್ನು ಸಂಪರ್ಕಿಸಿದ್ದು, ವಿಸ್ತರಣಾಧಿಕಾರಿ ಹುದ್ದೆಗೆ 20 ಲಕ್ಷ, ಸಹಾಯಕ ವ್ಯವಸ್ಥಾಪಕ ಹುದ್ದೆಗೆ 18 ಲಕ್ಷ, ಉಪ ವ್ಯವಸ್ಥಾಪಕ ಹುದ್ದೆಗೆ 18 ಲಕ್ಷ, ಟೆಕ್ನಿಷಿಯನ್ ಹುದ್ದೆಗೆ 10 ಲಕ್ಷ ಫಿಕ್ಸ್ ಮಾಡಿದ್ದಾರಂತೆ. ಜಂಟಿ ನಿಬಂಧಕರಾದ ಆಶಾರವರು ಆಡಳಿತಮಂಡಳಿಯ ನಿರ್ದೇಶಕರಾಗಿದ್ದು, ಇವೆಲ್ಲವನ್ನೂ ನೋಡಿಯೂ ನೋಡದಂತೆ ಇರುವುದರ ಹಿಂದಿನ ಗುಟ್ಟೇನು? ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

ಬೋರೇಗೌಡನ 'ಬಡ'ತನ

ಮನ್‌ಮುಲ್‌ಗೆ 3 ಬಾರಿ ಆರಿಸಿ ಬಂದಿರುವ ಬಿ.ಬೋರೇಗೌಡ ನೋಡುವುದಕ್ಕೆ ಥೇಟು ಅಮಾಯಕ ಹಳ್ಳಿಗನಂತೆ ಕಾಣಿಸುತ್ತಾನೆ. ಆದರೆ ಅವನ ನಸುಗುನ್ನಿ ಆಟಗಳನ್ನು ಬಲ್ಲವರೇ ಬಲ್ಲ. ಮನ್‌ಮುಲ್ ತಿಜೋರಿಯಾ ಯಾವ ಲಾಕರ್‌ಗೆ ಕೈ ಇಟ್ಟರೆ ಹಣ ಸಿಗುತ್ತದೆಂಬುದರ ಬಗ್ಗೆ ರಿಸರ್ಚನ್ನೇ ನಡೆಸಿರುವ ಬೋರೇಗೌಡ ಕೈ ತುಂಬಾ ಬಾಚಿದ್ದಾನೆ. 2007ರಲ್ಲಿ ಮೊದಲ ಬಾರಿ ಮನ್‌ಮುಲ್ ನಿರ್ದೇಶಕನಾಗುವುದಕ್ಕೂ ಮುಂಚೆ ಬರಿಗೈ ದಾಸನಾಗಿದ್ದ ಬೋರೇಗೌಡ ಕೇವಲ 10 ವರ್ಷದ ಅವಧಿಯಲ್ಲಿ ಕೋಟಿಗೆ ತೂಗುತ್ತಿದ್ದಾನೆ. ಮೈಸೂರಿನ ಕೆಸರೆಯಲ್ಲಿ ಭವ್ಯಬಂಗಲೆ, ಕಾರು, ಮಗನಿಗೆ ಓಡಾಡಲು ಐಷಾರಾಮಿ ಬೈಕು, ಬ್ಯಾಂಕ್ ಬ್ಯಾಲೆನ್ಸ್ ಒಟ್ಟಿಗೆ ಬಡ ಬೋರೇಗೌಡ ಬಡವನಾಗಂತೂ ಉಳಿದಿಲ್ಲ. ಎಂ.ಶೆಟ್ಟಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಸುಸ್ತಿದಾರನಾಗಿದ್ದ ಬೋರೇಗೌಡ ನಿರ್ದೇಶಕ ಸ್ಥಾನಕ್ಕೆ ಆಯ್ಕೆಯಾದ ಬಗ್ಗೆ ತನಿಖೆ ನಡೆದರೆ ಆತ ಕಂಬಿ ಎಣಿಸೋದು ಗ್ಯಾರಂಟಿ. ಈತನಿಗೆ ಮನ್‌ಮುಲ್ ಕರೆಯುವ ಹಸುವಿದ್ದಂತೆ. ಬೋರೇಗೌಡ ಅಂಡ್ ಡೀಲ್ ಕಂಪನಿಯ ದುರಾಸೆ ಎಂತದ್ದೆಂದರೆ ಹಾಲನ್ನು ಕರೆಯುವ ಬದಲು ಮನ್‌ಮುಲ್‌ನ ಕೆಚ್ಚಲನ್ನೇ ಕೊಯ್ಯುವ ಕೆಲಸ ಮಾಡುತ್ತಿದೆ.

2007ರಲ್ಲಿ ಅರ್ಹತೆ ಇಲ್ಲದವರಿಗೆಲ್ಲ ಹುದ್ದೆಗಳನ್ನು ಲಕ್ಷ-ಲಕ್ಷ ರೂಪಾಯಿಗೆ ಮಾರಿಕೊಂಡ ಈ ನಸುಗುನ್ನಿ ಬೋರೇಗೌಡ ನಿಯಮಗಳನ್ನೆಲ್ಲಾ ಗಾಳಿಗೆ ತೂರಿದ್ದಲ್ಲದೆ ತಾನೇ ಬೋಗಸ್ ಸರ್ಟಿಫಿಕೇಟ್ ಸೃಷ್ಟಿ ಮಾಡಿ ಕೆಲಸ ಕೊಟ್ಟ ಆಪಾದನೆಯನ್ನೂ ಹೊತ್ತುಕೊಂಡಿದ್ದಾನೆ. ಉದ್ಯೋಗ ವಂಚಿತರು ಈ ಬಗ್ಗೆ ಮಾಹಿತಿ ಕೊಡಿ ಅಂತ ಆರ್‌ಟಿಐ ಅರ್ಜಿ ಹಾಕಿದರೆ 'ನಮ್ಮದು ಸಹಕಾರಿ ಸಂಸ್ಥೆಯಾಗಿದ್ದು ಮಾಹಿತಿ ಹಕ್ಕು ಕಾಯ್ದೆಯಡಿ ಬರುವುದಿಲ್ಲ' ಎಂದು ಗುಮ್ಮನ ಗುಸಕನಂತೆ ನಗುತ್ತಾನೆ.

ಆಡಳಿತಾಧಿಕಾರಿ ಮನೀಶ್ ಕೂಡಾ ಈ ಭ್ರಷ್ಟ ಕೂಟಕ್ಕೆ ಸಾಥ್ ಕೊಡುತ್ತಿರೋದು ವಿಪರ್ಯಾಸ.

2015ರ ನೇಮಕಾತಿಯಲ್ಲಿ ಅಕ್ರಮ

ಭಾರೀ ಹಸಿವಿನ ಗಿರಾಕಿಗಳಾದ ಮನ್‌ಮುಲ್ ನಿರ್ದೇಶಕರು 2015ರ ನೇಮಕಾತಿಯಲ್ಲಿ ಭಾರೀ ಅಕ್ರಮವನ್ನೇ ನಡೆಸಿದ್ದಾರೆ. ಮದ್ದೂರು ತಾಲೂಕಿನ ನೂತನ್ ಕುಮಾರ್ 18 ಲಕ್ಷ ಹಣ ಪೀಕಿದ ನಂತರವಷ್ಟೇ ಸಹಾಯಕ ವ್ಯವಸ್ಥಾಪಕ (ಕೃಷಿ) ಹುದ್ದೆ ಒಲಿದದ್ದು. ಇನ್ನು ಸಹಾಯಕ ವ್ಯವಸ್ಥಾಪಕ (ಮಾರುಕಟ್ಟೆ) ಹುದ್ದೆಗೆ ಜಿ.ಡಿ. ಬಿಂದುಶ್ರೀ ಕೊಟ್ಟದ್ದು ಭರ್ತಿ 20 ಲಕ್ಷ ರೂಪಾಯಿ! ಈಕೆ ಮಾರುಕಟ್ಟೆ ಅಧಿಕಾರಿ ಹುದ್ದೆಯಲ್ಲಿದ್ದರೂ ಕೆಲಸ ಮಾಡುತ್ತಿರೋದು ಉಗ್ರಾಣದಲ್ಲಿ. ಒಟ್ಟಿನಲ್ಲಿ ಡೀಲ್ ಕಂಪನಿಯ ಕೃಪಾಕಟಾಕ್ಷ ಗಿಟ್ಟಿಸಿದರೆ ಮನ್‌ಮುಲ್‌ನಲ್ಲಿ ಯಾರು, ಯಾವ ಹುದ್ದೆ ಬೇಕಾದರು ದಕ್ಕಿಸಿಕೊಳ್ಳಬಹುದು, ಯಾವ ವಿಭಾಗದಲ್ಲಾದರು ಕೆಲಸ ಮಾಡಬಹುದು ಅನ್ನುವಂತಾಗಿದೆ. ಅಶೋಕ್‌ಮೆಹಾತ ಆಳ್ವ, ಪುಷ್ಪಲತಾ ಸಿ. ಎಂಬಿಬ್ಬರು ಸಹ ತಲಾ 18 ಲಕ್ಷ ಹಣ ಕಟ್ಟಿಯೇ ಹುದ್ದೆ ಗಿಟ್ಟಿಸಿಕೊಂಡಿದ್ದಾರೆ.

ಈ ಡೀಲ್ ಕಂಪನಿಯ ಮುಖ್ಯಸ್ಥ ಮನ್‌ಮುಲ್ ಅಧ್ಯಕ್ಷ ಕದಲೂರು ರಾಮಕೃಷ್ಣ ತನ್ನ ಹತ್ತಿರದ ಸಂಬಂಧಿ ಎಂ.ಅಶೋಕ್ ಎಂಬಾತನಿಗೆ ಜೂನಿಯರ್ ಟೆಕ್ನಿಷಿಯನ್ ಹುದ್ದೆ ದಯಪಾಲಿಸಿದ್ದಾನೆ. ಅಸಲಿಗೆ ಅಶೋಕ್ ಎಂಬಾತ ಐಟಿಐನಲ್ಲಿ ಕೇವಲ 481 ಮಾರ್ಕ್ಸ್ ಪಡೆದಿದ್ದಾನೆ. ಆದರೆ ರಾಮಕೃಷ್ಣನ ಕೃಪೆಯಿಂದಾಗಿ ಮಾರ್ಕ್ಸ್‌ಕಾರ್ಡ್‌ನಲ್ಲಿದ್ದ 481 ಅಂಕಗಳು ಏಕ್‌ದಂ 631ಕ್ಕೆ ತಿದ್ದುಪಡಿಕೊಂಡಿದೆ. ಅಶೋಕ್ ಎಂಬಾತನ ಮಾರ್ಕ್ಸ್‌ಕಾರ್ಡ್ ಪರಿಶೀಲಿಸಿದರೆ ಅಸಲಿ ಸತ್ಯ ಗೊತ್ತಾಗುತ್ತದೆ.

ಆದೇರೀತಿ ಆಶಾ ಎಂಬಾಕೆಗೆ ಜೂನಿಯರ್ ಸಿಸ್ಟಮ್ ಆಪರೇಟರ್ ಹುದ್ದೆ ದಯಪಾಲಿಸಲಾಗಿದೆ. ಈಕೆ ಅಸಲಿಗೆ ಪದವಿ ಪಡೆದಿರುವ ಬಗ್ಗೆಯೇ ಸಾಕಷ್ಟು ಅನುಮಾನ ಬರುತ್ತಿದೆ. ಏಕೆಂದರೆ ನೇಮಕಾತಿಯ ನಂತರದಲ್ಲಿ ಈಕೆಯ ಸ್ನೇಹಿತರೇ ಆಕೆ ಪದವಿ ಪೂರೈಸಿಲ್ಲ ಎಂದು ತಕರಾರು ಎತ್ತಿದ್ದರು. ಈ ಬಗ್ಗೆ ಮಾಹಿತಿ ನೀಡಿ ಎಂದು ಹುದ್ದೆ ವಂಚಿತರು ಅರ್ಜಿ ಸಲ್ಲಿಸಿದರೆ, ಮಾಹಿತಿ ಹಕ್ಕು ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳಿ ಕೈತೊಳೆದುಕೊಂಡಿದ್ದಾರೆ. ಅಂದಹಾಗೆ, ಈ ಆಶಾ ಮನ್‌ಮುಲ್ ನಿರ್ದೇಶಕ ಸಾತನೂರು ಮಹೇಶನ ತಂಗಿ ಮಗಳು!

ಡೀಲ್ ಕಂಪನಿಯ ದಾಹ ಎಂತಹದ್ದೆಂದರೆ ಅಂಗವಿಕಲ ಕೋಟಾವನ್ನೂ ಬಿಡದೆ ಅಲ್ಲಿಯೂ ವಸೂಲಿ ಮಾಡಿ[...] ಹುದ್ದೆಗಳನ್ನು ಬಿಕರಿ ಮಾಡಿದ್ದಾರೆ. ತಾಂತ್ರಿಕ ಅ[...] ಹುದ್ದೆಗೆ ಅಂಗವಿಕಲ ಮಂಜುನಾಥನಿಂದ 6 ಲಕ್ಷ[...] ಹಾಗೂ ಮತ್ತೊರ್ವ ಅಂಗವಿಕಲ ದಿಲೀಪ್ (ಮಾ[...] ಸಹಾಯಕ) ನಿಂದ 6 ಲಕ್ಷ ವಸೂಲಿ ಮಾಡಿದ್ದಾರೆ[...] ಕೆಲ ನಿರ್ದೇಶಕರೇ ಹೇಳಿಕೊಳ್ಳುತ್ತಿದ್ದಾರೆ. ಕೆ.ವಿ. ಕಾ[...] ಎಂಬಾತನಿಗೆ ಮಾರುಕಟ್ಟೆ ಸಹಾಯಕ ಹುದ್ದೆ[...] ದಯಪಾಲಿಸಲಾಗಿದೆ. ಈತ ಇಂಜಿನಿಯರಿಂಗ್ ಕೊ[...] ಮುಗಿಸಿದ್ದರೂ ಪಿಯುಸಿಯಲ್ಲಿ ನೇಮಕಾತಿಗೆ ಬೇಕಾ[...] ಅಂಕಗಳನ್ನೇ ಪಡೆದಿರಲಿಲ್ಲ, ಈತ ಅಧ್ಯಕ್ಷ ಕದಲ[...] ರಾಮಕೃಷ್ಣನ ಹತ್ತಿರ ಸಂಬಂಧಿ ಎಂಬ ಅರ್ಹತೆಯ ಜೊ[...] ಹಣವೂ ಇಲ್ಲಿ ಕೆಲಸ ಮಾಡಿದೆ.

ನೇಮಕಾತಿಗೆ ಅನುಮೋದನೆಯೇ ಸಿ[...]

ಇದೆಲ್ಲಕ್ಕಿಂತಲೂ ಆಘಾತಕಾರಿ ಸಂಗತಿಯೆಂದರೆ ರ[...] ನೇಮಕಾತಿಯ ನೆಪದಲ್ಲಿ ಕೋಟ್ಯಂತರ ಹಣವನ್ನು[...] ಭ್ರಷ್ಟ ಡೀಲ್ ಕಂಪನಿ ಲೂಟಿ ಹೊಡೆದಿದೆಯೋ[...] ನೇಮಕಾತಿಗೆ ಸಹಕಾರ ಸಂಘ ಅನುಮೋದನೆಯ[...] ನೀಡಿಲ್ಲವಂತೆ! ಯಾವಾಗ ಈ ಭ್ರಷ್ಟರು ನೇಮಕಾತಿ ನೆ[...] ಕೋಟಿಗಟ್ಟಲೆ ವಸೂಲಿಗಿಳಿದರೋ ಆಗಲೇ ವಕೀಲರೊ[...] 16.03.2015ರ ನೇಮಕಾತಿಗೆ ಸಂಬಂಧಿಸಿದಂತೆ [...] ಮತ್ತು ನೇಮಕಾತಿಯ ನಿಯಮಗಳನ್ನು ಅನುಮೋದ[...] ಅಧಿಕಾರಿಗಳು ಮತ್ತು ಇಲಾಖೆವಾರು ವಿಳಾಸ[...] ನೀಡಬೇಕೆಂದು ಬೆಂಗಳೂರಿನ ಸಹಕಾರ ಸಂಘಕ್ಕೆ ಆರ[...] ಅರ್ಜಿ ಗುಜರಾಯಿಸಿದ್ದರು. ಅದಕ್ಕೆ ಉತ್ತರಿಸಿರುವ ಸಹಾ[...] ನಿಬಂಧಕ ಕೆ.ವಿ.ಶೇಷಗಿರಿಯವರು 'ಮನ್‌ಮು[...] 2014-15, ದಿನಾಂಕ 16-03-2015ರ ನೇಮ[...] ಕುರಿತು ವೃಂದ ಮತ್ತು ನೇಮಕಾತಿಯ ನಿಯಮಗ[...] ಈ ಕಚೇರಿಯ ವತಿಯಿಂದ ಅನುಮೋದಿಸಿಯೇ [...] ಅನ್ನೋ ಅಂಶವನ್ನು ಬಹಿರಂಗಪಡಿಸಿದ್ದಾರೆ. ಹಾ[...] ಸಂಪೂರ್ಣ ನೇಮಕಾತಿಯೇ ಬೋಗಸ್ ಎಂದಾಯಿ[...]

ಈಗಾಗಲೇ 2015ರ ನೇಮಕಾತಿಯಲ್ಲಿ ಅ[...] ನಡೆದಿದೆ ಎಂದು ಅವಕಾಶ ವಂಚಿತರು ನ್ಯಾಯಾಲ[...] ಮೆಟ್ಟಲೇರಿದ್ದಾರೆ. ಅನುಮೋದನೆಯೂ ಸಿಕ್ಕಿಲ್ಲ ಎ[...] ಅಂಶ ಕೋರ್ಟ್ ಗಮನಕ್ಕೆ ಬಂದ ಕ್ಷಣವೇ 126 ಹು[...] ನೇಮಕಾತಿ ರದ್ದಾಗಲಿದೆ. ಲಕ್ಷಾಂತರ ರೂಪಾಯಿ [...] ಹುದ್ದೆ ಗಿಟ್ಟಿಸಿದ ನೂರಾರು ಮಂದಿ ಪರಮ ದೋ[...] ತುತ್ತಾಗಲಿದ್ದಾರೆ.

ರೈತ ಕಲ್ಯಾಣ ಟ್ರಸ್ಟ್ ಹಣಕ್ಕೆ ಕನ್ನ[...]

ಹಾಲು ಉತ್ಪಾದಕರ ರೈತ ಮಕ್ಕಳಿಗೆ ವಸತಿ[...] ನಿರ್ಮಿಸುವ ಉದ್ದೇಶದಿಂದ ಮನ್‌ಮುಲ್‌ನಲ್ಲಿ ರೈತ ಕ[...] ಟ್ರಸ್ಟ್ ಸ್ಥಾಪನೆಯಾಗಿದೆ. ಆದರಂತೆ ಹಾಲು ಉತ್ಪಾದಕ[...] ಪ್ರತಿ ಲೀಟರ್ ಹಾಲಿಗೆ 15 ಪೈಸೆ ಸಂಗ್ರಹ ಮಾ[...] ಮೊತ್ತವೇ 9 ಕೋಟಿ ರೂಪಾಯಿಯಾಗುತ್ತದೆ. ಈ ಹ[...] ಮೇಲೆ ಕಣ್ಣಿಟ್ಟಿರುವ ರೈತ ಕಲ್ಯಾಣ ಟ್ರಸ್ಟ್‌ನ ಅ[...] ಬೋರೇಗೌಡ ತನ್ನ ಡೀಲ್ ಕಂಪನಿ ಸದಸ್ಯರ ಮೂ[...] 5 ಕೋಟಿಗೂ ಹೆಚ್ಚು ಹಣಕ್ಕೆ ಕನ್ನ ಹಾಕಲು ಹೊರಟಿದ[...] 9 ಕೋಟಿ ಹಣದಲ್ಲಿ ಬಹುಪಾಲು ಹಣವನ್ನು ವ್ಯವಸ್ಥಾ[...] ನಿರ್ದೇಶಕರ ಜೊತೆ ಡೀಲ್ ಕುದುರಿಸಿಕೊಂ[...] ಶ್ರೀರಂಗಪಟ್ಟಣದ ಕೆ.ಶೆಟ್ಟಹಳ್ಳಿ ಹತ್ತಿರ 12 [...] ಜಮೀನನ್ನು ಪ್ರತಿ ಗುಂಟೆಗೆ 1,70,000 ರೂ[...] ಖರೀದಿಸಲು ಅಡ್ವಾನ್ಸ್ ನೀಡಿದ್ದಾರೆ. ಒಂದು ಗುಂ[...] 1,70,000 ರೂಪಾಯಿಯಂತೆ 12 ಎಕರೆ ಅಂ[...] 480 ಗುಂಟೆಗೆ ಬರೋಬ್ಬರಿ 8.16 ಕೋ[...] ಹಣವಾಗುತ್ತದೆ. ಅಸಲಿಗೆ ಈ ಸ್ಥಳದಲ್ಲಿ ಪ್ರತಿ ಗುಂ[...] ಇರುವ ಬೆಲೆ 50,000 ರೂಪಾಯಿ ಮಾತ್ರ. ನೈಜಬೆಲೆಯ[...] ಇದೇ 12 ಎಕರೆಗೆ ಕೇವಲ 2.40 ಕೋಟಿಯಾಗುತ್ತ[...] ಆದರೆ ಡೀಲ್ ಕಂಪನಿಯ ಬೋಗಸ್ ವ್ಯವಹಾರದಿ[...] ಟ್ರಸ್ಟ್‌ನ 5 ಕೋಟಿಗೂ ಹೆಚ್ಚು ಹಣ ಅವರ ಕೈಸೇರಲಿ[...] ಸಂಗ್ರಹವಾದ ಅಷ್ಟೂ ಹಣ ವಸತಿಶಾಲೆಯ ಭೂ[...] ಖರೀದಿಗೆ ಹೋದರೆ ಇನ್ನು ಶಾಲೆ ಕಟ್ಟಡ ಕಟ್ಟುವು[...] ಮತ್ತು ರೈತರ ಮಕ್ಕಳು ಆ ಶಾಲೆಯಲ್ಲಿ ಓದುವು[...] ಕನಸಿನ ಮಾತು! ಹಾಲು ಉತ್ಪಾದಕರ ಹಣವನ್ನು ಹೀಗ[...] ಲೂಟಿ ಮಾಡುತ್ತಿರುವ ಭ್ರಷ್ಟರಿಗೆ ಪಾಠ ಕಲಿಸಲು ಸಕಾ[...] ಮುಂದಾಗದಿದ್ದರೆ ಹಾಲು ಕುಡಿದಷ್ಟೇ ಸಲೀಸಾಗಿ ಇವ[...] ಮನ್‌ಮುಲ್ ಸಂಸ್ಥೆಯನ್ನೇ ಆಪೋಶನ ತೆಗೆದುಕೊಳ್ಳೋ[...] ಗ್ಯಾರಂಟಿ.

ಈ ಹಿಂದೆ ಇದೇ ರೀತಿ 2010ರಲ್ಲಿ ಮದ್ದೂರಿನ[...] ಎಲ್‌ಐಸಿ ಕಚೇರಿ ಬಳಿ ಮನ್‌ಮುಲ್ ಸಂಸ್ಥೆಯ ಉ[...] ಕಚೇರಿ ನಿರ್ಮಿಸುವ ಸಲುವಾಗಿ ಮೂಲ ಮಾರುಕ[...] ಬೆಲೆಗಿಂತ ಹೆಚ್ಚುವರಿ ಹಣ ನೀಡಿ ನಿವೇಶನ ಖರೀದಿಸಿರು[...] ಬಗ್ಗೆ ಲೋಕಾಯುಕ್ತ ನ್ಯಾಯಾಲಯದಲ್ಲಿ ಕೇಸ್ ನಂಬ[...] 86/2016 ಅಡಿ ದೂರು ದಾಖಲಾಗಿದ್ದು ವಿಚಾರ[...] ನಡೆಯುತ್ತಿದೆ. ಹಳೆಯ ವ್ಯವಸ್ಥಾಪಕ ನಿರ್ದೇಶಕರು ಬಂಧನ[...] ಭೀತಿ ಎದುರಿಸುತ್ತಿದ್ದಾರೆ. ಹೀಗಿದ್ದರೂ ಮಾರುಕಟ್ಟೆ ಬೆಲೆಗಿ[...] ಹೆಚ್ಚುವರಿ ಬೆಲೆ ನೀಡಿ ರೈತ ಕಲ್ಯಾಣ ಟ್ರಸ್ಟ್‌ನ ಹಣವ[...] ಗುಳುಂ ಮಾಡಲು ಡೀಲ್ ಕಂಪನಿ ಹೊರಟಿದೆ. ಇದ[...]

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52

ಸಂಖ್ಯೆ: ಅನಿ/ಡಿಎಮ್ಮೆ-2/ಮಾಹಕಾ/199/2015-16 ದಿನಾಂಕ: 16-03-2016

ಶ್ರೀ ಆರ್. ಜಗನ್ನಾಥ್,
ವಕೀಲರು, ರೂಂ ನಂ.1, 1ನೇ ಕ್ರಾಸ್, ಸುಭಾಷ್ ನಗರ,
ವಿನೋಬಾ ರಸ್ತೆ, ಮಂಡ್ಯ-571 401

R.P.A.D

ಮಾನ್ಯರೇ,

ವಿಷಯ: ಮಾಹಿತಿ ಹಕ್ಕು ಅಧಿನಿಯಮ 2005 ರಡಿ ಮಾಹಿತಿ ಕೋರಿರುವ ಕುರಿತು.
ಉಲ್ಲೇಖ: ಶ್ರೀ ಆರ್. ಜಗನ್ನಾಥ್, ಇವರ ಅರ್ಜಿ ದಿನಾಂಕ : 23-02-2016.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ನಿಮ್ಮ ಅರ್ಜಿಯಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿದೆ.

ಅಂಶ 2 ಕ್ಕೆ ಸಂಬಂಧಿಸಿದಂತೆ, ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಇವರ 2014-15, ದಿನಾಂಕ:16-03-2015 ರ ನೇಮಕಾತಿಗೆ ಕುರಿತು, ವೃಂದ ಮತ್ತು ನೇಮಕಾತಿಯ ನಿಯಮಗಳನ್ನು ಈ ಕಛೇರಿಯ ವತಿಯಿಂದ ಅನುಮೋದಿಸಲಾಗಿಲ್ಲವೆಂಬ ಅಂಶವನ್ನು ನಿಮಗೆ ಈ ಮೂಲಕ ತಿಳಿಸಿದೆ.

ಅಂಶ 3 ಕ್ಕೆ ಸಂಬಂಧಿಸಿದಂತೆ, 2015-16ನೇ ಸಾಲಿಗೆ ಅನುಮೋದನೆಗೊಂಡಿರುವ ವೃಂದ ಮತ್ತು ನೇಮಕಾತಿಯ ಆದೇಶವು ಒಟ್ಟು 10 ಪುಟಗಳನ್ನೊಳಗೊಂಡಿದ್ದು, ಪುಟ ಒಂದಕ್ಕೆ ರೂ.2.00 ರಂತೆ ಒಟ್ಟು ರೂ.20-00 ಗಳನ್ನು ಪಾವತಿಸಿದಲ್ಲಿ ದೃಢೀಕೃತ ಪ್ರತಿಯನ್ನು ಒದಗಿಸಲು ಕ್ರಮವಿಡಲಾಗುವುದೆಂದು ತಿಳಿಸಿದೆ.

ನಿಮ್ಮ ವಿಶ್ವಾಸಿ,
(ಶೇಷಗಿರಿ ಕೆ.ವಿ.)
ಸಹಕಾರ ಸಂಘಗಳ ಸಹಾಯಕ ನಿಬಂಧಕರು
(ಹೈನುಗಾರಿಕೆ ಶಾಖೆ)
ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ.

16-03-2015ರ ನೇಮಕಾತಿಗೆ ಅನುಮೋದಿಸಲಾಗಿಲ್ಲವೆಂದು ನೀಡಿರುವ ಉತ್ತರದ ಪ್ರತಿ

ಂದೊಂದು ದಿನ ಈಗಿನ ಎಂಡಿ ಕೃಷ್ಣೇಗೌಡನ ಕುತ್ತಿಗೆಗೆ ತ್ತಿಕೊಳ್ಳಲಿದೆ. ಹಾಗಿದ್ದೂ ಕೃಷ್ಣೇಗೌಡ ಸುಮ್ಮನಿದ್ದಾನೆಂದರೆ ೀ ವ್ಯವಹಾರದಲ್ಲಿ ಆತನಿಗೆ ಸಂದಾಯವಾಗಿರುವ ಪಾಲು ನ್ನೆಷ್ಟಿರಬಹುದು?

ನ್ಮಥರಾಜ ಅಂಡ್ ಟೀಂ ಕಮಾಯಿ

ಈ ಸಲದ ನೇಮಕಾತಿ ಪ್ರಕ್ರಿಯೆಯನ್ನು ಸರಾಗವಾಗಿ ಸಲು ಮನ್‌ಮುಲ್ ನಿವೃತ್ತ ಅಧಿಕಾರಿ ಮನ್ಮಥರಾಜ ಬಾತನನ್ನು ಇದೇ ಡೀಲ್ ಕಂಪನಿ ನೇಮಕ ಮಾಡಲು ್ತಾಗಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ಲೋಪವಾಗದಂತೆ ೋಡಿಕೊಳ್ಳುವ ಜವಾಬ್ದಾರಿ ಈ ಮನ್ಮಥರಾಜನ ಮಿನದ್ದು. ಆದರೆ ಇದೆಲ್ಲ ನೆಪಕ್ಕಷ್ಟೆ. ಯಾಕೆಂದರೆ ಈ ನ್ಮಥರಾಜನನ್ನು ನೇಮಕ ಮಾಡಿರೋದೆ ಬೋರೇಗೌಡನ ಾರೆಯ ಮೇಲೆ. ಬೋರೇಗೌಡನ ಸಿಗ್ನಲ್ಲುಗಳು ಎತ್ತ ಳುತ್ತವೆಯೋ ಅತ್ತ ಮನ್ಮಥರಾಜನ ಚಿತ್ತ ಅರಿಯಲಿದೆ. ಾ ಕೊಟ್ಟ ಅಭ್ಯರ್ಥಿಗಳಿಗೆ ಹುದ್ದೆ ನೀಡುವಾಗ ಯಾವ ್ಪೊ ಸಂಭವಿಸದೆ, ಎಲ್ಲವೂ ಕ್ರಮಬದ್ಧವಾಗಿ ಕಾಣುವಂತೆ ಡುವುದೇ ಮನ್ಮಥರಾಜ ಮತ್ತು ಟೀಂನ ಕೆಲಸ. ಇದಕ್ಕೆ ಲಕ್ಷ ಹಣವೂ ಮನ್ಮಥರಾಜನಿಗೆ ಸಂದಾಯವಾಗುತ್ತದೆ. ಾವ ಮಾನದಂಡ ಅನುಸರಿಸಿ ಇವರಿಗೆ ನೇಮಕಾತಿ ಶೀಲಿಸಲು ನಿಯೋಜಿಸಿದೆ ಎಂಬುದೇ ಗೊತ್ತಿಲ್ಲ. ಷ್ಟಕ್ಕೂ ಅಕ್ರಮದ ಆಪಾದನೆ ಕೇಳಿಬಂದಿರುವ 2007 ತ್ತು 2015ರ ನೇಮಕಾತಿ ಪರಿಶೀಲನೆಯ ಹೊಣೆ ತ್ತದ್ದು ಕೂಡಾ ಇದೇ ಮನ್ಮಥರಾಜನ ಟೀಮು. ಮತ್ತೀಗ ಟೀಂ ಕರೆಸಲು ಡೀಲ್ ಕಂಪನಿ ಸಿದ್ಧವಾಗಿದೆ, ಎಂಡಿ ಷ್ಣೇಗೌಡ ಎಚ್ಚೆತ್ತುಕೊಳ್ಳಬೇಕು.

ಈ ನಡುವೆ ತಮಾಷೆಯ ಸಂಗತಿಯೂ ಒಂದಿದೆ. ಾ ಹಂಚಿಕೊಳ್ಳುವ ವಿಷಯದಲ್ಲಿ ಡೀಲ್ ಕಂಪನಿ ಸದಸ್ಯರ ುವೆಯೇ ವೈಮನಸ್ಯ ಮೂಡಿದೆಯಂತೆ. ಒಬ್ಬ ಸದಸ್ಯ ತ್ತೊಬ್ಬನನ್ನು ಯಾಮಾರಿಸಿ ಉದ್ಯೋಗಾಕಾಂಕ್ಷಿಗಳಿಂದ ಾ ವಸೂಲಿ ಮಾಡುತ್ತಿದ್ದಾನೆ ಅಂತ ಪರಸ್ಪರ ೋಪಿಸಿಕೊಂಡು ಕಿತ್ತಾಡುತ್ತಿದ್ದಾರೆಂಬ ಸುದ್ದಿ ಮನ್‌ಮುಲ್ ರಣದಲ್ಲಿ ಹರಿದಾಡುತ್ತಿದೆ. ಮನ್‌ಮುಲ್‌ನಲ್ಲಿ 12 ಂದಿ ನಿರ್ದೇಶಕರಿದ್ದು, ಅವರವರ ಯೋಗ್ಯತೆಗೆ ತಕ್ಕಂತೆ ಲು ಮುಟ್ಟಿಸುವುದರಿಂದ ಅವರ್‍ಯಾರು ಡೀಲ್ ಕಂಪನಿಯ ುದ್ಧ ಕಮಕ್‌ಕಿಮಕ್ ಎನ್ನುವುದಿಲ್ಲ. ಮನ್‌ಮುಲ್ ಸ್ಯರಲ್ಲಿ ಅನೇಕ ಸದಸ್ಯರು ಮೀಟಿಂಗ್‌ಗೆ ಬರುವುದಿಲ್ಲ. ಂವ ಮೇಲೆ ಭ್ರಷ್ಟ ಡೀಲ್ ಕಂಪನಿಯನ್ನು ಪ್ರಶ್ನಿಸುವವರೇ ಲ್ಲದಂತಾಗಿದೆ.

ವ್ಯವಹಾರ ಸುಲಭವಾಗಲಿ ಅಂತ. ಹಾಗಾಗಿ ಯಂತ್ರಗಳ ಖರೀದಿಯಲ್ಲೂ ಭರ್ಜರಿ ಆದಾಯ ಡೀಲ್ ಕಂಪನಿಗೆ ಸಿಗುತ್ತದೆ. ಯಂತ್ರಗಳ ಖರೀದಿಯಲ್ಲಿ ಸಿಗುವ ಕಮಿಷನ್ ಹಣದಲ್ಲಿ ಪ್ರತಿ ನಿರ್ದೇಶಕರಿಗೆ ಹಾಗೂ ಅಧಿಕಾರಿಗಳಿಗೆ ಅವರವರ ಪಾಲು ಸಂದಾಯ ಮಾಡುವುದನ್ನು ಡೀಲ್ ಕಂಪನಿ ನಿಯತ್ತಾಗಿ ಪಾಲಿಸಿಕೊಂಡು ಬರುತ್ತಿರುವುದರಿಂದ ಯಾರೂ ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ.

ಮನ್‌ಮುಲ್ ಹಾಗೂ ಬೆಂಗಳೂರಿನ ಕುಂಬಳಗೋಡು ಬಳಿ ಸ್ಥಾಪಿಸಿರುವ ಗುಡ್ ಲೈಫ್ ಮಿಲ್ಕ್ ಯೂನಿಟ್‌ನಲ್ಲಿ 120ಕ್ಕೂ ಹೆಚ್ಚು ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಾರೆ. ಈ ಗುತ್ತಿಗೆ ಟೆಂಡರ್‌ನಲ್ಲೂ ಗೋಲ್‌ಮಾಲ್ ನಡೆಯುತ್ತದೆ. ಗುತ್ತಿಗೆ ಕಾರ್ಮಿಕರನ್ನು ಒದಗಿಸುವ ಸುರೇಶ್‌ಗೌಡ ಎಂಬಾತ 2000 ಇಸವಿಯಿಂದ ಇಲ್ಲೇ ಠಿಕಾಣಿ ಊರಿದ್ದಾನೆ. ಭ್ರಷ್ಟ ಅಧಿಕಾರಿಗಳು ಹಾಗೂ ನಿರ್ದೇಶಕರ ಕೃಪಕಟಾಕ್ಷ ಹೊಂದಿರುವ ಈತ ಗುತ್ತಿಗೆ ಕಾರ್ಮಿಕರು ಗೈರು ಹಾಜರಾದರೂ ಅವರಿಗೆ ಹಾಜರಾತಿ ಕೊಟ್ಟು ಅವರ ಪಾಲಿನ ಹಣವನ್ನು ತಾನೇ ಲಪಟಾಯಿಸುತ್ತಾನೆ. ಗುತ್ತಿಗೆ ಕಾರ್ಮಿಕರ ಗೈರುಹಾಜರಿಯಿಂದ ಸಿಗುವ ಲಕ್ಷಾಂತರ ಹಣ ಅಧಿಕಾರಿಗಳು ಹಾಗೂ ಡೀಲ್ ಕಂಪನಿ ಸದಸ್ಯರ ಪಾಲಾಗುತ್ತದೆ. ಅಲ್ಲದೆ ಡೀಲ್ ಕಂಪನಿ ಕುಂಬಳಗೋಡಿನ ಗುಡ್ ಲೈಫ್ ಮಿಲ್ಕ್ ಯೂನಿಟ್‌ನಲ್ಲಿ ಮಹಿಳಾ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಅವರಿಗೆ ಸಂಪೂರ್ಣ ಉಸ್ತುವಾರಿ ನೀಡಿದೆ. ಡೀಲ್ ಕಂಪನಿಯ ಸದಸ್ಯರೇ ಅಲ್ಲಿ ಉಸ್ತುವಾರಿ ವಹಿಸುವುದರಿಂದ ಅವರಾಡಿದ್ದೇ ಆಟವಾಗಿದೆ.

ಹಾಗೆಯೇ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸಂಗ್ರಹವಾಗುವ ಹಾಲನ್ನು ಮನ್‌ಮುಲ್‌ಗೆ ತರಲೆಂದೇ ನೂರಕ್ಕೂ ಹೆಚ್ಚು ಕ್ಯಾಂಟರ್ ಗಾಡಿಗಳಿವೆ. ಅಲ್ಲದೆ ಮನ್‌ಮುಲ್‌ನಿಂದ ಪ್ಯಾಕೆಟ್ ಹಾಲನ್ನು ಗ್ರಾಹಕರ ಖರೀದಿ ಕೇಂದ್ರಕ್ಕೆ ಸಾಗಿಸಲು 75 ಕ್ಯಾಂಟರ್‌ಗಳಿವೆ. ಇದಕ್ಕೆ ಟೆಂಡರ್ ಕರೆಯಲಾಗುತ್ತದೆ. ಈ ಟೆಂಡರ್‌ನಲ್ಲೂ ಗೋಲ್‌ಮಾಲ್ ನಡೆಯುತ್ತದೆ. ಒಬ್ಬನೇ ಟೆಂಡರ್‌ದಾರ ಮೂವರ ಹೆಸರಿನಲ್ಲಿ ಟೆಂಡರ್ ಹಾಕುತ್ತಾನೆ. ಒಂದು ಕಿ.ಮೀ.ಗೆ 8 ರೂ. ಬಾಡಿಗೆ ಇದ್ದರೆ, ಅದನ್ನು ಕಿ.ಮೀ.ಗೆ 12, 14, 16 ರೂ. ಎಂದು ಹಾಕಲಾಗುತ್ತದೆ. ಆದರೆ ವಾಸ್ತವವಾಗಿ 1 ಕಿ.ಮೀ.ಗೆ 8 ರೂ. ಖರ್ಚಾಗುತ್ತದೆ. ಒಬ್ಬನೇ ಮೂರು ಟೆಂಡರ್ ಹಾಕುವುದರಿಂದ ಆ ಟೆಂಡರ್ ಅವನ ಪಾಲಾಗುತ್ತದೆ. ಡೀಲ್ ಕಂಪನಿಯ ಕೃಪಾಕಟಾಕ್ಷ ಇರುವುದರಿಂದಲೇ ಟೆಂಡರ್‌ನಲ್ಲಿ ಗೋಲ್‌ಮಾಲ್ ನಡೆಯುತ್ತದೆ. ಹಾಗೆ ಪ್ರತಿ ತಿಂಗಳು 3 ಲಕ್ಷಕ್ಕೂ ಹೆಚ್ಚು ಹಣ ಭ್ರಷ್ಟ ಡೀಲ್ ಕಂಪನಿ ಸದಸ್ಯರಿಗೆ ಸೇರುತ್ತದೆ ಎಂದು ಹಾಲಿನ ವಾಹನ ಚಾಲಕರೇ ಬೊಬ್ಬೆ ಹೊಡೆಯುತ್ತಿದ್ದಾರೆ.

ನಮೂನೆ – ಎ

ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ – 6(1) ಮತ್ತು 7(1)

1	ಅರ್ಜಿದಾರರ ಪೂರ್ಣ ಹೆಸರು	ಆರ್.ಜಗನ್ನಾಥ್.
2	ವಿಳಾಸ	ವಕೀಲರು ರೂಂನಂ-1,1ನೇ ಕ್ರಾಸ್,ಸುಭಾಷ್ ನಗರ ವಿನೋಬಾ ರಸ್ತೆ ಮಂಡ್ಯ-571401 9844776428
3	ಕೋರಿರುವ ದಸ್ತಾವೇಜು / ಪರಿಶೀಲನೆ / ಮಾದರಿಗಳು ಇವುಗಳ ವಿವರ	1 ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಇದರ ನೇಮಕಾತಿಗೆ ಸಂಬಂಧಿಸಿದಂತೆ ಸಂಖ್ಯೆ : ಮಂಹಾಒ/ಆಡಳಿತ/ನೇಮಕಾತಿ/04/2014-15 ದಿನಾಂಕ : 16-3-2015ರ ನೇಮಕಾತಿಯ ಪ್ರಕಟಣೆಯ ದೃಢೀಕರಣ ಪ್ರತಿ 2 ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ 2014-2015 ದಿನಾಂಕ:16-3-2015ರ ನೇಮಕಾತಿಗೆ ಸಂಬಂಧಿಸಿದಂತೆ, ವೃಂದ ಮತ್ತು ನೇಮಕಾತಿಯ ನಿಯಮಗಳನ್ನು ಅನುಮೋದಿಸಿದ ಅಧಿಕಾರಿಗಳ ಮತ್ತು ಇಲಾಖೆ ವಾರು ವಿಳಾಸವನ್ನು ದೃಢೀಕರಿಸಿ ನೀಡುವುದು. 3 ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಲ್ಲಿನ 2015-16ನೇ ಸಾಲಿಗೆ ಅನುಮೋದನೆಗೊಂಡಿರುವ ವೃಂದ ಮತ್ತು ನೇಮಕಾತಿಯ ದೃಢೀಕೃತ ಪ್ರತಿಯನ್ನು ನೀಡುವುದು.

2014-15ರ ನೇಮಕಾತಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕಿನಡಿ ಕೋರಿದ ಪ್ರತಿ

ಖರೀದಿಯಲ್ಲಿ ಅವ್ಯವಹಾರ, ಗುತ್ತಿಗೆಯಲ್ಲೂ ಗೋಲ್‌ಮಾಲ್

ಮನ್‌ಮುಲ್‌ನಲ್ಲಿ ಖರೀದಿ ವ್ಯವಹಾರಕ್ಕಾಗಿ ಮಿತಿಯೊಂದು ರಚನೆಯಾಗಿದೆ. ಅದರಲ್ಲಿ ಅಧಿಕಾರಿಗಳ ೊತೆ ಇಬ್ಬರು ನಿರ್ದೇಶಕರು ಇರುತ್ತಾರೆ, ಹಾಲು ಥಲೀಕರಣ ಮಾಡುವ ಬಲ್ಕ್ ಮಿಲ್ಕ್ ಕೂಲರ್ ಅನ್ನು ಲ್ಲೆಯ ನೂರಾರು ಕಡೆ ಇರುವ ಹಾಲು ಉತ್ಪಾದಕರ ಹಕಾರ ಸಂಘಕ್ಕೆ ನೀಡಲಾಗುತ್ತದೆ. ಒಂದೊಂದು ಯಂತ್ರದ ೆ ಕೋಟ್ಯಾಂತರ ರೂ.ಗಳಾಗುತ್ತದೆ. ಇದರಲ್ಲಿ ಭರ್ಜರಿ ಾಯವಿದ್ದು ಡೀಲ್ ಕಂಪನಿ ಸುಖಾಸುಮ್ಮನೇ ಕಮಾಯಿಸುತ್ತಿದೆ. ಗೆಯೇ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ನ್‌ಡಿಡಿಬಿ) ಹರಿಯಾಣ, ಪಂಜಾಬ್, ಕರ್ನಾಲ್, ಜಸ್ಥಾನ ಮೊದಲಾದ ಉತ್ತರ ಭಾರತದ ಕಂಪನಿಗಳ ಾಲಿಕ ಯಂತ್ರಗಳನ್ನು ಖರೀದಿಸಲಾಗುತ್ತದೆ. ಖರೀದಿ ಟಿಯಲ್ಲಿ ಹಿಂದಿ ಭಾಷೆ ಚೆನ್ನಾಗಿ ಬಲ್ಲ ಕೆ.ಆರ್.ಪೇಟೆಯ ಾಬು ರವಿಯನ್ನು ನೇಮಿಸಲಾಗಿದೆ. ಏಕೆಂದರೆ ಹಿಂದಿ ಷೆ ಬರುವುದರಿಂದ ಉತ್ತರ ಭಾರತದ ಕಂಪನಿ ಜೊತೆ

ಸರ್ಕಾರ ಇತ್ತ ಗಮನ ಹರಿಸಿ ಮನ್‌ಮುಲ್‌ನಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಿದೆ. ಪಾರದರ್ಶಕವಾಗಿ ನೇಮಕಾತಿ ಮಾಡುವ ಮೂಲಕ ಅರ್ಹರಿಗೆ ಮನ್‌ಮುಲ್‌ನಲ್ಲಿ ಉದ್ಯೋಗ ಸಿಗುವಂತೆ ನೋಡಿಕೊಳ್ಳಬೇಕಿದೆ. ಪ್ರತಿಯೊಂದರಲ್ಲೂ ಮೂಗು ತೂರಿಸಿ ಕೋಟಿಗಟ್ಟಲೆ ಹಣವನ್ನು ಬಾಚುತ್ತಿರುವ ಡೀಲ್ ಕಂಪನಿ(ಆಡಳಿತ ಮಂಡಳಿ)ಯನ್ನು ಪ್ರಶ್ನಿಸದಿದ್ದರೆ, ಈಗಾಗಲೇ ನಷ್ಟದಲ್ಲಿ ಸಾಗುತ್ತಿರುವ ಮನ್‌ಮುಲ್ ಕೆಲವೇ ವರ್ಷಗಳಲ್ಲಿ ನಷ್ಟಕ್ಕೀಡಾಗಿ ಮುಚ್ಚುವ ದಿನಗಳು ದೂರವಿಲ್ಲ. ಈಗಾಗಲೇ ಅಸಿಟೇಟ್ ಕಾರ್ಖಾನೆ ಮುಚ್ಚಿಹೋಗಿದೆ. ಕೋಟ್ಯಾಂತರ ಸಾಲದಲ್ಲಿರುವ ಮೈಷುಗರ್ ಮರಣಶಯ್ಯೆಯಲ್ಲಿದೆ. ಈಗ ಸಹಕಾರಿ ಸಂಸ್ಥೆ ಮನ್‌ಮುಲ್ ಮುಳುಗಿಸಲು ಹೊರಟಿರುವ ಭ್ರಷ್ಟಕೂಟದ ಕೈಯಿಂದ ಬಚಾವ್ ಮಾಡಬೇಕಿದೆ. ಅದಕ್ಕಾಗಿ ದೊಡ್ಡ ಜನಾಂದೋಲನವೇ ನಡೆಯಬೇಕಿದೆ.

■ ವರದಿಗಾರ

ಹೆಂಡತಿ ರಾಶಿಗೆ ವಕ್ಕರಿಸಿದ ಶನಿಗ್ರಹ!

ಥೂತ್ತೇರಿ

ಯಾಹೂ

ಸಾಮಾನ್ಯವಾಗಿ ಬಿಜೆಪಿಗಳು ಭೋಜನಕ್ಕಾಗಿ ಹಾತೊರೆಯುತ್ತವೆ. ಅವುಗಳು ಖಾಸಗಿಯಾಗಿ ನಡೆಸುವ ಕಾರ್ಯಕ್ರಮದಲ್ಲಿ ಉಳಿದ ವಿಷಯಗಳಿಗಿಂತಲೂ ಊಟದ ಐಟಂಗೇ ಹೆಚ್ಚು ಪ್ರಾಧಾನ್ಯತೆ ಕೊಡುತ್ತವೆ. ಉಂಡನಂತರ ಒಂದು ಒಣಗೊರಕೆಯ ಶಯನವೂ ಇರುತ್ತದೆ. ಇಂತಹ ಹಿನ್ನೆಲೆಯಿಂದ ಬಂದಿರುವ ಕರ್ನಾಟಕದ ಗುಜರಾತಿ ರಾಜ್ಯಪಾಲರು ಮಟಮಟ ಮಧ್ಯಾಹ್ನವೇ ಕೈಸಡಿಲ ಬಿಟ್ಟು ಬಾರಿಸಿ ಸಣ್ಣದೊಂದು ನಿದ್ದೆ ತೆಗೆಯುತ್ತಿರುವಾಗ ನಮ್ಮ ಮಾಜಿ ಪ್ರಧಾನಿಗಳು ಭೇಟಿಗೆ ಹೋಗಿದ್ದರಂತಲ್ಲಾ, ಆದರೇನು ವಜುಭಾಯಿಯವರ ಶರೀರವನ್ನು ಕಾಯುತ್ತಿದ್ದ ಕಾವಲುಗಾರರು ಒಳಬಿಡಲಿಲ್ಲವಂತೆ. ಕಾರಣ ಕೇಳಲಾಗಿ "ಇದೀಗ ತಾನೆ ಭೋಜನ ಭಾರಿಸಿದ ವಜುಭಾಯಿಗೆ ದೇಹ ವಜ್ಜೆಯಾದಂತೆ ಕಾಣಿಸಿದ್ದರಿಂದ ಹಾಗೇ ಒರಗಿಕೊಂಡಿದ್ದಾರೆ. ಬೇಕಾದರೆ ಗೊರಕೆ ಶಬ್ದ ಕೇಳಿಸಿಕೊಳ್ಳಿ" ಎಂದವಂತಲ್ಲಾ, ಇದರಿಂದ ರಾಜಕಾರಣಕ್ಕಾಗಿ ತಮ್ಮ ಇಡೀ ದೇಹವನ್ನು ಅರ್ಪಿಸಿಕೊಂಡಿರುವ ದೇವೇಗೌಡರಿಗೆ ಶಾನೆ ಶಾಕ್ ಆಗಿ "ರಾಮಾ ರಾಮ, ಮಾಜಿ ಪ್ರಧಾನಿಯಾದ ನಾನೇ ಬಂದರೂ ಎದ್ದು ಬರದ ರಾಜ್ಯಪಾಲರಿಗೆ ಏನಾಗಿರಬಹುದು?" ಎಂದು ಚಿಂತನೆಗೆ ತೊಡಗಿದರಂತಲ್ಲಾ, ಸಹಜವಾಗಿ ಜೆಡಿಎಸ್‌ನ ಕೆಲ ಕಿಡಿಗೇಡಿಗಳು "ಕುಮಾರಣ್ಣ ಮುಖ್ಯಮಂತ್ರಿಯಾಗಿದ್ದಾಗಲೂ ಕೆಲವೊಮ್ಮೆ ಹೋಂ ಮಿನಿಸ್ಟರ್ ಬಂದರೂ ಬಾಗಿಲು ತೆಗೆಯುತ್ತಿರಲಿಲ್ಲವಂತೆ. ಅಂತಹ ಸಮಸ್ಯೆಗೇನಾದರೂ ವಜೂಭಾಯಿ ಸಿಕ್ಕಿಕೊಂಡಿ ದ್ದಾರೆಯೇ?" ಎಂಬ ಅನುಮಾನಗಳಿಂದಲೇ ರಾಜ ಭವನದ ಆವರಣದಿಂದಲೇ ಹೊರಬಂದು ದೇವೇಗೌಡರು ಏನು ಹೇಳುತ್ತಾರೆಂದು ಕಾಯುತ್ತ ನಿಂತರಂತಲ್ಲಾ, ಥೂತ್ತೇರಿ!

ಇತ್ತ ಸಿನಿಮಾರಂಗದ ಸುದ್ದಿಯೊಂದು ಸ್ವಾರಸ್ಯಕರವಾಗಿದೆ ಯಲ್ಲಾ, ಚಿತ್ರಗಳಿಗೆ ಹಾಡು ಬರೆಯುತ್ತಿರುವ ಭಟ್ಟರ ರಸಾಯನ ಖಾಲಿಯಾದ ಕಾರಣಕ್ಕೆ ಈ ಹಿಂದೆ ಆತ ಅಡುಗೆ ಮಾಡುತ್ತಿದ್ದ ಪಾತ್ರೆಗಳನ್ನೇ ಕುರಿತು ಹಾಡು ಬರೆದು, ಅದೂ ಕೂಡ ಜನಪ್ರಿಯಗೊಂಡಿದ್ದು ಇತಿಹಾಸ. ಇಂತಿರಲಾಗಿ ಈಚೆಗೆ ರಸಾಯನ ಶಾಸ್ತ್ರದ ವಿಷಯವೊಂದರ ಪ್ರಶ್ನೆಪತ್ರಿಕೆ ಬಯಲಾದುದನ್ನೇ ನೆಪವಾಗಿಟ್ಟುಕೊಂಡು ಹೊಸೆದಿರುವ ಭಟ್ಟರ ಕವನ ಶಾನೆ ಕಾಂಗ್ರೆಗಳನ್ನು ಕೆರಳಿಸಲಾಗಿ ಕೇಸನ್ನ ಜಡಿದಿದ್ದಾರಂತಲ್ಲಾ. ಸಮೃದ್ಧವಾದ ತೋಟ ಹಾಳಾಗುತ್ತಿರುವಾಗ ಮಂಗನ ಮುಸುಡಿ ಕಾಯಿಗಳು ಕಾಣಿಸಿಕೊಳ್ಳುತ್ತವಂತೆ. ಹಾಗೆ ಕನ್ನಡ ಕಾವ್ಯ ನಾದ ಸುಧೆಯೊಂದಿಗೆ ಹರಿದು ಚಿತ್ರಗೀತೆ ಬರಿದಾಗುವ ಸಮಯಕ್ಕೆ ಸರಿಯಾಗಿ ಕಾಣಿಸಿಕೊಂಡ ಭಟ್ಟರು, ಜನರ ಅಭಿರುಚಿಯನ್ನು ಹಾಳು ಮಾಡಿದವರು. ಈತ ಹಾಳು ಮಾಡುವುದನ್ನು ಗುರುತಿಸದ ಮಾಧ್ಯಮದ ಜನಿವಾರಿಗಳು ಹಾಡಿ ಹೊಗಳುತ್ತಿದ್ದಾರೆ. ಈ ಹೊಗಳಿಕೆಯಿಂದಲೇ ಉಬ್ಬಿಹೋದ ಭಟ್ಟರ ಪೆನ್ನಿಂದ



"ಕೆಮಿಸ್ಟ್ರಿ ಕ್ವಶ್ಚನ್ ಪೇಪರ್ ಲೀಕ್ ಮಾಡನ್ನ ಯಾವನೋ ಲೋಫರ್ ರತ್ನಾಕರ" ಎಂಬ ಕಿಡಿಗೇಡಿ ಸಾಲುಗಳು ಹೊರಬಿದ್ದಿರುವಾಗಲೇ, ಭಟ್ಟನ ಮೂತಿಗೆ ತಿವಿಯಲು ತೀರ್ಥಹಳ್ಳಿ ಜನ ಕಾಯುತ್ತಿದ್ದಾರಂತಲ್ಲಾ, ಥೂತ್ತೇರಿ!!!


* * *

ವಜುಭಾಯಿ ಮೂಲತಃ ಸಣ್ಣ ಮನುಷ್ಯ. ಹಾಗೆ ನೋಡಿದರೆ, ಇಡೀ ಬಿಜೆಪಿ ಸಮೂಹವೇ ಸಣ್ಣ ಮನಸ್ಸಿನಿಂದ ನರಳುತ್ತವೆ. ಇವುಗಳ ನರಳುವಿಕೆಯಿಂದ ದೇಶವೇ ಸಂಕಟ ಪಡುವಂತಾಗಿದೆ. ಕರ್ನಾಟಕ ಸರ್ಕಾರಕ್ಕೆ ಕಿರುಕುಳ ಕೊಡಲೆಂದೇ ಕಳುಹಿಸಿರುವ ಈತ ಬಂದ ದಿನದಿಂದಲೂ ರಾಜಪಾಲರಾಗಿ ನಡೆದುಕೊಳ್ಳದೆ ಬಿಜೆಪಿ ವಕ್ತಾರನಂತೆಯೇ ನಡೆದುಕೊಂಡಿದ್ದಾರೆ. ಕನ್ನಡಿಗರು ರಾಜ್ಯೋತ್ಸವ ಆಚರಿಸುತ್ತಿದ್ದರೆ, ಸೋದರ ಭಾಷೆಯೊಂದರ ಸಂಭ್ರಮದಲ್ಲಿ ಪಾಲ್ಗೊಳ್ಳುವುದರ ಬದಲು, ಮರಾಠಿಗರೊಂದಿಗೆ ಸೇರಿಕೊಂಡು ಮೋಜು ಮಾಡಿದ ವ್ಯಕ್ತಿ, ಇದೆಲ್ಲಕ್ಕಿಂತ ಮುಖ್ಯವಾಗಿ, ಹೋದಲ್ಲಿ ಬಂದಲ್ಲಿ ಛದ್ಮವೇಶದ ಚೆಡ್ಡಿಯಂತೆ ಭಾಷಣ ಮಾಡುತ್ತ ನಮ್ಮ ಸಂಸ್ಕೃತಿ ಉಳಿಸಿಕೊಳ್ಳಲು ಹೋರಾಡಿ ಎಂದು ಕರೆ ಕೊಡುತ್ತಿರುವ ವ್ಯಕ್ತಿ, ಇಂತಹ ವ್ಯಕ್ತಿಗೆ ದೇವೇಗೌಡರ ಹಿನ್ನೆಲೆ ಗೊತ್ತಿರಲಾರದು. ಕರ್ನಾಟಕಕ್ಕೆ ಧೀಮಂತ ರಾಜ್ಯಪಾಲರು ಬಂದುಹೋಗಿದ್ದಾರೆ. ಆ ಪೈಕಿ ಧರ್ಮವೀರ, ಗೋವಿಂದ ನಾರಾಯಣ್, ಬ್ಯಾನರ್ಜಿ, ದೀಕ್ಷಿತ್ ತರಹದ ಮಹನೀಯರ ಸಾಲನ್ನೇ ಕಂಡಿರುವ ದೇವೇಗೌಡರು ತಮಗಾದ ಅವಮಾನದಿಂದ ಕೆರಳದೆ ಸಾವಧಾನದಿಂದಲೇ ನಡೆದುಕೊಂಡಿದ್ದಾರೆ. ಒಂದು ವೇಳೆ ಚೆಡ್ಡಿಗಳಿಗೇನಾದರೂ ಇಂತಹ ಅವಮಾನವಾಗಿದ್ದರೆ ಇಷ್ಟರಲ್ಲಿ ಆಡಬಾರದ ಮಾತುಗಳನ್ನು ಆಡಿ, ಮಾಡಬಾರದ ಕೆಲಸಗಳನ್ನು ಮಾಡಿ, ಈಶ್ವರಪ್ಪನ ನೇತೃತ್ವದಲ್ಲಿ ಪ್ರತಿಭಟಿಸುತ್ತಿದ್ದವು. ರಾಜ್ಯಪಾಲರ ನಿದ್ದೆ ಜೋಷಿ ಎಂಬ ಬಿಜೆಪಿ ನಾಯಕನ ದೃಷ್ಟಿಯಲ್ಲಿ ಸುಸಂಸ್ಕೃತ ನಡವಳಿಕೆಯಾಗಿದೆಯಲ್ಲಾ, ಥೂತ್ತೇರಿ!!

* * *

ಜ್ಯೋತಿಶಾಸ್ತ್ರವೆಂದರೆ ಆಕಾಶದಲ್ಲಿನ ಗ್ರಹತಾರೆಗಳು. ಭೂಮಿಯ ಮೇಲೆ ತಮ್ಮ ಪ್ರಭಾವ ಬೀರಿದಾಗ ಹುಟ್ಟಿದವರ ಮೇಲೂ ಪ್ರಭಾವ ಬೀರುತ್ತವಂತೆ. ಆದರೆ, ಆ ಸಮಯ ಹುಟ್ಟಿದ ಜೀವಿಗಳ ನಿಖರವಾದ ಸಮಯ ಎಲ್ಲವೂ ಸರಿಯಾಗಿರಬೇಕಂತೆ. ಆದರಿಂದ ಖಗೋಳದ ಚಿತ್ರ ಬರೆದುಕೊಂಡು, ಖಚಿತವಾಗಿ ಶಾಸ್ತ್ರ ಹೇಳುತ್ತ, ಎಲ್ಲರ ಬದುಕನ್ನ ರೂಪಿಸುತ್ತಿದ್ದ ಆಧುನಿಕ ಜ್ಯೋತಿಷಿಯೊಬ್ಬರು ಶಾನೆ ಸಮಸ್ಯೆಗೆ ಸಿಕ್ಕಿಕೊಂಡಿದ್ದಾರಂತಲ್ಲಾ. ಸದರಿ ಶಾಸ್ತ್ರಜ್ಞರು ಭವಿಷ್ಯ ಹೇಳುವುದು ಮನೆಯಲ್ಲಲ್ಲ, ದೂರದ ಪಂಚತಾರ ಹೋಟೆಲಿನಲ್ಲಿ. ರಾತ್ರಿಯೆಲ್ಲಾ ಗ್ರಹಗತಿಗಳ ಚಲನವಲನಕ್ಕೆ ಜನಗಳ ಜಾತಕ ಕೂಡಿಸುತ್ತ ಬೆಳಗ್ಗೆ ಎದ್ದ ಕೂಡಲೇ ಹೋಟೆಲಿಗೆ ಓಡುತ್ತಿದ್ದ ಜ್ಯೋತಿಶಾಸ್ತ್ರಜ್ಞನ ದಿನಚರಿಯಿಂದ ಬೇಸತ್ತ ಮಡದಿ, ಭವಿಷ್ಯದಲ್ಲಿ ಒಂದಿಷ್ಟೂ ನಂಬಿಕೆಯಿಲ್ಲದ, ವರ್ತಮಾನದಲ್ಲಿ ವಿಜೃಂಭಿಸುವ ವ್ಯಕ್ತಿಯನ್ನು ಒಳಗಾಕಿಕೊಂಡು ಆರಾಮವಾಗಿದ್ದಳಂತಲ್ಲಾ. ಇದನ್ನು ಪತ್ತೆ ಹಚ್ಚಿದ ಜ್ಯೋತಿಶಾಸ್ತ್ರಜ್ಞ "ನೋಡು, ನಿನ್ನ ಜಾತಕದಲ್ಲಿ ಈಗ ಶನಿ ಪ್ರವೇಶವಾಗಿದೆ. ಶನಿಯಿಂದ ದೂರವಿದ್ದರೆ ಕ್ಷೇಮ" ಎಂದನಂತಲ್ಲಾ. ಇದರಿಂದ ಕೆರಳಿದ ಹೆಂಡತಿ "ಶನಿಯಿಂದ ನೀನೂ ದೂರವಿದ್ದರೆ ಒಳ್ಳೆಯದು. ಇಲ್ಲದಿದ್ದರೆ ನಾನು ಶನಿ ಜೊತೆ ಓಡಿಹೋಗುತ್ತೇನೆ" ಎಂದಳಂತಲ್ಲಾ, ಹೆದರಿದ ಜ್ಯೋತಿಷಿ ಹೆಂಡತಿಯನ್ನೇ ಸೆಟ್ಟಿಗೆ ಇಟ್ಟುಕೊಳ್ಳದ ಈತ, ಇನ್ನೇನು ಭವಿಷ್ಯ ಹೇಳುತ್ತಾನೆಂದು ಜನಗಳು ಭಾವಿಸಿದರೆ ಗತಿಯೇನೆಂದು ಹಾಗಿದ್ದ ತನ್ನ ಮನೆಯನ್ನೇ ಪ್ರವೇಶ ಮಾಡಿರುವುದನ್ನು ಮುಚ್ಚಿಸಿ, ಕಾಯಂ ಹೋಟೆಲಿನಲ್ಲೇ ಉಳಿದು, ಈ ನಾಡಿನ ಜನರ ಭವಿಷ್ಯ ಹೇಳುತ್ತ ಕುಳಿತಿದ್ದಾನಂತಲ್ಲಾ, ಥೂತ್ತೇರಿ!!! ■

ಮೈಸೂರು ಜಿ.ಪಂ: ಅಧ್ಯಕ್ಷಗಾದಿಗೆ 'ಆಪರೇಷನ್' ಶುರು



ಜಿಲ್ಲಾ ಪಂಚಾಯ್ತಿ ಫಲಿತಾಂಶ ಹೊರಬಿದ್ದ ಬರೋಬ್ಬರಿ ಒಂದು ತಿಂಗಳ ನಂತರ ಅಧ್ಯಕ್ಷ-ಉಪಾಧ್ಯಕ್ಷರ ಮೀಸಲಾತಿಯನ್ನು ಸರ್ಕಾರ ಹೊರಡಿಸಿದೆ. ಎಲ್ಲಾ ಜಿಲ್ಲೆಯಲ್ಲೂ ಲಾಭ-ನಷ್ಟದ ಲೆಕ್ಕಾಚಾರ ಹಾಕಿಯೇ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಜಿಲ್ಲೆ ಮೈಸೂರಿನಲ್ಲಿ ಶತಾಗತಾಯ ಅಧಿಕಾರ ಹಿಡಿಯಲೇಬೇಕು ಅಂತ ತೀರ್ಮಾನಿಸಿರುವ ಕಾಂಗ್ರೆಸ್, ಜೆಡಿಎಸ್ ಬಂಡಾಯವನ್ನೇ ಲಾಭ ಮಾಡಿಕೊಳ್ಳುವ ಸುಳಿವು ನೀಡಿದೆ.

ನಿರೀಕ್ಷೆಯಂತೆ ಮೈಸೂರಿನ ಜಿಪಂ ಅಧ್ಯಕ್ಷ ಗಾದಿ ಹಿಂದುಳಿದ ವರ್ಗ 2ಎ (ಸಾಮಾನ್ಯ) ವರ್ಗಕ್ಕೆ ಮೀಸಲಾಗಿದ್ದರೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿದೆ. ಒಟ್ಟು 49 ಸ್ಥಾನಗಳ ಮೈಸೂರು ಜಿಲ್ಲಾ ಪಂಚಾಯಿತಿಯಲ್ಲಿ ಅಧಿಕಾರಕ್ಕೇರಬೇಕೆಂದರೆ ಮ್ಯಾಜಿಕ್ ಸಂಖ್ಯೆ 25 ತಲುಪಲೇಬೇಕು. ಮುಖ್ಯಮಂತ್ರಿಯ ತವರುಕ್ಷೇತ್ರವಾದ ಚಾಮುಂಡೇಶ್ವರಿ ವಿಧಾನಸಭಾ ಹಾಗೂ ವರುಣಾ ವಿಧಾನಸಭಾ ಕ್ಷೇತ್ರದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಅಭ್ಯರ್ಥಿ ಆಯ್ಕೆಯಲ್ಲಿ ಯಡವಟ್ಟು ಮಾಡಿಕೊಂಡ ಕಾಂಗ್ರೆಸ್ ಪಕ್ಷ ಕೇವಲ 22 ಸ್ಥಾನಗಳನ್ನಷ್ಟೇ ಗೆದ್ದಿದೆ. ಜೆಡಿಎಸ್ 18 ಸ್ಥಾನ ಪಡೆದಿದ್ದರೆ, ಬಿಜೆಪಿಯು 8 ಸ್ಥಾನ ಗಳಿಸಿದೆ. ಇನ್ನುಳಿದಂತೆ ಒಬ್ಬ ಪಕ್ಷೇತರ ಆಯ್ಕೆಯಾಗಿದ್ದಾರೆ.

ಈಗಿರುವ ಸಂಖ್ಯಾಬಲದಲ್ಲಿ ಕಾಂಗ್ರೆಸ್ ಏಕಾಂಗಿಯಾಗಿ ಅಧಿಕಾರ ಹಿಡಿಯಲು ಸಾಧ್ಯವಿಲ್ಲ. ಜೆಡಿಎಸ್ ಜತೆ ಮೈತ್ರಿ ಮಾಡಿಕೊಳ್ಳಬೇಕು ಇಲ್ಲವೇ ಜೆಡಿಎಸ್‌ನ ಅತೃಪ್ತರನ್ನು ಆಮಿಷವೊಡ್ಡಿ ಸೆಳೆದುಕೊಳ್ಳಬೇಕು. ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡರೆ ಜೆಡಿಎಸ್‌ಗೆ ಅಧ್ಯಕ್ಷ ಸ್ಥಾನ ಸಿಗುವುದು ಡೌಟು. ಯಾಕೆಂದರೆ ಜೆಡಿಎಸ್‌ಗಿಂತ ಕಾಂಗ್ರೆಸ್ ಸಂಖ್ಯಾಬಲ ಹೆಚ್ಚಿದೆ. ಅದರ ಬದಲು ಬಿಜೆಪಿ ಜತೆ ಜೆಡಿಎಸ್ ಮೈತ್ರಿ ಮಾಡಿಕೊಂಡರೆ ಜೆಡಿಎಸ್‌ಗೆ ಅಧ್ಯಕ್ಷ ಸ್ಥಾನ ಸುಲಭವಾಗಿ ಒಲಿಯಲಿದೆ.

ಕಳೆದ ಬಾರಿ ಹುಣಸೂರು ಶಾಸಕ ಮಂಜುನಾಥ್ ಅತಂತ್ರ ಸ್ಥಿತಿಯಲ್ಲೇ ತನ್ನ ನಾದಿನಿಯನ್ನು ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಗಿದ್ದರು. ಈ ಬಾರಿಯೂ ಕಾಂಗ್ರೆಸ್‌ನ್ನು ಅಧಿಕಾರಕ್ಕೆ ತರುವ ತಂತ್ರಗಾರಿಕೆಯ ಹೊಣೆಯನ್ನು ಸಿದ್ದರಾಮಯ್ಯ ಮಂಜುನಾಥ್‌ಗೆ ವಹಿಸಿದ್ದಾರೆ. ಹೀಗಾಗಿ ಮ್ಯಾಜಿಕ್ ನಡೆದ ಪಕ್ಷದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯುವುದು ನಿಶ್ಚಿತವಾಗಿದೆ. ಕಾಂಗ್ರೆಸ್ ಶತಗತಾಯ ಅಧಿಕಾರ ಹಿಡಿಯಲು ಉತ್ಸುಕವಾಗಿದ್ದು 'ಆಪರೇಷನ್ ತೆನೆ'ಗೆ ಮುಂದಾಗಿದೆ. ಜೆಡಿಎಸ್‌ನಲ್ಲಿ ಜಿ.ಟಿ. ದೇವೇಗೌಡ, ಸಾ.ರಾ. ಮಹೇಶ್ ಹಾಗೂ ಚಿಕ್ಕಮಾದು ನಡುವೆ ಭಿನ್ನಮತವಿದೆ. ಅದನ್ನೇ ಬಂಡವಾಳ ಮಾಡಿಕೊಂಡು ಕೆಲ ಸದಸ್ಯರನ್ನು ಕಾಂಗ್ರೆಸ್‌ಗೆ ಬೆಂಬಲಿಸುವಂತೆ ಒಳ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ.


ಚಿಕ್ಕಮಾದು ಹಾಗೂ ಸಾ.ರಾ. ಮಹೇಶ್ ತಂತ್ರಗಾರಿಕೆ ರೂಪಿಸುತ್ತಿದ್ದಾರೆ.


ಕಾಂಗ್ರೆಸ್‌ನಿಂದ ಹಿಂದುಳಿದ ವರ್ಗ 2ಎ ಮೀಸಲಿನಲ್ಲಿ ಮಾಜಿ ಸಚಿವ ಅಡಗೂರು ವಿಶ್ವನಾಥ್ ಅವರ ಪುತ್ರ ಅಮಿತ್ ದೇವರಹಟ್ಟಿ ಹಾಗೂ ಇನಕಲ್ ಕ್ಷೇತ್ರದಿಂದ ಆಯ್ಕೆಯಾಗಿರುವ ಇನಕಲ್ ಪಾಪಣ್ಣ ಅವರ ಪುತ್ರ ಯುವನಾಯಕ ರಾಕೇಶ್ ಪಾಪಣ್ಣರ ನಡುವೆ ಪ್ರಬಲ ಪೈಪೋಟಿ ಈಗಾಗಲೇ ಶುರುವಾಗಿದೆ.


ಇನಕಲ್ ರಾಕೇಶ್ ಪಾಪಣ್ಣ ಮುಖ್ಯಮಂತ್ರಿ ಸಿದ್ದರಾಮಯ್ಯನವರೊಟ್ಟಿಗೆ ನಿಕಟಸಂಪರ್ಕ ಹೊಂದಿದ್ದು


ಮುಖ್ಯಮಂತ್ರಿಗಳ ಹೆಚ್ಚಿನ ಅನುದಾನ ಹಾಗೂ ಅಧ್ಯಕ್ಷಗಿರಿಗೆ ಒದಗಿಬರುವ ಸಚಿವ ಸ್ಥಾನಮಾನ್ಯ ಹೊಂದಿದ್ದು, ಐದು ವರ್ಷಗಳ ಕಾಲ ನಿರಾತಂಕ ಅಧಿಕಾರದ ಲಾಲಸೆಗಳಿಂದಾಗಿ 'ಆಪರೇಷನ್ ತೆನೆ'ಗೆ ಹಿರಿಯ ನಾಯಕರು ಸಮ್ಮತಿ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ. ಈ ನಡುವೆ ಚಿಕ್ಕಮಾದು ಅವರು ಹಾಗೂ ಸಾ.ರಾ. ಮಹೇಶ್ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಲು ಇಚ್ಛಿಸಿದ್ದು, ಚಿಕ್ಕಮಾದು ಅವರ ಪುತ್ರ ಹನಗೋಡು ಕ್ಷೇತ್ರದಿಂದ ಆಯ್ಕೆಯಾಗಿರುವ ಅನಿಲ್ ಉಪಾಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿಯಾಗಿದ್ದಾರೆ.

ಈ ನಡುವೆ ಬಿಜೆಪಿ-ಜೆಡಿಎಸ್ ಕೂಡಾವಳಿ ಮಾಡಿಕೊಳ್ಳಲು ಬಹುತೇಕ ದಳ ಸದಸ್ಯರು ಒಪ್ಪಿಗೆ ಸೂಚಿಸಿದ್ದರೂ, ಅಂತರಂಗವಾಗಿ ಸಾ.ರಾ. ಮಹೇಶ್ ಹಾಗೂ ಚಿಕ್ಕಮಾದು ಕಾಂಗ್ರೆಸ್ ಪರವಾಗಿ ಮತ್ತು ಜಿ.ಟಿ. ದೇವೇಗೌಡ ಬಿಜೆಪಿ ಪರವಾಗಿದ್ದಾರೆ. ಜಿ.ಟಿ. ದೇವೇಗೌಡರು ಹುಣಸೂರು ಹಾಗೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿದ್ದು, ಇನ್ನೊಂದು ಅಧಿಕಾರ ಕೇಂದ್ರ ತಮ್ಮ ಕ್ಷೇತ್ರದಲ್ಲಿ ಬರುವುದು ಇಷ್ಟವಿಲ್ಲ. ಸಾ.ರಾ. ಮಹೇಶ್‌ರದ್ದೂ ಇದೇ ಮನಸ್ಥಿತಿ. ಒಟ್ಟಿನಲ್ಲಿ ಜೆಡಿಎಸ್ ಸ್ಥಳೀಯ ನಾಯಕತ್ವದಲ್ಲಿ ಒಬ್ಬರಿಗೊಬ್ಬರು ತೊಡರುಗಾಲಾಗಿದ್ದು ಕಾಂಗ್ರೆಸ್ ಜತೆ ಮೈತ್ರಿಗೆ












ಅವರ ಆಶೀರ್ವಾದದಿಂದ ಜಿ.ಪಂ. ಅಧಿಕಾರ ಹಿಡಿಯಲು ಶತಾಯಗತಾಯ ಪ್ರಯತ್ನ ನಡೆಸುತ್ತಿದ್ದಾರೆ. ಹಣಬಲವೂ ಇರುವ ರಾಕೇಶ್ ಅಧಿಕಾರಕ್ಕೆ ಏರುವ ಲಕ್ಷಣಗಳು ಹೆಚ್ಚಾಗಿವೆ. ಇನ್ನು ಮಾಜಿ ಲೋಕಸಭಾ ಸದಸ್ಯ, ಹಿರಿಯ ಕಾಂಗ್ರೆಸ್ ಮುಖಂಡ ವಿಶ್ವನಾಥ್ ಅವರ ಪುತ್ರ ಡಿಸಿಸಿ ಬ್ಯಾಂಕ್ ಸದಸ್ಯ ಅಮಿತ್ ದೇವರಹಟ್ಟಿಗೆ ತಂದೆಯ ಆಶೀರ್ವಾದವಲ್ಲದೆ ಹಿರಿಯ ಕಾಂಗ್ರೆಸ್ಸಿಗರ ಆಶೀರ್ವಾದವೂ ಇದೆ. ಅಧ್ಯಕ್ಷರಾಗುವ ಎಲ್ಲಾ ಅರ್ಹತೆಗಳಿದ್ದರೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀನಿವಾಸ್ ಪ್ರಸಾದ್ ಹಾಗೂ ಸಚಿವ ಮಹದೇವಪ್ಪರ ವಿರೋಧ ಕಟ್ಟಿಕೊಂಡಿರುವ ತಂದೆ ವಿಶ್ವನಾಥ್‌ರೇ ಅಮಿತ್ ಹಾದಿಗೆ ಅಡ್ಡವಾಗಬಹುದು. ಅಲ್ಲದೇ ಅಮಿತ್ ಪ್ರತಿನಿಧಿಸುತ್ತಿರುವ ಜಿ.ಪಂ. ಕ್ಷೇತ್ರ ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಪ್ರತಿನಿಧಿಸುತ್ತಿರುವ ವಿಧಾನಸಭಾ ಕ್ಷೇತ್ರದಲ್ಲೇ ಬರುತ್ತದೆ. ತಮ್ಮ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯೇ ಜಿ.ಪಂ. ಅಧ್ಯಕ್ಷನಾದರೆ ಮುಂದೆ ಬಲಾಢ್ಯನಾಗಿ ಬೆಳೆದು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತನ್ನ ಸೋಲಿಗೆ ಕಾರಣನಾದರೇನು ಗತಿ ಅನ್ನೋ ಮುಂದಾಲೋಚನೆಗೆ ಬಿದ್ದಿರುವ ಸಾ.ರಾ ಮಹೇಶ್, ಜೆಡಿಎಸ್ ಬೆಂಬಲ ನಿಮಗೆ ಬೇಕಿದ್ದರೆ ಯಾವ ಕಾರಣಕ್ಕೂ ನನ್ನ ಕ್ಷೇತ್ರದೊಳಗಿನ ಕಾಂಗ್ರೆಸ್ ಜಿ.ಪಂ. ಸದಸ್ಯನನ್ನು ಅಧ್ಯಕ್ಷನನ್ನಾಗಿಸಬಾರದು ಅಂತ ಷರತ್ತು ಹಾಕಿದ್ದಾರೆ. ಜೆಡಿಎಸ್ ಮೈತ್ರಿ ಅನಿವಾರ್ಯವಿರುವ ಕಾಂಗ್ರೆಸ್ ಇದಕ್ಕೆ ಸಮ್ಮತಿಸದೆ ಬೇರೆ ದಾರಿಯೇ ಇಲ್ಲ. ಇದೂ ಸಹ ಅಮಿತ್ ಪಾಲಿಗೆ ಮುಳ್ಳಾಗಲಿದೆ.

ಇನ್ನು ತಮ್ಮ ಪುತ್ರ ಅರುಣ್‌ನನ್ನು ಉಪಾಧ್ಯಕ್ಷ ಸ್ಥಾನದಲ್ಲಿ ಕೂರಿಸಲು ಚಿಕ್ಕಮಾದು ಬಯಸಿದ್ದು ಕಾಂಗ್ರೆಸ್ ಈ ಪ್ರಸ್ತಾವಕ್ಕೆ ಹ್ಞೂಂಗುಟ್ಟುವ ಸಾಧ್ಯತೆ ದಟ್ಟವಾಗಿದೆ. ಚಿಕ್ಕಮಾದು ಮಗನಿಗೆ ಉಪಾಧ್ಯಕ್ಷನ ಪಟ್ಟಕಟ್ಟಲು ಜಿ.ಟಿ. ದೇವೇಗೌಡರ ವಿರೋಧವಿದೆ. ಹೀಗಾಗಿ ವೈಯಕ್ತಿಕ ಹಿತಾಸಕ್ತಿಗಳ ನಡುವೆ ಅಧ್ಯಕ್ಷಗಿರಿ ಯಾರ ಪಾಲಾಗಲಿದೆ ಎಂಬ ಕುತೂಹಲವಿದೆ.


ಜಾತ್ಯತೀತ ಜನತಾದಳದಿಂದ ಅಧ್ಯಕ್ಷ ಸ್ಥಾನ ಬಯಸುತ್ತಿರುವ ಬೀರಿ ಹುಂಡಿ ಬಸವಣ್ಣ ಹಿಂದೆ ಸಿದ್ದರಾಮಯ್ಯನವರ ಹಿಂಬಾಲಕರಾಗಿದ್ದರೂ ಕೆಲ ಹಿಂಬಾಲಕರ ಚಿತಾವಣೆಯಿಂದಾಗಿ ಕಾಂಗ್ರೆಸ್‌ನಿಂದ ಹೊರಬಂದು ಜನತಾದಳ ಸೇರಿದಂತವರು. ಇವರಿಗೆ ದೊಡ್ಡಗೌಡರು ಹಾಗೂ ಕುಮಾರಸ್ವಾಮಿಯ ಆಶೀರ್ವಾದವಿದೆ. ಸಿದ್ದು ವಿರುದ್ಧದ ಜಿದ್ದನ್ನು ಗೌಡರು ಮತ್ತು ಕುಮ್ಮಿ ಮುಂದುವರೆಸಿದ್ದೇ ಆದಲ್ಲಿ ಬಸವಣ್ಣ ಅಧ್ಯಕ್ಷರಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.


ಒಟ್ಟಾರೆ ಐದು ವರ್ಷ ಮೈಸೂರು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸ್ಥಾನ ಕ್ಯಾಬಿನೆಟ್ ದರ್ಜೆಯ ಸಚಿವ ಸ್ಥಾನಮಾನ ಹೊಂದಿರುವುದರಿಂದ ಹಾಗೂ ಮುಖ್ಯಮಂತ್ರಿಗಳು ಸ್ವತಃ ತವರು ಕ್ಷೇತ್ರದವರಾಗಿದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಹರಿದುಬರುವ ಸಂಭವ ಇರುವುದರಿಂದ ಅಧ್ಯಕ್ಷ ಸ್ಥಾನಕ್ಕಾಗಿ ಬಾರೀ ಪೈಪೋಟಿ ನಡೆಯುತ್ತಿದೆ.


ಕಾಂಗ್ರೆಸ್ ಅಧಿಕಾರ ಹಿಡಿಯಲು ಓರ್ವ ಪಕ್ಷೇತರರು ಸೇರಿದಂತೆ ಮೂರು ಮತಗಳ ಅಗತ್ಯವಿದ್ದು ಅಂತಿಮ ಕ್ಷಣಗಳಲ್ಲಿ ಕುದುರೆ ವ್ಯಾಪಾರ ನಡೆಯುವ ಸಾಧ್ಯತೆ ಇದೆ. ಅದಕ್ಕಾಗಿ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಮಂಜುನಾಥ್ ಹುಣಸೂರು ಹಗಲಿರುಳೂ ಸುವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮುಂಬರುವ ವಿಧಾನ ಸಭಾ ಚುನಾವಣೆಗಾಗಿ ಮಂಜುನಾಥ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ. ಜಯಕುಮಾರ್ ಮುಂತಾದ ಯುವಪಡೆಯನ್ನೇ ಅಣಿಗೊಳಿಸುವ ಯೋಜನೆಯಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೂ ತವರುಜಿಲ್ಲೆಯಲ್ಲಿ ಅಧ್ಯಕ್ಷ ಸ್ಥಾನ ಉಳಿಸಿಕೊಳ್ಳುವುದು ಪ್ರತಿಷ್ಠೆಯ ಸಂಗತಿಯಾಗಿದೆ. ಎಲ್ಲಕ್ಕೂ ಕಾದು ನೋಡಬೇಕು...












■ ಮೋಹನ್, ಮೈಸೂರು

ಮಂಡ್ಯ: ಹೆತ್ತ ಮಗಳನ್ನೇ ಕೊಲ್ಲಿಸಿತು 'ಜಾತಿ'!

ಮಂಡ್ಯ ಮತ್ತೊಮ್ಮೆ ಬೆಚ್ಚಿಬಿದ್ದಿದೆ. ಇಲ್ಲಿಗೆ ಕೆಲವು ವರ್ಷದ ಹಿಂದಷ್ಟೇ ಮದ್ದೂರು ತಾಲೂಕಿನ ಬೆಳವಾಡಿಯಲ್ಲಿ ಸುವರ್ಣ ಎಂಬ ಅಮಾಯಕ ಹುಡುಗಿಯನ್ನು ಆಕೆಯ ಹೆತ್ತವರೇ ಕೊಂದು ಸುಟ್ಟುಹಾಕಿದ್ದರು. ಅಷ್ಟಕ್ಕೂ ಆ ಹುಡುಗಿ ಮಾಡಿದ್ದ ಅಪರಾಧವಾದರು ಎಂತದ್ದು ಗೊತ್ತಾ? ಒಬ್ಬ ದಲಿತ ಹುಡುಗನನ್ನು ಪ್ರೀತಿಸಿದ್ದು! ಆ ಮರ್ಯಾದಾ ಹತ್ಯೆ ಮಂಡ್ಯದ ಸಭ್ಯ ಮನಸ್ಸುಗಳನ್ನು ಇನ್ನೂ ಕಾಡುತ್ತಿರುವಾಗಲೇ ಮಂಡ್ಯದ ತಿಮ್ಮನಹೊಸೂರಿನಲ್ಲಿ ಮತ್ತೊಂದು ತದ್ರೂಪಿ ವಿಕೃತಿ ಘಟಿಸಿದೆ. ಇಲ್ಲಿ ಜಾತಿಯ ವಿಷವರ್ತುಲಕ್ಕೆ ಬಲಿಯಾದದ್ದು ಮೋನಿಕಾ ಎಂಬ ಹತ್ತೊಂಭತ್ತರ ಎಳೆಬಾಲೆ. ದಲಿತ ಯುವಕನನ್ನು ಪ್ರೀತಿಸಿದ ಕಾರಣಕ್ಕೆ ಹೆತ್ತಪ್ಪನೇ ಆಕೆಯ ಉಸಿರುಗಟ್ಟಿಸಿ ಕೊಂದು, ಸುಟ್ಟುಹಾಕಿದ್ದಾನೆ. ಭಾರತ ಬಹಳಷ್ಟು ಮುಂದುವರೆದಿದೆ, ಇಲ್ಲೀಗ ಜಾತಿ-ಗೀತಿ ಅನ್ನುವಂಥದ್ದೇನೂ ಇಲ್ಲ ಅಂತ ಬಡಬಡಿಸುವ ಅಕ್ಷರಗಾರ ಭೈರಪ್ಪನಂತವರು ಮೋನಿಕಾಳ ಸಾವಿಗೆ ಎಂತಹ ವ್ಯಾಖ್ಯಾನ ಕೊಡುತ್ತಾರೋ ಗೊತ್ತಿಲ್ಲ, ಆದರೆ ಹೆತ್ತಮಗಳನ್ನೇ ಕೊಲ್ಲುವಷ್ಟು ತಂದೆಯ ಹೃದಯವನ್ನು ನಿರ್ದಯಿಯಾಗಿಸುವ ಈ ಜಾತಿಯ ಹಂಗನ್ನು ಕಳಚಿಕೊಂಡು ಭಾರತ ಹೊರಬಂದಿಲ್ಲ ಎನ್ನುವುದನ್ನು ಮೋನಿಕಾಳ ಸಾವು ಒತ್ತಿ ಹೇಳುತ್ತಿದೆ.



ಮೋನಿಕಾ

ಮುಗ್ಧೆ ಮೋನಿಕಾ

ಮೂಲತಃ ಕೊತ್ತತ್ತಿ ಹೋಬಳಿಯ ತಿಮ್ಮನಹೊಸೂರಿನವಳಾದ ಮೋನಿಕಾ ಮಂಡ್ಯದ ಗಾಂಧಿನಗರದ 3ನೇ ಕ್ರಾಸ್‌ನಲ್ಲಿರುವ ತನ್ನ ಸೋದರಮಾವ ಸುರೇಶ್ ಎಂಬಾತನ ಮನೆಯಲ್ಲಿದ್ದುಕೊಂಡು ಕೊಮ್ಮೇರಹಳ್ಳಿಯ ವಿಶ್ವಮಾನವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ (ಸೈನ್ಸ್) ಓದುತ್ತಿದ್ದಳು. ಒಕ್ಕಲಿಗ ಜಾತಿಗೆ ಸೇರಿದ ಈಕೆಯ ತಂದೆ ಮೋಹನ್ ತಿಮ್ಮನಹೊಸೂರಿನಲ್ಲಿ ಪ್ರಭಾವಿ ಹೌದು. 25 ಎಕರೆ ಜಮೀನು, ರೈಸ್‌ಮಿಲ್ ಇದೆ. ಸಾಕಷ್ಟು ಶ್ರೀಮಂತ ಆಸಾಮಿ. ಓದಿನಲ್ಲಿ ಮುಂದಿದ್ದ ಮೋನಿಕಾ ಅದೇ ಓಣಿಯಲ್ಲಿದ್ದ 23 ವರ್ಷದ ನರೇಂದ್ರಬಾಬು ಎಂಬ ದಲಿತ ಹುಡುಗನನ್ನು ಪ್ರೀತಿಸುತ್ತಿದ್ದಳು. ನರೇಂದ್ರಬಾಬುವಿನ ತಾಯಿ ಹಾಸ್ಟೆಲ್‌ವೊಂದರಲ್ಲಿ ಅಡುಗೆ ಸಹಾಯಕಿಯಾಗಿ ಕೆಲಸ ಮಾಡಿಕೊಂಡಿದ್ದಾರೆ. ಅವರಿಬ್ಬರದು ಸತತ ಎರಡು ವರ್ಷಗಳ ಪ್ರೀತಿ. ಈ ವಿಚಾರ ಎರಡೂ ಕುಟುಂಬಗಳಿಗೂ ಗೊತ್ತಾಯಿತು. ಆದರಲ್ಲೂ ಜಾತಿಯ ಕಾರಣಕ್ಕೆ ಕುದ್ದುಹೋದ ಮೋನಿಕಾಳ ಮನೆಯವರು ಪಿಯುಸಿ ಮುಗಿಯುತ್ತಿದ್ದಂತೆಯೇ ಆಕೆಗೆ ಮದುವೆ ಮಾಡಿಬಿಡುವ ತಯಾರಿ ಶುರುಮಾಡಿದರು. ಇದು ಮೋನಿಕಾಳಿಗೆ ಗೊತ್ತಾಗಿ ಪಿಯುಸಿ ಪರೀಕ್ಷೆ ಮುಗಿದಕೂಡಲೇ ಇಬ್ಬರು ಓಡಿಹೋಗಿ ಮದುವೆಯಾಗೋಣ ಅಂತ ನರೇಂದ್ರಬಾಬುವಿನ ಬಳಿ ಹೇಳಿಕೊಂಡಳು.

ರಸಾಯನಶಾಸ್ತ್ರ ಪತ್ರಿಕೆ ಸೋರಿಕೆಯಾದ ಕಾರಣ ಮಾರ್ಚ್ 31ರಂದು ಮರುಪರೀಕ್ಷೆ ಇತ್ತು. ಮೋನಿಕಾ ಮಾರ್ಚ್ 28ರಂದು ಪರೀಕ್ಷೆಯ ಕೊನೆಯ ದಿನ, ಮರುಪರೀಕ್ಷೆ ಕಟ್ಟಲು 5 ಸಾವಿರ ರೂ. ಹಣ ಬೇಕೆಂದು ತಂದೆಯನ್ನು ಕೇಳಿದಳು. ಮಗಳಿಗೆ ಐದು ಸಾವಿರ ಕೊಟ್ಟ ತಂದೆ ಮೋಹನ್ ಅವಳನ್ನು ಕಾಲೇಜಿನ ಬಳಿ ಡ್ರಾಪ್ ಮಾಡಿಹೋದ. 28 ರಂದು ಪರೀಕ್ಷೆ ಬರೆದು ಹೊರಬಂದ ಮೋನಿಕಾ ಪ್ರೇಮಿ ನರೇಂದ್ರಬಾಬು ಜೊತೆ ಪ್ರೇಮಪಲಾಯನಗೈದಳು.

ಮಗಳು ಮನೆಬಿಟ್ಟು ಓಡಿಹೋಗಿರುವ ಸಂಗತಿ ಗೊತ್ತಾದಕೂಡಲೇ ತಂದೆ ಮೋಹನ್ ಹಾಗೂ ಮೋನಿಕಾಳ ಮಾವಂದಿರಾದ ಸುರೇಶ ಹಾಗೂ ರಾಮಕೃಷ್ಣರು ಎರಡು ದಿನಗಳ ಕಾಲ ಅಲ್ಲಿ ಇಲ್ಲಿ ಹುಡುಕಾಟ ನಡೆಸಿದರು. ಕೊನೆಗೆ ಮಾರ್ಚ್ 31ರಂದು ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೋನಿಕಾ ಕಾಣೆಯಾದ ಬಗ್ಗೆ ದೂರು ನೀಡಿದರು. ತಮ್ಮ ದೂರಿನಲ್ಲಿ ನರೇಂದ್ರಬಾಬು ಮೇಲೆ ಅನುಮಾನವಿದೆ ಅಂತ ಉಲ್ಲೇಖಿಸಿದರು.

ಪೊಲೀಸರು ನರೇಂದ್ರಬಾಬು ಮನೆಗೆ ಹೋಗಿ ಆತನ ತಾಯಿ ಹಾಗೂ ಸ್ನೇಹಿತರ ವಿಚಾರಣೆ ನಡೆಸಿದರು. ಈ ವಿಚಾರ ಮೋನಿಕಾಳಿಗೆ ತಿಳಿಯುತ್ತಿದ್ದಂತೆಯೇ ಭಯಗೊಂಡ ಆಕೆ ಮನೆಗೆ ವಾಪಸಾದಳು. ಕೊಟ್ಟ ದೂರನ್ನು 'ಮರ್ಯಾದೆಯುತ'ವಾಗಿ ವಾಪಸ್ ಪಡೆಯಲು ಮೋನಿಕಾಳನ್ನೇ ಪೊಲೀಸ್ ಠಾಣೆಗೆ ಕರೆತಂದ ಅವಳ ತಂದೆ ಮತ್ತು ಸೋದರ ಮಾವಂದಿರು 'ನಾನು ವಿಶ್ವಮಾನವ ಕಾಲೇಜಿನಲ್ಲಿ ಪಿಯುಸಿ ವ್ಯಾಸಂಗ ಮಾಡುತ್ತಿದ್ದು, ದಿನಾಂಕ 28.03.2016ರಂದು ಪರೀಕ್ಷೆಯ ಕೊನೆಯ ದಿನವಾಗಿದ್ದು, ಅದನ್ನು ಮುಗಿಸಿ ಮಾರ್ಚ್ 31ರ ರಸಾಯನಶಾಸ್ತ್ರ ಮರುಪರೀಕ್ಷೆ ತಯಾರಿ ಮಾಡಿಕೊಳ್ಳಲು ಮನೆಯಲ್ಲಿ ತಿಳಿಸದೆ ಬೆಂಗಳೂರಿನಲ್ಲಿರುವ ಮಾವ ಗೋಪಾಲಕೃಷ್ಣರ ಮನೆಗೆ ಹೋಗಿದ್ದೆ' ಅಂತ ಹೇಳಿಕೆ ಕೊಡಿಸಿದರು. ಇದಿಷ್ಟೂ ಹೇಳಿಕೆಯನ್ನು ಮೋನಿಕಾ ಸ್ವಯಂ ಬರವಣಿಗೆಯಲ್ಲಿ ಬರೆಸಿಕೊಂಡ ಪೊಲೀಸರು ದೂರನ್ನು ವಜಾ ಮಾಡಿ, ಆಕೆಯನ್ನು ಮನೆಗೆ ಕಳುಹಿಸಿದರು.


ನಡೆಯಿತು ಮರ್ಯಾದೆಗೇಡು ಹತ್ಯೆ

ಮೋನಿಕಾಳನ್ನು ತಿಮ್ಮನಹೊಸೂರಿಗೆ ಕರೆತಂದ ಆಕೆಯ ತಂದೆ ಮೋಹನ್, ತಾಯಿ ಭಾಗ್ಯಮ್ಮ, ಸೋದರ ಮಾವಂದಿರಾದ ಸುರೇಶ್, ರಾಮಕೃಷ್ಣ ಮೊದಲಾದ ಸಂಬಂಧಿಗಳು ದಲಿತ ಜಾತಿಗೆ ಸೇರಿದ ನರೇಂದ್ರಬುಬುವನ್ನು ಮರೆತುಬಿಡುವಂತೆ ಒತ್ತಡ ಹೇರಿದರು. ಮೋನಿಕಾ ಅದಕ್ಕೆ ಸುತಾರಾಂ ಒಪ್ಪಲಿಲ್ಲ. ಯಾವಾಗ ತಂದೆ-ತಾಯಿ, ಮಾವಂದಿರ ಒತ್ತಾಯ ಹೆಚ್ಚಾಯಿತೋ ಆಗ ನರೇಂದ್ರಬಾಬುವಿಗೆ ಫೋನ್ ಮಾಡಿದ ಮೋನಿಕಾ 'ಇಂದು ಮಧ್ಯರಾತ್ರಿ ಮನೆಬಿಟ್ಟು ಬರುವುದಾಗಿ' ಹೇಳಿದಳು. ಅದರಂತೆ ಏಪ್ರಿಲ್ 2ರ ಮಧ್ಯರಾತ್ರಿ ಸುಮಾರಿಗೆ ಒಡವೆ, ದುಡ್ಡು, ಬಟ್ಟೆ ಎಲ್ಲವನ್ನು ಸಿದ್ಧಮಾಡಿಕೊಂಡ ಮೋನಿಕಾ ಮನೆ ಬಿಟ್ಟು ಹೊರಡಲು ಯತ್ನಿಸಿದಳು. ಮೊದಲೇ ಆಕೆಯ ಮೇಲೆ ನಿಗಾ ಇಟ್ಟಿದ್ದ ಹೆತ್ತವರು ಆಕೆಯನ್ನು ತಡೆದು ಮನೆಗೆ ವಾಪಸ್ ಕರೆತಂದರು. ಆಕೆ ತಮ್ಮ ಮಾತಿಗೆ ಬಗ್ಗುವುದಿಲ್ಲ ಅಂತ ಯಾವಾಗ ತಂದೆ ಮೋಹನ್‌ಗೆ ಖಾತ್ರಿಯಾಯಿತೋ ಆಗ ಆತ 'ನೀನು ಪ್ರೀತಿಸಿದವನೊಂದಿಗೆ ಹೋಗಿ ಅವನನ್ನೇ ಮದುವೆಯಾಗು, ಆದರೆ ನಾನು ಸ್ವಇಚ್ಛೆಯಿಂದ ಹೋಗುತ್ತಿದ್ದೇನೆ. ನನ್ನ ಪ್ರಾಣಕ್ಕೆ ತೊಂದರೆಯಾದರೆ ನನ್ನ ತಂದೆ-ತಾಯಿ ಜವಾಬ್ದಾರರಲ್ಲ' ಅಂತ ಪತ್ರ ಬರೆದು ಕೊಡು ಅಂತ ಬ್ಲ್ಯಾಕ್‌ಮೇಲ್ ಮಾಡಿದ. ಹುಚ್ಚು ವಯಸ್ಸಿನ ಮೋನಿಕಾ ಅದಕ್ಕೂ ಸೈ ಅಂದು, ಅವರೇಳಿದಂತೆ ಪತ್ರ ಬರೆದುಕೊಟ್ಟಳು.

ತಂದೆ ಮೋಹನ್ ಆ ವೇಳೆಗಾಗಲೇ ಅಕ್ಷರಶಃ ಕೆರಳಿಹೋಗಿದ್ದ. ಸಿಟ್ಟಿನಲ್ಲಿ ಮೋನಿಕಾಳನ್ನು



ಮೋನಿಕಾ ತಂದೆ ಮೋಹನ್



ಮನಸೋಇಚ್ಛೆ ಹೊಡೆಯಲು ಶುರು ಮಾಡಿದ. ಮೋಹನ್‌ಗೆ ಮೋನಿಕಾಳ ಸೋದರ ಮಾವಂದಿರ ಸಾಥ್ ಇತ್ತು. ಆಗ ತಡೆಯಲು ಬಂದ ತಾಯಿ ಭಾಗ್ಯಮ್ಮ ಹಾಗೂ ಇತರ ಸಂಬಂಧಿಕರನ್ನು ಇನ್ನೊಂದು ಮನೆಗೆ ಕಳುಹಿಸಿದ ಅವರು ರೈಸ್‌ಮಿಲ್ ಬಳಿ ಇರುವ ಮತ್ತೊಂದು ಮನೆಗೆ ಮೋನಿಕಾಳನ್ನು ಕರೆದೊಯ್ದರು. ಅಲ್ಲಿ ಮೋನಿಕಾಳನ್ನು ಸಿಕ್ಕಾಪಟ್ಟೆ ಹೊಡೆದರು. ಏಟುಗಳನ್ನು ತಾಳದೆ ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದ ಮೋನಿಕಾಳ ಕುತ್ತಿಗೆ ಮೇಲೆ ಕಾಲಿಟ್ಟ ಮೋಹನ್, ನಿರ್ದಯವಾಗಿ ಉಸಿರುಗಟ್ಟಿಸಿ ಆಕೆಯನ್ನು ಕೊಂದು ಹಾಕಿದ.

ತಾವು ಮಾಡಿದ ಈ ಭಯಾನಕ ಕೊಲೆಯಿಂದ ಬಚಾವಾಗಲು ಮೋನಿಕಾಳ ಶವವನ್ನು ರೈಸ್‌ಮಿಲ್ ಮುಂಭಾಗವಿರುವ ಗಸಗಸೆ ಮರಕ್ಕೆ ನೇಣು ಹಾಕಿದರು. ಇದಿಷ್ಟೂ ಕೃತ್ಯ ನಡೆಯುವ ವೇಳೆಗಾಗಲೇ ಸಮಯ ಭಾನುವಾರ ಬೆಳಗಿನ ಜಾವ 4.30 ಆಗಿತ್ತು. ಅಷ್ಟುಹೊತ್ತಿನಲ್ಲೇ ಮೋಹನ್ ಹಾಗೂ ಮೋನಿಕಾಳ ಮಾವಂದಿರಾದ ರಾಮಕೃಷ್ಣ ಸುರೇಶ್ ಊರಿನ ಗ್ರಾಮಸ್ಥರಿಗೆ 'ರಸಾಯನ ಶಾಸ್ತ್ರ ಪೇಪರ್ ಸೋರಿಕೆಯಾಗಿ ಪರೀಕ್ಷೆ ಮುಂದೆ ಹೋಗಿದ್ದರಿಂದ ಮನನೊಂದು ಮೋನಿಕಾ ನೇಣು ಹಾಕಿಕೊಂಡಿದ್ದಾಳೆ' ಅಂತೆ ಕತೆ ಕಟ್ಟಿದರು. ಅವರ ಹಸಿ ಸುಳ್ಳನ್ನೇ ನಂಬಿದ ಊರ ಮುಖಂಡರು ಪೊಲೀಸ್ ಕೇಸಾಗಿ ಊರಿನ ಮರ್ಯಾದೆ ಹೋಗುವುದು ಬೇಡ ಅಂತ ಆತುರಾತುರವಾಗಿ ಊರಿನಲ್ಲಿದ್ದ ಹಬ್ಬದ ನೆಪ ಮುಂದಿಟ್ಟುಕೊಂಡು ಮಾರ್ಚ್ 3ರ ಬೆಳಗಿನ ಜಾವ 5.30ರ ವೇಳೆಗೆ ಶವವನ್ನು ಮೋಹನ್‌ಗೆ ಸೇರಿದ ಕಬ್ಬಿನ ಗದ್ದೆಯಲ್ಲಿ ಸುಟ್ಟು ಹಾಕಿದರು. ವಕೀಲ ಸುರೇಶನ ಸಲಹೆ ಮೇರೆಗೆ ಆಳಿದುಳಿದ ಮೋನಿಕಾಳ ಮೂಳೆಯನ್ನು, ಅವಳ ಬಳಿ ಇದ್ದ ಫೋಟೋ ಹಾಗೂ ಬಟ್ಟೆಯನ್ನು ಪೆಟ್ರೋಲ್ ಸುರಿದು ಸಂಪೂರ್ಣವಾಗಿ ಸುಟ್ಟುಹಾಕಿದರು. ಒಟ್ಟಾರೆಯಾಗಿ ಪೊಲೀಸರಿಗೆ ಯಾವುದೇ ಸಾಕ್ಷ್ಯ ಸಿಗದಂತೆ ಮಾಡುವುದು ಲಾಯರ್ ಸುರೇಶನ ಐಡಿಯವಾಗಿತ್ತು.

ಸಾವಿಗೆ ಸಿಕ್ಕ ಟ್ವಿಸ್ಟ್

ಮೋನಿಕಾಳನ್ನು ಕೊಂದು ಸುಟ್ಟುಹಾಕಿದ ಸಂಗತಿ ಮಾರ್ಚ್ 3ರ ಬೆಳಿಗ್ಗೆ 11 ಗಂಟೆಯ ವೇಳೆಗಾಗಲೇ ಮಾಧ್ಯಮಗಳಿಗೆ ಗೊತ್ತಾಯಿತು. ತಿಮ್ಮನಹೊಸೂರಿನ ಗ್ರಾಮದವರೇ ಕೆಲವರು ಮೋಹನ್, ಸುರೇಶ್, ರಾಮಕೃಷ್ಣ ಕೊಂದು ಟ್ರಾಕ್ಟರ್ ಚಾಲಕ ಸುನೀಲ್ ಮೊದಲಾದವರ ಜತೆ ಸೇರಿ ಶವವನ್ನು ಸುಟ್ಟು ಹಾಕಿದ್ದಾರೆ ಎಂಬ ಮಾಹಿತಿ ನೀಡಿದರು. ಯಾವಾಗ ಮಾಧ್ಯಮಗಳಲ್ಲಿ ಮೋನಿಕಾಳ ಸಾವಿನ ಹಿಂದೆ ಪೋಷಕರ ಕೈವಾಡದ ಶಂಕೆಯ ಸುದ್ದಿ ಬಿತ್ತರವಾಗತೊಡಗಿತೋ ಆಗ ಎಸ್ಪಿ ಸುಧೀರ್‌ಕುಮಾರ್ ರೆಡ್ಡಿ ಅಲರ್ಟ್ ಆಗಿ ಮಂಡ್ಯ ಗ್ರಾಮಾಂತರ ಠಾಣೆಯ ಸಿಪಿಐ ಲೋಕೇಶ್, ಪಿಎಸ್‌ಐಗಳಾದ ಆನಂದಕುಮಾರ್, ಭವಿತಾರಿಗೆ ತನಿಖೆ ನಡೆಸುವಂತೆ ಸೂಚನೆ ನೀಡಿದರು. ವಿಚಾರಣೆಗೆಂದು ಮೋಹನ್, ಸುರೇಶ್‌ರನ್ನು ಪೊಲೀಸರು ಠಾಣೆಗೆ ಕರೆತರುತ್ತಿದ್ದಂತೆಯೇ ಊರಿನ ನೂರಾರು ಜನ ಠಾಣೆ ಮುಂದೆ ಜಮಾಯಿಸಿ ಮೋನಿಕಾಳೇ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ; ಅನವಶ್ಯಕವಾಗಿ ಆಕೆಯ ತಂದೆ, ಸೋದರ ಮಾವಂದಿರನ್ನು ಛಳುಕು ಹಾಕಲಾಗುತ್ತಿದೆ ಅಂತ ಪ್ರತಿಭಟನೆ ನಡೆಸಿದರು.

ಪೊಲೀಸ್ ಠಾಣೆಯಲ್ಲೂ ಮೋಹನ್ ಮತ್ತು ಸುರೇಶ್ ಅದೇ ಕಾಗಕ್ಕ-ಗುಬ್ಬಕ್ಕ ಕತೆ ಹೆಣೆದು ಆಕೆಯೇ ಬರೆದುಕೊಟ್ಟಿದ್ದ ಡೆತ್‌ನೋಟ್ ಮುಂದಿಟ್ಟು ಬಚಾವಾಗಲು ಯತ್ನಿಸಿದರು. ಆದರೆ ಪೊಲೀಸರು ಆ ಕಥೆ ನಂಬಲು ಸಿದ್ಧರಿರಲಿಲ್ಲ. ಪೊಲೀಸ್ ಉಪಚಾರ ಜೋರಾಗುತ್ತಿದ್ದಂತೆಯೇ ಬಾಯ್ಬಿಟ್ಟ ಅವರು ತಾವೇ ಅವಳನ್ನು ಕೊಂದು ಮರಕ್ಕೆ ನೇಣು ಹಾಕಿದ್ದು ಮತ್ತು ಆತುರಾತುರವಾಗಿ ಸುಟ್ಟು ಹಾಕಿದ್ದು ಅಂತ ತಪ್ಪೊಪ್ಪಿಕೊಂಡರು. ಆ ಸುದ್ದಿಗೆ ಕೇವಲ ತಿಮ್ಮನಹೊಸೂರಿನ ಜನ ಮಾತ್ರವಲ್ಲ ಇಡೀ ರಾಜ್ಯವೇ ಬೆಚ್ಚಿಬಿದ್ದಿತು.

■ ವರದಿಗಾರ



ಮೋನಿಕಾಳ ಶವವನ್ನು ಸುಟ್ಟ ಕಬ್ಬಿನ ಗದ್ದೆ



ಪೊಲೀಸ್ ಠಾಣೆ ಎದುರು ಗ್ರಾಮಸ್ಥರ ಪ್ರತಿಭಟನೆ

ಸೊಕ್ಕಿನ ಬೆಕ್ಕಿಗೆ ಯಾರ ಗಂಟೆ ?



ವಿಜಯ್‌ಕಾಂತ್ ಎಂಬ ತಮಿಳು ಬೆಳ್ಳಿತೆರೆಯ ಧೂಮಕೇತುವೊಂದು ಇದ್ದಕ್ಕಿದ್ದಂತೆ ಕೆರಳಿದ ಫಲವಾಗಿ ತಮಿಳರ ದೊರೆಸಾನಿಗೆ ಇನ್ನಿಲ್ಲದ ಮರಣಾನಂದ!

ಇದೇ ಮೇ 14ಕ್ಕೆ ತಮಿಳುನಾಡಿಗೆ ಚುನಾವಣೆ. ವಯೋವೃದ್ಧ ಕರುಣಾನಿಧಿಗೆ ಪುತ್ರ ಕ್ಷೋಭೆಯ ಸಂಕಟ. ವನ್ನಿಯಾರರ ಅಧಿಪತಿ ರಾಮದಾಸ್‌ಗೆ ಹೇಗಾದರೂ ಮಾಡಿ ತನ್ನ ಮಗನನ್ನೊಮ್ಮೆ ತಮಿಳುನಾಡಿಗೆ ಮುಖ್ಯಮಂತ್ರಿಯನ್ನಾಗಿಸಬೇಕೆಂಬ ದುರಾಸೆ. ಇನ್ನು ಕಟ್ಟಾ ತಮಿಳು ಭಾಷಾಂಧ ವೈಕೋ ಯಾನೆ ವೈ. ಗೋಪಾಲಸ್ವಾಮಿಯದ್ದು ಯಾವ ಬಸ್ಸು ಸಿಕ್ಕರೂ ಹತ್ತಿಕೊಂಡು ಗುರಿ ಸಾಧಿಸುವ ತವಕ. ವಿಡುದಲೈ-ಚಿರುತೆಗಳ್ ಅಂದರೆ ದಲಿತ ಪ್ಯಾಂಥರ್ಸ್‌ನ ತೋಲ್ ತಿರುಮಾವಳವನ್, ತಮಿಳು ಮಾನಿಲ ಕಾಂಗ್ರೆಸ್ ಏಕಾಧಿಪತಿ ವಾಸನ್, ತಮಿಳುನಾಡು ಕಾಂಗ್ರೆಸ್ ಅಧಿಪತಿ ಇಳಂಗೋವನ್, ಸಿಪಿಎಂನ ಡಿ. ರಾಜಾ, ತಮಿಳು ಬಿಜೆಪಿ ನಾಯಕಿ ತಮಿಳರಸಿ, ಮುಸ್ಲಿಂ ಲೀಗ್‌ನ ಷೇಕ್ ದಾವೂದ್, ಮಕ್ಕಳ್ ಮುನ್ನೇತ್ರ ಕಳಗಂನ ಶ್ರೀಧರ್ ವಾಂದ್ಯಾರ್- ಹೀಗೆ ತಮಿಳು ಮಣ್ಣಿನ ಅಸಂಖ್ಯಾತ ರಾಜಕೀಯ ಪಕ್ಷಗಳು, ಅವುಗಳ ವರ್ಣರಂಜಿತ ನಾಯಕ ಮಣಿಗಳು, ಅಲ್ಲಿನ ವಿಲಕ್ಷಣ ಲೆಕ್ಕಾಚಾರಗಳು, ರಾಜಕೀಯ ಪಂಡಿತರೆಲ್ಲರನ್ನೂ ಒಂದೇ ಏಟಿಗೆ ಬೆಸ್ತು ಬೀಳಿಸಿ ಕೈಚಳಕ ಮೆರೆದ 'ಅಮ್ಮಾ' ಜಯಮ್ಮನ ಕೈಚಳಕ ಕಂಡು ಖುದ್ದು ಪ್ರಧಾನಿ ಮೋದಿಯೇ ಥಂಡಾ ಹೊಡೆದರಂತೆ.


ಯಾರೆಲ್ಲ ಏನೇನು ಬೊಬ್ಬೆ ಹೊಡೆದರೂ ಈ ಬಾರಿ ಮುಖ್ಯಮಂತ್ರಿ ಜಯಲಲಿತಾರನ್ನು ಕಿತ್ತೊಗೆಯುವುದು ಕಷ್ಟವೆಂಬುದೇ ಈ ಬಾರಿಯ ತಮಿಳುನಾಡು ಚುನಾವಣೆಯ ವೈಚಿತ್ರ್ಯ ಮತ್ತು ವಿಪರ್ಯಾಸ ಕೂಡ.

ಕಳೆದ ಐದು ವರ್ಷದಿಂದ ತಮಿಳುನಾಡನ್ನಾಳುತ್ತಿರುವುದು ಅಮ್ಮ. ಆಕೆಯ ಅಣ್ಣಾ ಡಿಎಂಕೆಯೆಂದರೆ ತಮಿಳರ ಪಾಲಿಗೆ ಅಕ್ಷರಶಃ ಸರ್ವಸ್ವವೆಂಬಂತಿದ್ದದ್ದು ಈಗದಕ್ಕೆ ಹಿಂದಿನ ವರ್ಚಸ್ಸಿಲ್ಲ, ಆದರೆ ಅಮ್ಮನನ್ನು ಕಿತ್ತೊಗೆಯಲು ಬೇಕಾದ ಇಚ್ಛಾಶಕ್ತಿ ಮತ್ತು ರಾಜಕೀಯ ಸಾಮರ್ಥ್ಯವಿದ್ದದ್ದು ಕರುಣಾನಿಧಿಗೆ. ದೌರ್ಭಾಗ್ಯವೆಂದರೆ ಅದು ಬಿಟ್ಟರೆ ಇದು, ಇದು ಬಿಟ್ಟರೆ ಅದು ಎಂಬಂತಿದ್ದ ಡಿಎಂಕೆ ಮತ್ತು ಅಣ್ಣಾ ಡಿಎಂಕೆಗಳ ಜಿದ್ದಾಜಿದ್ದಿಯ ಮಧ್ಯೆ ಈಗ ವಿಜಯಕಾಂತ್ ಎಂಬ ಧೂಮಕೇತುವೊಂದರ ಪ್ರವೇಶ!

ಧೂಮಕೇತು


ತಮಿಳು ರಾಜಕಾರಣದ ವೈಚಿತ್ರ್ಯವಿರುವುದೇ ಈ ಮೂರನೇ ಶಕ್ತಿಯೊಂದರ ಅಸ್ತಿತ್ವದ ನಂತರ. ಕಳೆದ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸಾಂಪ್ರದಾಯಿಕ ದ್ರಾವಿಡ ಕೂಟಗಳೆಂಬಂತೆ ಇದ್ದದ್ದು ಜಯಲಲಿತಾರ ಅಣ್ಣಾ ಡಿಎಂಕೆ ಮತ್ತು ಕರುಣಾನಿಧಿಯ ಡಿಎಂಕೆ ನಡುವಿನ ಜಿದ್ದಾಜಿದ್ದಿಯೆ.

2011ರ ಚುನಾವಣೆಗೂ ಮುನ್ನ ಸತತ ಹತ್ತು ವರ್ಷಗಳ ಕಾಲ ತಮಿಳುನಾಡನ್ನಾಳಿದ್ದು ಡಿಎಂಕೆ ಅಧಿಪತಿ ಕರುಣಾನಿಧಿ. ಆಗ ಕಾಂಗ್ರೆಸ್ ಮಾತ್ರವೇ ಅವರ ಸಹಚಾರಿ ಪಕ್ಷ. ಮನೆಮನೆಗೂ ಟೀವಿ, ಒಂದು ರೂಪಾಯಿಗೆ ಕೆಜಿ ಅಕ್ಕಿ, ಉಚಿತ ಕೇಬಲ್ ಟಿವಿಸಂಪರ್ಕ- ಹೀಗೆ ಜನಕ್ಕೆ ಹೇಸಿಗೆಯಾಗುವಂತೆ ಸಿಕ್ಕಸಿಕ್ಕದ್ದೆಲ್ಲಾ ಉಚಿತವಾಗಿ ಕೊಟ್ಟು ಬಿಟ್ಟರೆ ಜನ ಮೂರನೇ ಬಾರಿಗೆ ತನ್ನನ್ನೇ ಮುಖ್ಯಮಂತ್ರಿ ಮಾಡುತ್ತಾರೆಂಬ ದುರಾಸೆ ಕರುಣಾನಿಧಿಗಿತ್ತು, ಆದರೆ ಡಿಎಂಕೆ ಆಳ್ವಿಕೆಯಲ್ಲಿ ಸಂಭವಿಸಿದ ಅವಾಂತರಗಳಿತ್ತಲ್ಲ; 2ಜಿ ಕರ್ಮಕಾಂಡದಲ್ಲಿ ಡಿಎಂಕೆ ಕೇಂದ್ರ ಸಚಿವ ರಾಜಾ ಜೈಲು ಪಾಲಾಗಿದ್ದು, ಆತನ ಜೊತೆ ಕರುಣಾನಿಧಿಯ ಮುದ್ದಿನ ಮಗಳು ಕನ್ನಿಮೋಳಿಯೂ ಕಂಬಿ ಎಣಿಸಿದ್ದು, ಮಕ್ಕಳಾದ ಸ್ಟಾಲಿನ್ ಮತ್ತು ಅಳಗಿರಿ ನಡುವಿನ ಬೀದಿಕಾಳಗಗಳು, ದಯಾನಿಧಿ ಮಾರನ್ ಕೇಂದ್ರ ಸಂಪರ್ಕ ಮಂತ್ರಿಯಾಗಿ ಮಾಡಿಕೊಂಡ ಪಜೀತಿಗಳು, ರಸ್ತೆ, ಮೋರಿ, ಸೇತುವೆಗಳ ಹೆಸರಲ್ಲಿ ನಡೆದ ಭ್ರಷ್ಟಾಚಾರಗಳೆಲ್ಲದರಿಂದ ರೋಸತ್ತ ತಮಿಳರಿಗೆ ಜಯಲಲಿತಾ ಬಿಟ್ಟರೆ ಬೇರೆ ಆಯ್ಕೆಗೇ ಇರಲಿಲ್ಲ.



ಪನ್ನೀರ್ ಸೆಲ್ವಂ

2011ರ ವಿಧಾನಸಭಾ ಚುನಾವಣೆ ಹೊತ್ತಿಗೆ ಸದ್ದಿಲ್ಲದೆ 'ಅಮ್ಮಾ' ಅಲೆಯೆದ್ದಿತ್ತು, ಅಮ್ಮಾ ಎಂಬ ಎರಡಕ್ಷರವನ್ನು ಎಐಎಡಿಎಂಕೆ ಅದೆಷ್ಟು ವ್ಯವಸ್ಥಿತವಾಗಿ ವಿಜೃಂಭಿಸಿತ್ತೆಂದರೆ ತಮಿಳುನಾಡಿನ ಬಹುತೇಕ ಟೀವಿ ಚಾನಲ್‌ಗಳು, ಪತ್ರಿಕೆಗಳೆಲ್ಲ ಡಿಎಂಕೆ ಮತ್ತು ಕರುಣಾನಿಧಿಯನ್ನು ಹೊತ್ತು ಮೆರೆಸುತ್ತಿದ್ದರೂ ಜನಸಾಮಾನ್ಯರ ಕಣ್ಮಣಿಯೆಂಬಂತೆ ಜಯಲಲಿತಾ ಅಲೆಯೆದ್ದಿತ್ತು, ಇದರ ಪರಿಣಾಮ ಮಾತ್ರ ಎಲ್ಲರ ನಿರೀಕ್ಷೆಯನ್ನೂ ಮೀರಿ ಆರ್ಭಟಿಸಿತ್ತು, ತಮಿಳು ಮೀಡಿಯಾಗಳೆಲ್ಲದರ ರಾಜಕೀಯ ಲೆಕ್ಕಾಚಾರವೇ ತಲೆಕೆಳಗಾಗಿ ಹೋಗಿತ್ತು, ಅಧಿಕಾರಸ್ಥ ಕರುಣಾನಿಧಿಯ ಡಿಎಂಕೆ ಅಧಿಕಾರಕ್ಕೆ ಬರುವುದು ಹಾಗಿರಲಿ ಅಧಿಕೃತ ವಿರೋಧ ಪಕ್ಷವಾಗುವುದಕ್ಕೂ ಲಾಯಕ್ಕಿಲ್ಲದೆ ಮೂರನೇ ಸ್ಥಾನಕ್ಕೆ ನೆಲಕಚ್ಚಿತು. ಅದು ಅಮ್ಮಾ ಅಲೆಯ ಸುಂಟರಗಾಳಿ.




ಕರುಣಾನಿಧಿ

ನೆಲಕಚ್ಚಿದ ಕರುಣಾ

ಇದಕ್ಕೆ ಕಾರಣವಾಗಿದ್ದು ಕೇವಲ ಅಮ್ಮಾ ಮಂತ್ರ ಮಾತ್ರವಲ್ಲ, ಇನ್ನೂ ಒಬ್ಬನಿದ್ದ, ಆತ ವಿಜಯ್‌ಕಾಂತ್. ಕೇವಲ ನಾಲ್ಕೇನಾಲ್ಕು ತಿಂಗಳಲ್ಲಿ ತಾನು ರಾಜಕೀಯಕ್ಕೆ ಪ್ರವೇಶಿಸುತ್ತಿದ್ದೇನೆಂದು ಘೋಷಣೆ ಮಾಡಿ ತನ್ನದೇ ಪ್ರತ್ಯೇಕ ಪಕ್ಷವೊಂದನ್ನು ಕಟ್ಟಿ ಅದಕ್ಕೆ ಡಿಎಂಡಿಕೆ ಅಂದರೆ ದ್ರಾವಿಡ ಮುರಪ್ಪೋಕ್ಕು ಮುನ್ನೇತ್ರ ಕಳಗಂ ಎಂದು ಹೆಸರಿಟ್ಟಿದ್ದ ವಿಜಯ್‌ಕಾಂತ್ ಬರೋಬ್ಬರಿ 28 ಸ್ಥಾನಗಳನ್ನು ಗೆದ್ದಿದ್ದ. ಆತನ ಆರ್ಭಟಕ್ಕೆ ಡಿಎಂಕೆ ಕೇವಲ 21 ಸೀಟುಗಳನ್ನಷ್ಟೇ ಗೆಲ್ಲುವಲ್ಲಿ ಸುಸ್ತು ಹೊಡೆದಿತ್ತು, ಆ ಹೊತ್ತಿಗೆ ವಿಜಯ್‌ಕಾಂತ್ ಅಮ್ಮನ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದ.

ಕೇವಲ ವಿಜಯ್‌ಕಾಂತ್ ಮಾತ್ರವಲ್ಲದೆ ತಮಿಳರ ಪಾಲಿನ ಬಲಾಢ್ಯ ರಾಜಕೀಯ ನಾಯಕನೆಂದೇ ಚಾಲ್ತಿಯಲ್ಲಿದ್ದ ವನ್ನಿಯಾರರ ನಾಯಕ ರಾಮದಾಸ್ ಮತ್ತಾತನ ಪಾಟ್ಟಾಳಿ ಮಕ್ಕಳ್ ಕಚ್ಚಿ (ಪಿಎಂಕೆ), ಪಕ್ಕಾ ತಮಿಳು ಜನಾಂಗೀಯವಾದಿ ವೈಕೋನ ಎಂಡಿಎಂಕೆ, ದಲಿತ ನಾಯಕ ತೋಲ್ ತಿರುಮಾವಳವನ್‌ರ ವಿಡುದಲೈ ಚಿರುತೆಗಳ್ ಇತ್ಯಾದಿ



ವಿಜಯ್‌ಕಾಂತ್


ಸಣ್ಣಪುಟ್ಟ ತಮಿಳು ಕಚ್ಚಿಗಳು ಸೇರಿದಂತೆ ವಿಜಯ್‌ಕಾಂ... ಡಿಎಂಡಿಕೆ ಕೂಡ ಕರುಣಾ ವಿರೋಧಿ ಅಮ... ಒಕ್ಕೂಟದಲ್ಲಿತ್ತು, ಇದರ ಪರಿಣಾಮವೆಂಬಂತೆ ಎಐಎಡಿ... ಇನ್ನೂರಕ್ಕೂ ಅಧಿಕ ಸ್ಥಾನಗಳನ್ನು ಗೆದ್ದು ಅಮ್ಮಾ ಪ್ರಭು... ಸ್ಥಾಪನೆಯಾಯಿತು.

ಈಗ 2016. ಐದು ವರ್ಷಗಳ ಅಮ್ಮಾ ಆಳ್ವಿಕೆ... ಅಂತ್ಯಕಾಲವಿದು. ಚುನಾವಣೆಗಿನ್ನು ತಿಂಗಳಷ್ಟೇ ಬಾಕಿಯಿ... ಅವತ್ತು ಕರುಣಾನಿಧಿ ವಿರುದ್ಧ ಅಮ್ಮನ ಜೊತೆ... ವಿಜಯ್‌ಕಾಂತ್, ಡಿಎಂಕೆಯ ರಾಮದಾಸ್, ವೈಕೋ... ತಿರುಮಾವಳನ್ ಇತ್ಯಾದಿ ಯಾರೊಬ್ಬರೂ ಕೈಜೋಡಿಸುತ್ತ... ಅಂದಮೇಲೆ ಸಹಜವಾಗೇ ಮತ್ತೆ ಕರುಣಾನಿಧಿ... ಮುಖದಲ್ಲಿ ನಗುವಿರಬೇಕಲ್ಲವೆ?

ಏಕಾಂಗಿ ಅಮ್ಮ

ಆದರೆ ಈ ಸಾರಿ ಹಾಗಾಗುತ್ತಿಲ್ಲ. ಒಂದೆ... ಜಯಲಲಿತಾ ಇಲ್ಲವೆ ಕರುಣಾನಿಧಿಯ ಬಳಗ ಎಂಬಂತಿ... ತಮಿಳು ರಾಜಕಾರಣದ ಚಿತ್ರಣವೇ ಕಲಸು ಮೇಲೋ... ವಾಗಿಬಿಟ್ಟಿದೆ. ಅದಕ್ಕೆ ಕಾರಣನಾದವನು ತಮಿಳು ನ... ವಿಜಯ್‌ಕಾಂತ್. ನಿನ್ನೆಮೊನ್ನೆಯ ತನಕ ವಿರೋಧ ಪಕ್ಷ... ನಾಯಕನಾಗಿದ್ದ ವಿಜಯ್‌ಕಾಂತ್‌ಗೀಗ ತಾನೂ ಮುಖ್ಯಮಂ... ಯಾಗಬೇಕೆಂಬ ದುರಾಸೆ. ಅದನ್ನು ಮಹತ್ವಾಕಾಂ... ಎಂದಾದರೂ ಅನ್ನಬಹುದು. ಕಳೆದ ಬಾರಿ ಅಮ್ಮನ ಜೊ... ಹೊಂದಾಣಿಕೆ ಮಾಡಿಕೊಂಡು ಬರೋಬ್ಬರಿ ಒಂಬ... ಪರ್ಸೆಂಟನ್ನು ತಮಿಳರ ಮತಗೆದ್ದ ವಿಜಯ್‌ಕಾಂತ್ ಜಯ... ಆಳ್ವಿಕೆಯುದ್ದಕ್ಕೂ ಕೈಕಟ್ಟಿ ಕೂರಲಿಲ್ಲ, ಒಂದಲ್ಲ ಒಂದು... ದಿನ ತಾನು ತಮಿಳುನಾಡನ್ನಾಳಲೇಬೇಕೆಂಬ ಕನಸು... ಕಟ್ಟಿಕೊಂಡೇ ತನ್ನ ಪಕ್ಷವನ್ನು ಬಲಪಡಿಸುತ್ತ ಬಂದ.

ಕಳೆದ ಚುನಾವಣೆ ಅಂದರೆ 2011 ರಲ್ಲಿ ಅಮ್ಮ... ಅಣ್ಣಾ ಡಿಎಂಕೆ ಒಟ್ಟಾರೆ ಶೇ. 42ರಷ್ಟು ಮತ ಗಳ... ಮಂಚೂಣಿಯಲ್ಲೇನೋ ಇತ್ತು, ಅದೇ ಹೊತ್ತಿಗೆ ಎದುರಾ... ಡಿಎಂಕೆ ಗಳಿಸಿದ್ದು ಶೇ. 28 ರಷ್ಟಾಗಿತ್ತು, ಇದರ ಹೊರತಾ... ವಿಜಯಕಾಂತ್ ಗಳಿಸಿದ್ದ ಶೇ. 9ರಷ್ಟೆಂದರೆ ಅದೇ ಮೂರ... ಬಲಾಢ್ಯ ಪಕ್ಷವಾಗಿತ್ತು, ಆದರೆ ವನ್ನಿಯಾರರ ಪಿಎಂಕೆಯಿತ್ತು...



ಯಾರೇ ಮಂತ್ರಿಯಾದರೂ ಅಮ್ಮನ ಪಾದಕ್ಕೆರಗಲೇಬೇಕು

ಅಮ್ಮನ ಟೀವಿ ಕಳ್ಳರ ಕೈಗೆ!

ಕರುಣಾನಿಧಿ ಹುಟ್ಟುಹಾಕಿದ ಬಿಟ್ಟೀ ಅಕ್ಕಿ ಹಡಬೆ ಕೇಬಲ್ ಚಾಳಿಯ ವಿಕಟವೆಂಬಂತೆ ಅಮ್ಮ ಕೂಡ ಉಚಿ... ಅಕ್ಕಿ ಕೊಡುತ್ತಿದ್ದಾಳಾದರೂ ಅಂಥ ಅಕ್ಕಿಯನ್ನು ಜನ ವಾಪಸ್ಸು ನ್ಯಾಯಬೆಲೆ ಅಂಗಡಿಯವರಿಗೆ ಮಾರಿಕೊಳ್ಳುತ್ತಾ... ಹಾಗೇ ಮಾರಿಕೊಂಡ ಅಕ್ಕಿಯೇ ವ್ಯವಸ್ಥಿತವಾಗಿ ಬೆಂಗಳೂರಿನ ಹೋಟೆಲುಗಳು, ಫುಟ್‌ಪಾತ್ ಕ್ಯಾಂಟೀನ್‌ಗಳಿ... ಸಂದಾಯವಾಗುತ್ತದೆ. ಹಡಬಿಟ್ಟಿ ಸಿಕ್ಕರೆ ಜನರ ಮನಸ್ಥಿತಿ ಏನಾಗುತ್ತದೆ ಎಂಬುದಕ್ಕೆ ಇದು ಉದಾಹರಣೆಯಷ್ಟೆ.

ಅಮ್ಮ ಮಿಕ್ಸಿ ಕೊಟ್ಟಳು, ಗ್ರೆಂಡರ್ ಕೊಟ್ಟಳು. ಕೊಟ್ಟ ಮಿಕ್ಸಿ ಗ್ರೆಂಡರ್‌ಗಳೆಲ್ಲ ಒಂದೇ ತಿಂಗಳಿಗೆ ರಿಪೇರಿ... ಬಂದವು. ಅಮ್ಮಾ ಟೀವಿ ಬಂತು. ಬಿಟ್ಟಿಗೆ ಸಿಕ್ಕ ಟೀವಿಯನ್ನು ಜನ ಪುಡಿಕಾಸಿಗೆ ಲಾಡ್ಜುಗಳಿಗೆ ಮಾರಿಕೊಂಡರು... ಅಮ್ಮಾ ಕ್ಯಾಂಟೀನ್ ಶುರುವಿನಲ್ಲಿ ಜೋರಾಗೇ ಇತ್ತು ಎಷ್ಟೆಂದರೂ ರೂಪಾಯಿಗೊಂದು ಇಡ್ಲೀ ತಾನೆ? ಬರಬರ... ಅಮ್ಮಾ ಕ್ಯಾಂಟೀನೆಂದರೆ ಅದು ಭಿಕ್ಷುಕರ ಕೇಂದ್ರದಂತಾಯಿತು. ತಟ್ಟೆ ಲೋಟ ಕೊಳಕೋ ಕೊಳಕು. ಇಡ್ಲಿ ಸಾಂಬಾರ... ಚೇಪ್ಪೋಚೇಪು. ಆಹಾರ ಶುದ್ಧವಿಲ್ಲ, ರುಚಿ ದೇವರಿಗೇ ಪ್ರೀತಿ!

ಇನ್ನು ಅಮ್ಮಾ ಸಿಮೆಂಟು, ಅಮ್ಮಾ ಉಪ್ಪು, ಅಮ್ಮಾ ಸಕ್ಕರೆ ಎಲ್ಲವೂ ಪಡೆದವರನ್ನೇ ಅಣಕಿಸುವಂತಿತ್ತು... ಸಣ್ಣದೊಂದು ತಪ್ಪಿಗೆ ರಸ್ತೆ ಸಾರಿಗೆಯ ಅಷ್ಟೂ ನೌಕರರನ್ನು ಅಮ್ಮ ಡಿಸ್‌ಮಿಸ್ ಮಾಡಿಬಿಟ್ಟಳು. ಬಸ್ಸುಗಳೇ... ನಡುರಸ್ತೆಯಲ್ಲಿ ಪ್ರಯಾಣಿಕರ ಪಾಡು ನಾಯಿಪಾಡು. ಇನ್ನೆಂಥದೋ ಕಾರಣಕ್ಕೆ ಸೆಕ್ರೆಟರಿಯಟ್‌ನ ಸಿಬ್ಬಂದಿಯನ್ನೇ... ಅಮ್ಮ ಸಸ್ಪೆಂಡ್ ಮಾಡಿಬಿಟ್ಟಳು. ಸರ್ಕಾರಿ ಕಚೇರಿಗಳೆಲ್ಲ ಅಸ್ತವ್ಯಸ್ತ ಜನ ಹಿಡಿಶಾಪ ಹಾಕಿದ್ದೇ ಬಂತು. ಚೆನ್ನೈನ... ಜಲಪ್ರಳಯವಾಯಿತು. ಅಮ್ಮ ತನ್ನ ಅರಮನೆ ಬಿಟ್ಟು ಬರಲೇ ಇಲ್ಲ, ಜನ ಮುಳುಮುಳುಗಿ ಸತ್ತರು. ಪೊಲೀಸ್... ಠಾಣೆಗಳೆಲ್ಲ ಸುಂಕವಸೂಲಿ ಕಟ್ಟೆಗಳಾದವು. ಭೀಕರ ಬರಗಾಲ. ಊರ ತುಂಬ ಸಾರಾಯಿ ಅಂಗಡಿಗಳದ್ದೇ ಸಾಮ್ರಾಜ್ಯ... ಇದನ್ನು ಗೇಲಿ ಮಾಡಿದ ಗಾಯಕ ಕೋವನ್‌ಗೆ ಅಮ್ಮನ ಜೈಲುಭಾಗ್ಯ!

ಅಮ್ಮನ ರಾಜ್ಯದಲ್ಲಿ ಏನುಂಟು ಏನಿಲ್ಲ? ದೇವರೆಂದು ಅಮ್ಮನನ್ನು ಪೂಜಿಸಿದರೂ ದರ್ಶನಭಾಗ್ಯ ಗ್ಯಾರಂಟಿಯಿಲ್ಲ...

ಮ್ಮನೋ ರಾಣಿಯೋ ಸುರಲೋಕದ ದೇವತೆಯೋ...!


ೀರ ವ್ಯಕ್ತಿ ಕೇಂದ್ರಿತ ಅತಿರಂಜಿತ ತಮಿಳುನಾಡು ರಾಜಕಾರಣದ ಲೆಕ್ಕಾಚಾರಗಳೇ . ಕರುಣಾನಿಧಿಯ ಭ್ರಷ್ಟಾಚಾರ, ಮಕ್ಕಳ ಕಚ್ಚಾಟ ಮತ್ತು ಸ್ವೇಚ್ಛಾಚಾರಕ್ಕೆ ಹೋಲಿಸಿದರೆ ಲಲಿತಾ ಆ ಮಟ್ಟದ ಹುಂಬತನಕ್ಕೇನಿಳಿದಿಲ್ಲ. ಆದರೆ ಸರ್ವಾಧಿಕಾರಿಣಿ. ಅಕ್ಷರಶಃ ರಾಣಿ. ಕಳೆದೈದು ವರ್ಷಗಳಿಂದ ಕ್ಷುಲ್ಲಕ ಕಾರಣಕ್ಕಾಗಿ ಕಮ್ಮಿಯೆಂದರೂ ಇಪ್ಪತ್ತು ಮಂತ್ರಿಗಳನ್ನು ಸಂಪುಟದಿಂದ ಕಿತ್ತೊಗೆದಳು. ವಿಚಿತ್ರವೆಂದರೆ ತಮ್ಮ ಮಂತ್ರಿಗಿರಿ ಾರಣಕ್ಕೆ ಯಾರೊಬ್ಬರೂ ಅಮ್ಮನ ವಿರುದ್ಧ ತುಟಿಪಿಟಕ್ಕೆನ್ನಲಿಲ್ಲ.

ಷ್ಟೇ ಏಕೆ; ತನ್ನನ್ನು ಮಂತ್ರಿಸ್ಥಾನದಿಂದ ಅಮ್ಮ ಕಿತ್ತೊಗೆದರೇನಂತೆ ತಾನು ಅಮ್ಮನ ಕೆಗಳನ್ನೇ ತಲೆ ಮೇಲೆ ಹೊತ್ತು ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆಂದು ಪದಚ್ಯುತ ಯೊಬ್ಬ ರೋಡ್ ಷೋ ಕೊಟ್ಟ. ಹುಂಬ ತಮಿಳರ ಮೂಢ ಭಕ್ತಿಯೇ ಅಂಥಾದ್ದು. ನಿವಾಸ ಪೊಯೇಸ್ ಗಾರ್ಡನ್‌ನಿಂದ ಬೀಚ್ ರಸ್ತೆಯ ಸೆಕ್ರೆಟರಿಯೇಟ್‌ಗೆ ಗಲು ಕಮ್ಮಿಯೆಂದರೂ ಎಂಟು ಕಿಲೋಮೀಟರ್ ರಸ್ತೆಯಿದೆ. ಅಮ್ಮಾ ರಿಯೇಟ್‌ಗೆ ಬರುವುದೇ ಅಪರೂಪ. ದೈವಕೃಪೆ ಬೇಕಾದರೆ ಸುಲಭಕ್ಕೆ ಸಿಕ್ಕೀತು. ಅಮ್ಮ ಸೆಕ್ರೆಟರಿಯೇಟ್‌ಗೆ ಬರುವುದೆಂದರೆ ಅದು ದೈವಕೃಪೆಗೂ ಮಿಗಿಲಾದದ್ದು. ಂಥಾ ಶುಭಗಳಿಗೆಯಲ್ಲಿ ಅಮ್ಮ ಸೆಕ್ರೆಟರಿಯೇಟ್‌ಗೆ ಬರುತ್ತಾರೆಂದು ಸುದ್ದಿ ಗೊತ್ತಾಗಿದ್ದೇ ಗಳಲ್ಲಿ ಮಿಂಚಿನ ಸಂಚಾರವಾಗುತ್ತದೆ. ಪೊಯೇಸ್ ಗಾರ್ಡನ್‌ನಿಂದ ಬೀಚ್ ಂಟ ಬರೋಬ್ಬರಿ ಎಂಟು ಕಿ.ಮೀತನಕ ಭಕ್ತಾದಿಗಳು ತರಹೇವಾರಿ ಭಿತ್ತಿಪತ್ರ ಟಗಳನ್ನು ಹಿಡಿದು ಸಾಲುಗಟ್ಟಿ ನಿಲ್ಲುವುದೇನು, ಜಯಘೋಷ ಹಾಕುವುದೇನು ನ ಕಾರುಹೋದ ರಸ್ತೆಗೇ ಅಡ್ಡಬಿದ್ದು ಸಾಷ್ಟಾಂಗ ಹಾಕುವುದೇನು?


ಬಹುಶಃ ವಿಕ್ಟೋರಿಯಾ ರಾಣಿಯೂ ಅಮ್ಮನಷ್ಟು ಅದೃಷ್ಟವಂತೆಯಲ್ಲವೇನೊ! ಪೊಯೇಸ್ ಗಾರ್ಡನ್‌ನಿಂದ ಸೆಕ್ರೆಟರಿಯೇಟ್ ತನಕ ರಸ್ತೆಯ ಏನೊಂದೂ ಕಣ್ಣಿಗೆ ಬೀಳದಂತೆ ಫ್ಲೆಕ್ಸ್, ಬ್ಯಾನರ್, ಕಟೌಟುಗಳು ಸದಾ ಕಾಲಕ್ಕೂ ಇಟ್ಟಾಡುತ್ತವೆ. ಅಮ್ಮನ ಕೃಪೆಗಾಗಿ, ಆಕೆಯ ದರ್ಶನಕ್ಕಾಗಿ ತಮ್ಮ ಪ್ರಾಣವನ್ನೇ ಪಣವಿಡುವ ಹುಚ್ಚರ ಸಂತೆಯೇ ತಮಿಳುನಾಡಿನಲ್ಲಿದೆ. ಅಮಾವಾಸ್ಯೆಗೋ ಹುಣ್ಣಿಮೆಗೋ ಪೊಯೇಸ್ ಗಾರ್ಡನ್‌ನ ತಮ್ಮ ಬಾಲ್ಕನಿಯಲ್ಲಿ ಅಪರೂಪಕ್ಕೊಂಬಂತೆ ಅಮ್ಮ ದರ್ಶನ ಕೊಡುತ್ತಾಳೆ. ಆಕೆಯ ದರ್ಶನ ಭಾಗ್ಯಕ್ಕೆಂದು ಜನಸಾಮಾನ್ಯರ ಜೊತೆ ಮಂತ್ರಿಗಳೂ ಕೆಳಗೆ ಕಾರಿಡಾರ್‌ನಲ್ಲಿ ದೈನೇಸಿಯಾಗಿ ನಿಂತಿರುತ್ತಾರೆ. ಜನ ಸಾಮಾನ್ಯರ್ಯಾರೂ ಅಮ್ಮನೊಂದಿಗೆ ಮಾತಾಡುವಂತಿಲ್ಲ. ಭೇಟಿ ಸಾಧ್ಯವಿಲ್ಲ. ಜನರ ಕತೆ ಒತ್ತಟ್ಟಿಗಿರಲಿ ಖುದ್ದು ಸಂಪುಟದ ಮಂತ್ರಿಗಳಿಗೇ ಅಮ್ಮನ ದರ್ಶನ ಸಾಧ್ಯವಿಲ್ಲ. ವಿಧಾನಸಭಾಧಿವೇಶನಕ್ಕೂ ಅಮ್ಮನ ಬರುವಿಕೆ ಅಪರೂಪ. ಮುಖ್ಯಮಂತ್ರಿಯಾದಾಗಿನಿಂದ ಹೆಚ್ಚೆಂದರೆ ಎರಡೋ ಮೂರೋ ಬಾರಿ ಅಮ್ಮ ಮಾಧ್ಯಮದವರನ್ನು ಕರೆದು ದರ್ಶನ ಕೊಟ್ಟಿರಬೇಕು. ಅದೇ ಪೂರ್ವಜನ್ಮದ ಪುಣ್ಯವೆಂಬಂತೆ ಮೀಡಿಯಾದವರೂ ಪಾವನರಾಗಿರಲಿಕ್ಕೂ ಸಾಕು.

ಭಾರತದ ರಾಷ್ಟ್ರಪತಿಯನ್ನು ಕಾಣುವುದು ಕಷ್ಟವೇನಲ್ಲ. ಪ್ರಧಾನಿ ಮೋದಿ ಭೇಟಿಯೂ ದುಸ್ತರವೇನಲ್ಲ. ಒಬಾಮಾ ಮನಸ್ಸು ಮಾಡಿದರೆಂದರೆ ಭೂಮಿಯ ಯಾವ ಮೂಲೆಯ ಪ್ರಜೆಗೂ ಭೇಟಿ ಕಷ್ಟವೇನಲ್ಲ. ಆದರೆ ಅಮ್ಮನ ದರ್ಶನ ಸಿಗಬೇಕೆಂದರೆ ದೈವಕೃಪೆಯಿರಲೇಬೇಕು!

ಇದನ್ನು ತಮಿಳರ ಕರ್ಮವೆನ್ನಬೇಕೋ ಅಮ್ಮನ ಮಹಿಮೆಯೆನ್ನಬೇಕೋ...?




ಎಂಜಿಆರ್



...ಕೋ



ತೋಲ್ ತಿರುಮಾವಳವನ್



ಕರುಣಾ ಪುತ್ರ ಸ್ಟಾಲಿನ್


ಹೆಚ್ಚೂಕಮ್ಮಿ ವಿಜಯ್‌ಕಾಂತ್‌ನ ಸರಿಸಮಯಕ್ಕೆ ನಿಂತಿತ್ತು. ಶ್ರೀಲಂಕಾ ತಮಿಳರ ಮೇಲಿನ ಕಾಂಡವನ್ನು ವಿರೋಧಿಸಿ ವೈಕೋ ಚುನಾವಣೆಯನ್ನು ಷ್ಕರಿಸಿದ್ದರಿಂದ ಎಂಡಿಎಂಕೆಯ ಬಲವೇನೆಂಬುದು ಢವಾಗೇ ಉಳಿಯಿತು.

ಈ ಪ್ರಕಾರವೇ ಕಳೆದ ಲೋಕಸಭಾ ಚುನಾವಣೆಯಲ್ಲಿ ಕೈಜೋಡಿಸಿದ್ದ ವಿಜಯ್‌ಕಾಂತ್. ವೈಕೋ, ಾವಳನ್ ಇತ್ಯಾದಿಗಳಿಲ್ಲದ ಮೇಲೆ ಅಮ್ಮನ ಬಲ ಬೇಕಿತ್ತಲ್ಲವೇ? ಇವರೆಲ್ಲ ಜತೆಗಿದ್ದು ಶೇ. 42ರಷ್ಟು ಪಡೆದರೆ ಇವರ್ಯಾರೂ ಇಲ್ಲದಾದಾಗ ಪರ್ಸೆಂಟೇಜ್ ವಾಗೇ ಕುಸಿಯಬೇಕಿತ್ತು. ಆದರೆ ನಡೆದದ್ದೇ ಬೇರೆ. ನಿರೀಕ್ಷೆ ಲೆಕ್ಕಾಚಾರಗಳೆಲ್ಲ ತಲೆಕೆಳಗಾದಂತೆ ಬೇರೆ ದ ಪಕ್ಷಗಳ ಜತೆಗೂ ಹೊಂದಾಣಿಕೆಯಿಲ್ಲದೆ ಗಿಯಾಗಿ ಲೋಕಸಭಾ ರಣಾಂಗಣಕ್ಕಿಳಿದ ಅಮ್ಮ ಾರಿ ಹಿಂದಿಗಿಂತಲೂ ಎರಡು ಪರ್ಸೆಂಟ್ ಹೆಚ್ಚು ೆ 44 ಪರ್ಸೆಂಟ್ ಓಟು ಕಿತ್ತಾಗಿತ್ತು.

ಮೋದಿ ಅಲೆಗೂ ಅಣೆಕಟ್ಟು

ಂಥಾ ಮೋದಿ ಅಲೆಯಿದ್ದಾಗ್ಯೂ ತಮಿಳುನಾಡಿನ 39 ಲೋಕಸಭಾ ಸ್ಥಾನಗಳ ಪೈಕಿ ಅಣ್ಣಾ ಡಿಎಂಕೆಯೊಂದೇ 37 ಸ್ಥಾನಗಳನ್ನು ಗೆದ್ದಿತ್ತು. ಕೇವಲ ಕನ್ಯಾಕುಮಾರಿಯಲ್ಲಿ ಗೆದ್ದ ಬಿಜೆಪಿಯ ಒಂದು ಸ್ಥಾನ ಮತ್ತು ಪಾಟ್ಟಾಳಿ ಮಕ್ಕಳ್ ಕಚ್ಚಿ (ಪಿಎಂಕೆ) ಮತ್ತೊಂದನ್ನು ಗೆದ್ದಿದ್ದು ಬಿಟ್ಟರೆ ಡಿಎಂಕೆ, ಕಾಂಗ್ರೆಸ್‌ನ ಯಾರೊಬ್ಬರೂ ಲೋಕಸಭೆ ಪ್ರವೇಶಿಸಲಾಗಲೇ ಇಲ್ಲ. ಅನೇಕರ ಜೊತೆ ಕೈಜೋಡಿಸಿ ಗಳಿಸಿದ ಶೇ. 42 ಎಲ್ಲಿ ಏಕಾಂಗಿಯಾಗಿ ಬಾಚಿದ 44 ಪರ್ಸೇಂಟೆಲ್ಲಿ?

ಹಾಗಂತ ಜನ ವಿಪರೀತವಾಗಿ ಅಮ್ಮನನ್ನು ಬೆಂಬಲಿಸಿದರೆಂದು ಅರ್ಥವೇನಲ್ಲ. ತನ್ನದೇ ಸರ್ಕಾರವಿದ್ದುದರಿಂದ ಸಕಲ ಅಧಿಕಾರ, ಪೊಲೀಸು, ಯಂತ್ರಾಂಗವನ್ನೆಲ್ಲ ಬಳಸಿದ್ದರ ಫಲವಿದಾಗಿರಲೂಬಹುದು. ಇದರಿಂದ ಒಂದಂತೂ ಸಾಬೀತಾಗಿತ್ತು. ಅದು ಅಮ್ಮನ ನಿರಂಕುಶಾಧಿಕಾರ ಮತ್ತು ದುರಹಂಕಾರ. ಬರುಬರುತ್ತ ಸರ್ವಂ ಅಮ್ಮಮಯವಾಗಿ ಹೋಯಿತು. ಕನ್ಯಾಕುಮಾರಿಯಲ್ಲಿ ಬಿಜೆಪಿ ಗೆದ್ದಿದ್ದಕ್ಕೆ ಆ ಕ್ಷೇತ್ರದ ಉಸ್ತುವಾರಿ ಹೊತ್ತಿದ್ದ ಮಂತ್ರಿಯೊಬ್ಬನನ್ನು ರಾತ್ರೋರಾತ್ರಿ ಸಂಪುಟದಿಂದ ಹೊರದಬ್ಬಲಾಯ್ತು. ಪಿಎಂಕೆ ಗೆದ್ದಲ್ಲಿ ಸೋಲಿಗೆ ಕಾರಣನೆಂದು ಇನ್ನೊಬ್ಬ ಮಂತ್ರಿಯ ಖಾತೆ ಬದಲಾಯಿಸಲಾಯಿತು. ಆ ಪಾಟಿ ಬಹುಮತ ಅಂದರೆ 39ರ ಪೈಕಿ 37 ಗೆದ್ದ ಖುಷಿಗಿಂತಲೂ ಕೇವಲ ಎರಡರಲ್ಲಿ ಸೋತ ಕ್ಷುಲ್ಲಕವನ್ನೇ ಗಂಭೀರವಾಗಿ ಪರಿಗಣಿಸಿದ್ದಳು ಅಮ್ಮ!



ದೇವರ ದರ್ಶನ ಸಿಕ್ಕರೂ ಅಮ್ಮನ ದರ್ಶನ ಕಷ್ಟ (ಬಾಲ್ಕನಿಯಲ್ಲಿ ನಿಂತು



ಮೋದಿ ಅಲೆಯಲ್ಲಿ ಇಡೀ ಭಾರತವೇ ಕೊಚ್ಚಿ ಹೋದರೂ ತಮಿಳುನಾಡಿನಲ್ಲಿ ಮಾತ್ರ ಅಮ್ಮನ ಆಣೆಕಟ್ಟೆಯೇ ಅಭೇದ್ಯವಾಗುಳಿದಿತ್ತು!

ಆದರೆ ಇದೆಲ್ಲದರ ಹೊರತಾಗ್ಯೂ ವಿಜಯ್‌ಕಾಂತ್, ಪಿಎಂಕೆ ಮತ್ತು ಡಿಎಂಕೆಯ ಓಟ್ ಬ್ಯಾಂಕ್‌ನಲ್ಲಿ ಗಣನೀಯ ಕುಸಿತವೇನಾಗಿರಲಿಲ್ಲ. ಪಿಎಂಕೆ 10 ಪರ್ಸೆಂಟ್, ವಿಜಯ್‌ಕಾಂತ್ 9 ಪರ್ಸೆಂಟ್‌ನ ಗಳಿಕೆಯನ್ನು ಕಾಯ್ದುಕೊಂಡೇ ಇದ್ದರೆ ಡಿಎಂಕೆ ಮಾತ್ರ ತನ್ನ 28 ಪರ್ಸೆಂಟನಷ್ಟನ್ನು ಕಳಕೊಂಡು 22 ಪರ್ಸೆಂಟಿಗೆ ಕುಸಿದಿತ್ತು. ಅಂದರೆ ಹೆಚ್ಚೂ ಕಮ್ಮಿ ಆರು ಪರ್ಸೆಂಟ್ ಕುಸಿತ!

ಅಲ್ಲಿಗೆ ಆಯಾ ಪಕ್ಷಗಳ ಬಲಾಬಲದಲ್ಲಿ ಗಣನೀಯ ನಷ್ಟವೇನಾಗಿರಲಿಲ್ಲ ಎಂಬುದಂತೂ ನಿಚ್ಚಳವಾಗಿತ್ತು. ಇದನ್ನೇ ಪಕ್ಕಾ ಕಸುಬುದಾರನಂತೆ ಲೆಕ್ಕ ಹಾಕುತ್ತಾ ಕೂತಿದ್ದ ವಿಜಯ್‌ಕಾಂತ್ ಸದ್ದಿಲ್ಲದೆ ಸಣ್ಣಪುಟ್ಟ ಪಕ್ಷಗಳ ಸಂಘಟನೆ ಗಿಳಿದಿದ್ದ. ತಮಿಳುನಾಡಿನ ಪರಂಪರಾಗತ ರಾಜಕಾರಣದ ಲೆಕ್ಕಾಚಾರದಲ್ಲಿದ್ದ ಅನೇಕರು ಅಮ್ಮನ ವಿರುದ್ಧ ಮಿಕ್ಕೆಲ್ಲ ಪಾರ್ಟಿಗಳಿಗಿರುವ ಏಕೈಕ ಅವಕಾಶವೇ ಡಿಎಂಕೆ ಜೊತೆ ಕೈಜೋಡಿಸುವುದು ಮಾತ್ರವೆಂದು!

ಮೂರನೇ ಶಕ್ತಿ!

ಆದರೆ ವಿಜಯ್‌ಕಾಂತ್ ಬೇರೆಯದೇ ಸೂತ್ರ ಹೆಣೆದಿದ್ದ. ಅದು ಡಿಎಂಕೆ- ಅಣ್ಣಾ ಡಿಎಂಕೆಗಳ ಹೊರತಾದ ಮೂರನೇ ಕೂಟ. ಸಹಜವಾಗೇ ತಮಿಳರಿಗಿದು ಹೊಸದೊಂದು ಸಾಧ್ಯತೆಯ ಬಾಗಿಲಾಗಲಿದೆ. ಅದು ಬಿಟ್ಟರೆ ಇದು ಎಂಬಂತಿರುವಲ್ಲಿ ಮೂರನೇ ಶಕ್ತಿಯೊಂದಕ್ಕೆ ಅವಕಾಶ ಕಲ್ಪಿಸುತ್ತದೆ. ಈ ನಿಟ್ಟಿನಲ್ಲಿ ಮೊದಲೇ ರೋಸತ್ತಿದ್ದ ವೈಕೋ ತೋಲ್ ತಿರುಮಾವಳವನ್ ಥರದವರಿಗಿದು ಅನಿವಾರ್ಯ ಆಯ್ಕೆಯಂತಾಗಿತ್ತು. ಎಡಪಕ್ಷಗಳಾದ ಸಿಪಿಐ ಮತ್ತು ಸಿಪಿಎಂಗಳೂ ಸಕಾರಾತ್ಮಕವಾಗಿ ಇದಕ್ಕೆ ಸ್ಪಂದಿಸಿದವು. ಇತ್ತ ಅಮ್ಮ ಅತ್ತ ಡಿಎಂಕೆ ಯಾರೂ ನಿರೀಕ್ಷಿಸದ ಅನಿರೀಕ್ಷಿತ ಧೂಮಕೇತುವೊಂದು ಪ್ರತ್ಯಕ್ಷವಾದಂತೆ ಹುಟ್ಟಿಕೊಂಡ ತೃತೀಯ ರಂಗಕ್ಕೆ ಮಕ್ಕಳ್ ನಲಕೂಟಣಿ ಅಂದರೆ ಪ್ರಜಾಹಿತ ಒಕ್ಕೂಟವೆಂದು ಹೆಸರಿಡಲಾಯ್ತು.

ಆಡಳಿತಾರೂಢ ಜಯಾ ನಿರಂಕುಶಾಧಿಕಾರದ ವಿರುದ್ಧ ಬೇರೆಲ್ಲ ಪಕ್ಷಗಳೂ ವಿಧಿಯಿಲ್ಲದೆ ತನ್ನೊಂದಿಗೆ ಕೈಜೋಡಿಸುತ್ತವೆ ಎಂದು ಲೆಕ್ಕ ಹಾಕಿದ್ದ ಕರುಣಾನಿಧಿಗಿದು ದೊಡ್ಡ ಆಘಾತವಾಗಿತ್ತು. ಯಥಾವತ್ ಕಾಂಗ್ರೆಸ್ ಜೊತೆಗಷ್ಟೇ ಹೊಂದಾಣಿಕೆ ಬಯಸಿದ್ದ ಡಿಎಂಕೆ ಮತ್ತೊಂದೆಂಬಂತೆ ಮುಸ್ಲಿಂ ಲೀಗ್‌ನ ಬೆಂಬಲವನ್ನಷ್ಟೇ ಪಡೆಯಲು ಸಾಧ್ಯವಾಯಿತು. ತಮಿಳುನಾಡಿನಲ್ಲಿ ಕಾಂಗ್ರೆಸ್ ತನ್ನ ಅಂತ್ಯಾವಸ್ಥೆಯಲ್ಲಿದೆ. ಹೆಚ್ಚೆಂದರೆ ಮೂರು ಪರ್ಸೆಂಟ್. ಅದಕ್ಕೆ ಮುಸ್ಲಿಂ ಲೀಗ್ ಸೇರಿಕೊಂಡರೂ ಸೇರದೇ ಹೋದರೂ ದೊಡ್ಡ ವ್ಯತ್ಯಾಸವೇನಿಲ್ಲ. ಅಲ್ಲಿಗೆ ಡಿಎಂಕೆ ಮತ್ತು ವಿಜಯ್‌ಕಾಂತ್ ಒಕ್ಕೂಟಗಳೆರಡೂ ಸಮಬಲಕ್ಕೆ ಬಂದ ಲೆಕ್ಕವೇ.

ಇವೆರಡರ ಬಲಾಬಲಕ್ಕೆ ಹೋಲಿಸಿದರೆ ಹೆಚ್ಚು ಬಲಾಢ್ಯವಾಗಿ ಕಾಣಿಸುವುದು ಅಮ್ಮನ ಪಕ್ಷವೇ. ತಮಿಳು ನಟ ಶರತ್‌ಕುಮಾರ್‌ನ ಪಾರ್ಟಿ, ದೇವರ್ ಜಾತಿ ಪ್ರಾಬಲ್ಯದ ಮುಕುಳುತೇವರ್ ಮುನ್ನೇತ್ರ ಕಳಗಂನ ನಾಯಕ ಶ್ರೀಧರ್ ವಾಂದ್ಯಾರ್ ಇತ್ಯಾದಿ ಪುಡಿಪುಕ್ಕಾ ಏಳು ಪಾರ್ಟಿಗಳಿಗೆ ತಲಾ ಒಂದೊಂದು ಸ್ಥಾನ ಹಂಚಿ ಮಿಕ್ಕಂತೆ 227 ಸ್ಥಾನಗಳಿಗೂ ತನ್ನದೇ ಅಭ್ಯರ್ಥಿಗಳನ್ನು ಅಮ್ಮಾ ಘೋಷಿಸಿದ್ದಾರೆ. ಹೆಚ್ಚೂ ಕಮ್ಮಿ ಅದು ಏಕಾಂಗಿ ಹೋರಾಟದಂತೆಯೇ. ವಿಜಯ್‌ಕಾಂತ್‌ನ ಕೂಟವೇನಾದರೂ ಗಣನೀಯ ಪ್ರಾಬಲ್ಯ ಸಾಧಿಸಿತೆಂದರೆ ಅದು ಡಿಎಂಕೆಗೆ ಲಾಭವಾಗಲಿದೆ ಅಥವಾ ಡಿಎಂಕೆ ಮತ್ತು ವಿಜಯ್‌ಕಾಂತ್ ಕೂಟಗಳು ಸಮಸಮಕ್ಕೆ ಬಂದವೆಂದರೆ ಸಹಜವಾಗೇ ಅಮ್ಮನ ಕುದುರೆಯೇ ಮುಂದಿರುತ್ತದೆ.

ಸದ್ಯ ಸಮೀಕ್ಷೆಗಳೆಲ್ಲವೂ ಮತ್ತೆ ಅಮ್ಮನ ಆಯ್ಕೆ ಸಾಧ್ಯತೆಯನ್ನೇ ಸಮರ್ಥಿಸುತ್ತವೆ. ಹಾಗೇನಾದರೂ ಸಂಭವಿಸಿದ್ದೇ ಆದರೆ ಅಮ್ಮ ಎರಡನೇ ಬಾರಿಗೆ ಹತ್ತು ವರ್ಷ ಕಾಲ ತಮಿಳುನಾಡನ್ನಾಳಿದಂತಾಗುತ್ತದೆ. ಕರುಣಾನಿಧಿ ಇನ್ನು ಹೆಚ್ಚು ದಿನ ಬದುಕುಳಿಯುವುದು ಕಷ್ಟ. ಮಗ ಸ್ಟಾಲಿನ್‌ನ ನವಯುಗವೂ ಕಾಲಿಟ್ಟಂತಿದೆ. ಆದರೆ ವಿಜಯ್‌ಕಾಂತ್ ಎಂಬ ಯಾಗದ ಕುದುರೆಯ ಓಟ, ಆರ್ಭಟ ಎಲ್ಲಿಯತನಕ ಬಂದು ನಿಲ್ಲುತ್ತೋ ಗೊತ್ತಿಲ್ಲ. ಅಗ್ನಿ ಪರೀಕ್ಷೆ ಕೇವಲ ಅಮ್ಮನ ಪಾಲಿಗಷ್ಟೇ ಅಲ್ಲ ಆಕೆಯ ಪರಂಪರಾಗತ ವೈರಿ ಕರುಣಾನಿಧಿಯ ಪಾಲಿಗೂ ಕೂಡ.

ತಮಿಳುನಾಡು ಹಿಂದಿನಂತಿಲ್ಲ. ಏನೇ ಆದರೂ ಅಚ್ಚರಿಯಿಲ್ಲ.

■ ರಾ. ಸೋಮನಾಥ್

ಸಗಣಿ ಸ್ವಾಮಿಯ ಕಾಮಕಾಂಡ

ಕೋರ್ಟಲ್ಲೇ ಸಾಬೀತು!!



ರಾಮಚಂದ್ರಾಪುರ ಮಠದ ಪರಮ ಕೊಳಕು ಪೀಠಾಧಿಪತಿ ರಾಘವೇಶ್ವರ ಭಾರತಿ ಕಾಮ ದುರಂಧರ ನೆಂಬುದು ನ್ಯಾಯಾಲಯದಲ್ಲೇ ನಿಸ್ಸಂಶಯವಾಗಿ ಸಾಬೀತಾಗಿ ಹೋಗಿದೆ! ಗಾಯಕಿ ಪ್ರೇಮಲತಾ ಶಾಸ್ತ್ರಿ ಅತ್ಯಾಚಾರ ಪ್ರಕರಣವನ್ನು ವಿಚಾರಣೆಯೇ ಇಲ್ಲದೆ ಟ್ರಾಯಲ್ ಕೋರ್ಟ್ ವಜಾ ಮಾಡಿರುವುದು ಆಕ್ಷೇಪಾರ್ಹ ಮತ್ತು ಆಘಾತಕಾರಿ ಯಾದರೂ, ತೀರ್ಪು ನೀಡಿರುವ ನ್ಯಾಯಾಧೀಶ ಜೆ.ಬಿ. ಮುದಿಗೌಡರ್ ರಾಘು ಸ್ವಾಮಿಯ "ಅನೈತಿಕ ಅನ್ಯೋನ್ಯತೆ" **(Ill-intimacy)** ದಪ್ಪಕ್ಷರದಲ್ಲಿ ಕೊರೆದಿಟ್ಟಿದ್ದಾರೆ!!

ಈ ಕೇಸಲ್ಲಿ ಯತಿಧರ್ಮ ಮತ್ತು ಸತಿಧರ್ಮ ಎರಡೂ ಇಲ್ಲವೆಂಬ ತೀರ್ಮಾನಕ್ಕೆ ಕೋರ್ಟು ಬಂದಂತಿದೆ. ರೇಪ್ಪೋ? ಟ್ರ್ಯಾಪ್ಪೋ? ಒಟ್ಟಿನಲ್ಲಿ ಬುದ್ಧಿವಂತ ಹವ್ಯಕ ಬ್ರಾಹ್ಮಣರ ಗುರುಪೀಠದಲ್ಲಿರುವ ರಾಘುನ ಬ್ರಹ್ಮಚರ್ಯ ಭಂಗವಾಗಿ ಹೋದುದು ಮಾತ್ರ ಖಾತ್ರಿ! ಕೈಯಲ್ಲಿ ಜಪ ಮಣಿ ಹಿಡಿದು ಬಾಯಲ್ಲಿ ರಾಮಮಂತ್ರ ಜಪಿಸುವ ರಾಘು ನಂಬಿಕೆಗೆ ಅನರ್ಹವಾದ ಅನಾಹುತಕಾರಿ ಕಚ್ಚೆಹರುಕನೆಂಬುದಕ್ಕೆ ಯಾವ ಸಂಶಯವೂ ಈಗ ಉಳಿದಿಲ್ಲ. ಸೆಷನ್ಸ್ ಕೋರ್ಟು ರೇಪ್‌ಕೇಸ್‌ನಿಂದ ರಾಘುಗೆ ಮುಕ್ತಿ ಘೋಷಿಸುತ್ತಿದ್ದಂತೆಯೇ ಮಠದ ತಾಲಿಬಾನಿಗಳು ಕೇಕೆ ಹಾಕಿ ಸಂಭ್ರಮಿಸಿದ್ದೇ ಸಂಭ್ರಮಿಸಿದ್ದು. ಅವರ ಚೋರ ಗುರುವಂತೂ "ಒಂದಲ್ಲ ಒಂದು ದಿನ ಸಂತೋಷ ಹುಡುಕಿಕೊಂಡು ಬರುತ್ತದೆಂದು ತಾಳ್ಮೆಯಿಂದ ಕಾಯುತ್ತಿದ್ದೆ... ಆ ದಿನ ಬಂದಿದೆ" ಎಂದು ಕುಣಿದು ಕುಪ್ಪಳಿಸಿಬಿಟ್ಟ. ಆದರೆ ಬೆನ್ನಿಗೇ ಬಂದ ತೀರ್ಪಿನ ವಿವರಗಳು ದೂರುದಾರೆ ಜತೆ ರಾಘು "ಲಿವ್ ಟು ಗೆದರ್" ಸಂಬಂಧ ಹೊಂದಿದ್ದ ಎಂಬುದನ್ನು ಬಯಲಾಗಿಸುತ್ತಿದ್ದಂತೆಯೇ ಗುರು-ಶಿಷ್ಯ ನೈತಿಕವಾಗಿ ನೆಲಕಚ್ಚಿ ಹೋದರು!!





ವಿಜಯೋತ್ಸವಗಳು ವಿಷಾದ, ಅವಮಾನದ ಸಭೆಗಳಾಗಿ ಹೋದವು!

ಅನಾಚಾರ-ವ್ಯಭಿಚಾರ

ರಾಘುನ ರೇಪ್‌ಕೇಸ್‌ನಲ್ಲಿನ ಹಲವು ಪ್ರಬಲ ಸಾಕ್ಷ್ಯಾಧಾರಗಳನ್ನು ಗಣನೆಗೆ ತೆಗೆದುಕೊಳ್ಳದ ವಿಚಾರಣಾ ನ್ಯಾಯಾಲಯ ಒಂದೆರಡು ದುರ್ಬಲ ಸಾಕ್ಷ್ಯಗಳ ಆಧಾರದ ಮೇಲೆ ರಾಘುನನ್ನು ಬಚಾವು ಮಾಡಿದೆ. ರಾಘು ಅತ್ಯಾಚಾರ ಮಾಡಿಯೇ ಇಲ್ಲವೆಂದು ವಿಶ್ಲೇಷಿಸುವ ತೀರ್ಪಿನ ಉದ್ದಕ್ಕೂ ಆತ ಅನಾಚಾರ ಮಾಡಿದ್ದಾನೆಂಬುದನ್ನು ಸ್ಪಷ್ಟವಾಗಿ ಉಲ್ಲೇಖಿಸಿದೆ! ಸನ್ಯಾಸಿಯ ವೀರ್ಯ ಸ್ಖಲನ ಕನಸಲ್ಲೂ ಆಗುವಂತಿಲ್ಲ. ಹಾಗಾದರೆ ಆತ ಪೀಠೋಚ್ಚಾಟನೆ ಆಗಲೇಬೇಕು. ಇದು ಸನಾತನ ಸನ್ಯಾಸ ಸಂಹಿತೆ. ಸೆಷನ್ಸ್ ತೀರ್ಪಿನಲ್ಲಿ ರಾಘುನ ವೀರ್ಯ ಸಂತ್ರಸ್ತೆಯ ಒಳ ಉಡುಪಿನಲ್ಲಿ ಪತ್ತೆಯಾಗಿರುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ಪ್ರೇಮಲತಾರ ಬಟ್ಟೆಯಲ್ಲಿದ್ದ ವೀರ್ಯಕಲೆ ಹಾಗು ರಾಘುನ ರಕ್ತ ಮಾದರಿಯಲ್ಲಿನ ಡಿಎನ್‌ಎ ಪರಸ್ಪರ ಹೊಂದಾಣಿಕೆಯಾಗುತ್ತದೆ ಎಂದು ಕೋರ್ಟು ಒಪ್ಪಿದೆ. ಆದರೂ ಇದಿಷ್ಟರಿಂದ ಅತ್ಯಾಚಾರ ಅಥವಾ ಲೈಂಗಿಕಕ್ರಿಯೆ ರಾಘು ಮಾಡಿದ್ದಾನೆಂದು ಹೇಳಲು ಸಾಧ್ಯವಿಲ್ಲವೆಂಬ ಅಭಿಪ್ರಾಯ ನ್ಯಾಯಾಲಯದ್ದು. ಅಂದರೆ ರಾಘು ಮಾಡಿದ್ದು ಅನಾಚಾರ ಎಂಬುವುದಕ್ಕೆ ಅನುಮಾನ ಉಂಟಾ? ಊಹುಂ, ಯಾವ ಸಂಶಯವೂ ಇಲ್ಲ, ರಾಘು ಸ್ತ್ರೀ ಸಂಗ ವ್ಯಾಮೋಹಿ ಎಂಬುದಕ್ಕೆ!

ಈಗಿರುವ ಪ್ರಶ್ನೆ ಪೀಠ ಪಾವಿತ್ರ್ಯದ್ದು. ಸಾವಿರಾರು ವರ್ಷಗಳ ಅವಿಚ್ಛಿನ್ನ ಪರಂಪರೆಯ ರಾಮಚಂದ್ರಾಪುರ ಮಠದ ಪೀಠದಲ್ಲಿರುವ ಗುರುವಿನ ವೀರ್ಯ ಪತನವಾಗಿದೆ. ಅಂದರೆ ಆತ ಮಾನಸಿಕವಾಗಿ ಮಲಿನವಾಗಿದ್ದಾನೆ. ಸ್ತ್ರೀಯರ ಬಗ್ಗೆ ಆತನಿಗೆ ಆಕರ್ಷಣಾರಹಿತನಾದ ಭಾವನೆಗಳಿಲ್ಲ, ಪಕ್ಕಾ ಅಪಾಪ್ಪೋಲಿ ಗುಣಧರ್ಮ ರಾಘನದು ಎಂದಾಯ್ತಲ್ಲವಾ?

⇨12

ಹವ್ಯಕರು ಯೋಚಿಸಲಿ

ಶೀಲಗೆಟ್ಟ ರಾಘು ಸ್ವಾಮಿಗೆ ಬೆನಿಫಿಟ್ ಆಫ್ ಡೌಟ್ ಕೊಟ್ಟು ಇಷ್ಟು ದಿನ ಹವ್ಯಕರು ಸುಮ್ಮನಿದ್ದರು. ರಾಘು ಗುರು ಪೀಠದಲ್ಲಿರಲು ಅಯೋಗ್ಯನೆಂದು ಹವ್ಯಕ ವಿಚಾರವಾದಿ ಬಂಡಾಯಗಾರರು ಬೊಬ್ಬೆ ಹಾಕಿದರೂ ಬಹುಸಂಖ್ಯಾತರು ತಲೆ ಕೆಡಿಸಿಕೊಂಡಿರಲಿಲ್ಲ. ಕುಲ ಗುರುವನ್ನೇ ಪೀಠೋಚ್ಚಾಟನೆ ಮಾಡಿದರೆ ಶೂದ್ರಾದಿಗಳ ಮುಂದೆ ನಗೆಪಾಟಲಿಗೀಡಾಗಬೇಕಾಗುತ್ತದೆಂಬ ಮೇಲರಿಮೆ ಜಂಬದಿಂದ ಕೊಳಕ ರಾಘುನನ್ನು ಸಹಿಸಿಕೊಂಡಿದ್ದರು. ಮಠದ ತಾಲಿಬಾನಿ ಸೈತಾನರು ಮೈಮೇಲೆ ಬೀಳುವ ಭಯದಿಂದ ಗುರುವಿನ ಗುಲಾಮರಾಗಿದ್ದರು. ಚೋರ ರಾಘುನ ಪೀಠದಲ್ಲಿ ಪೊರೆದಿದ್ದರು.

over a period of 4 years continuously. The Prosecutrix on sex with accused/Mathadipathi by going to him wherever he was and she never complained up and no invitation from the side of accused to have a sex with him on his phone call or calling through his men. It was not within the knowledge of her husband who is her **legal guardian and protector.** So, the acts of sex she did with accused/Mathadipathi tantamount to unacceptable intimacy. **Viewing from any angle, the acts of sex did not amounts to rape at all, but, ill-intimacy.**

83. We would proceed to discuss about the character and conduct as passing remarks once again. The Prosecutrix married woman of 51 years old having beloved husband, two sweetest daughters. She was on

ಇನ್ನೂ ರಾಘುನನ್ನು ಕುಲಗುರುವಾಗಿ ಮುಂದುವರಿಸಿಕೊಂಡರೆ ಹವ್ಯಕ ಸಮುದಾಯದ ಮಾನ ಹರಾಜಾಗುತ್ತದೆ. ಹವ್ಯಕರ ಸಾತ್ವಿಕತೆ ವಿಚಾರವಂತಿಕೆಗೆ ಅಪಚಾರವಾಗುತ್ತದೆ. ಸೆಷನ್ಸ್ ತೀರ್ಪು ರಾಘುನ ಅಸಲಿ ಅವತಾರ ಅನಾವರಣ ಮಾಡಿಬಿಟ್ಟಿದೆ. ಸಾಕ್ಷ್ಯಾಧಾರಗಳ ಕೊರತೆಯಿಂದ ರಾಘು ರೇಪಿಸ್ಟ್ ಅಲ್ಲವೆಂದು ನ್ಯಾಯಾಲಯ ಹೇಳಿದರೂ ಆತ ರಾಸಲೀಲಾ ಪ್ರವೀಣ, ನೈತಿಕವಾಗಿ ಕೆಟ್ಟು ಕೊಳೆತಿರುವ ಕಾವಿ ಜೀವಿ ಎಂಬುದನ್ನು ಖಾತ್ರಿಪಡಿಸಿದೆ. ಸಂತ್ರಸ್ತ ಹೆಣ್ಣಿನೊಂದಿಗೆ ರಾಘುಗೆ ಅಕ್ರಮ ಕೂಡಿಕೆ ಇತ್ತೆಂದು ಹೇಳಿದೆ. **Viewing from any angle, the acts of sex did not amount to rape at all, but, ill-intimacy** ಎಂದು ತೀರ್ಪಿನ ಪೇಜ್ ನಂಬರ್ 85, ಪ್ಯಾರಾ ನಂಬರ್ 82 ರಲ್ಲಿ ಸ್ಪಷ್ಟವಾದ ದಪ್ಪಕ್ಷರದಲ್ಲಿ ಬರೆಯಲಾಗಿದೆ. ಇದು ನ್ಯಾಯಾಲಯದಲ್ಲಿ ಸಿದ್ಧಗೊಂಡ ಒಂದು ಕೇಸಷ್ಟೇ. ಹವ್ಯಕ ವಲಯದಲ್ಲಿ ರಾಘುನ ಇಂಥ ನೂರಾರು ಕಾಮ ಕಥಾಪ್ರಸಂಗ ಹಬ್ಬಿದೆ. ತೀರ್ಪು ರಾಘು ಸ್ವಾಮಿಯಾಗಿ ಸ್ವೀಕಾರಾರ್ಹನಲ್ಲ ಎಂಬುದು ಖಾತ್ರಿಪಡಿಸಿದೆ.

ಈಗಲಾದರೂ ಹವ್ಯಕರು ಎಚ್ಚೆತ್ತುಕೊಳ್ಳಬೇಕಿದೆ. ರಾಘುನಿಂದ ಸ್ವ-ಸಮಾಜಕ್ಕೆ ಆಗುತ್ತಿರುವ ಡ್ಯಾಮೇಜ್ ಕಂಟ್ರೋಲ್ ಮಾಡಬೇಕಿದೆ. ಇಡೀ ಹವ್ಯಕ ಕುಲಕ್ಕೆ ಕೆಟ್ಟ ಹೆಸರು ತಂದಿರುವ, ಸ್ತ್ರೀಸಂಕುಲಕ್ಕೆ ಗಂಡಾಂತರಕಾರಿ ಆಗಿರುವ, ಮಠದ ನೈತಿಕ ಅಧಃಪತನಕ್ಕೆ ಕಾರಣನಾಗಿರುವ, ಸಾತ್ವಿಕ ಹವ್ಯಕರನ್ನು ಮಡಿ ತಾಲಿಬಾನಿಗಳಿಂದ ಓಡಿಸಿ ನಿಯಂತ್ರಿಸುತ್ತಿರುವ ಕಾವಿ ಡಾನ್‌ನಂಥ ರಾಘು ತಮಗೆ ಕುಲಗುರುವಾಗಿರಬೇಕಾ? ಇದು ಹವ್ಯಕ ಪರಿವಾರಕ್ಕೆ ಶ್ರೇಯಸ್ಕರವಾ? ನಡತೆಗೆಟ್ಟ ರಾಘುನ ಪೀಠೋಚ್ಚಾಟನೆ ಮಾಡಿದರೆ ಹವ್ಯಕರ ಹೆಗ್ಗಳಿಕೆ ಹೊಸ ಹೊಳಪು ಬರದಾ? ಪೀಠ ಶುದ್ಧಗೊಳಿಸಿ ಹೊಸ ಗುರು ಸ್ವೀಕಾರ ಅನಿವಾರ್ಯ ಅಲ್ಲವಾ? ಇಂಥ ನೈತಿಕ ಪ್ರಶ್ನೆಗಳ ಸುತ್ತ ಹವ್ಯಕರು ಯೋಚಿಸಬೇಕಾದ ಕಾಲ ಸನ್ನಿಹಿತವಾಗಿದೆ. ಕಾಮ ಪಿಶಾಚಿ ರಾಘು ಪೀಠದಲ್ಲಿರುವಷ್ಟು ದಿನ ಹವ್ಯಕರಿಗೆ ಮುಜುಗರವೇ!

ಬ್ರಹ್ಮಚರ್ಯ ಭಂಗ ಮತ್ತು ಭೈರಪ್ಪ, ಕಲ್ಲಡ್ಕನ ಹಿಂದೂತ್ವ

ಕಾವಿ ಕೀಚಕ ರಾಘು ಸ್ವಾಮಿಯ ಅನಾಚಾರದ ಬಗ್ಗೆ ಆರಂಭದಿಂದಲೂ ಸರ್ಕಾರ, ನ್ಯಾಯಾಲಯಗಳು ಅದ್ಯಾಕೋ ರಿಯಾಯಿತಿ ತೋರಿಸುತ್ತಲೇ ಬಂದಿವೆ. ರಾಘುನನ್ನು ಒದ್ದು ಒಳಗೆ ಹಾಕಲು ಸಿಕ್ಕ ಅವಕಾಶಗಳನ್ನೆಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅಂದಿನ ಗೃಹಮಂತ್ರಿ ಜಾರ್ಜ್ ಕಳೆದುಕೊಂಡರು. ಆಡಳಿತಾಂಗ ಮತ್ತು ನ್ಯಾಯಾಂಗ ರಾಘು ಬಗ್ಗೆ ತೋರಿಸಿದಷ್ಟು ಮೃದು ಧೋರಣೆ ಬಹುಶಃ ಭಾರತದ ಬೇರ್‍ಯಾವುದೇ ರೇಪಿಸ್ಟ್ ಬಗ್ಗೆ ತೋರಿಸಿರಲಿಕ್ಕಿಲ್ಲ.





ರಾಘು ಬೇಕಂತಲೇ ಮಹತ್ವದ ಮೂರು ವೈದ್ಯಕೀಯ ಪರೀಕ್ಷೆಯಿಂದ ತಪ್ಪಿಸಿಕೊಂಡರೂ 'ವ್ಯವಸ್ಥೆ' ತಲೆ ಕೆಡಿಸಿಕೊಳ್ಳದೇ ಆರೋಪಿಗೆ ಅನುಕೂಲವಾಗುವಂತೆಯೇ ಆಟ ಆಡಿತು. ರಾಘುನ ವೀರ್ಯ ತೆಗೆದರೆ ಬ್ರಹ್ಮಚರ್ಯ ಭಂಗವಾಗುತ್ತದೆ, ಭಕ್ತಾದಿಗಳ ಭಾವನೆಗಳಿಗೆ ಘಾಸಿಯಾಗುತ್ತದೆಂದು ಭಾವನಾತ್ಮಕ ಸಬೂಬು ಹೇಳಲಾಯ್ತು. ರಾಘನ ಪೀಠದಿಂದ ಉಚ್ಚಾಟಿಸುವ ತಂತ್ರಗಾರಿಕೆಯಿಂದ ವೀರ್ಯ ಪರೀಕ್ಷೆಗೆ ಹವಣಿಸಲಾಗುತ್ತದೆಂದು ಸಂಘ ಪರಿವಾರದ ಡಾನ್ ಕಲ್ಲಡ್ಕ ಪ್ರಭಾಕರ ಭಟ್ಟ, ಸನಾತನ ಸಾಯ್ತಿ ಭೈರಪ್ಪನಂಥವರು ಬೊಬ್ಬಿರಿದರು. "ಸಮ್ಮತಿ ಲೈಂಗಿಕ ಕ್ರಿಯೆ" ಎಂದು ಒಪ್ಪಿಕೊಂಡರೆ ಪ್ರಕರಣ ಕೈಬಿಡುತ್ತೇನೆಂದು ಆಳುವವರು ಸ್ವಾಮೀಜಿಗೆ ಒತ್ತಡ ಹಾಕುತ್ತಿದ್ದಾರೆಂದು ಭೈರಪ್ಪ ಬೊಂಬಡಾ ಬಜಾಯಿಸಿದರು.

ವೀರ್ಯ ಪರೀಕ್ಷೆಗೆ ಹೋದರೆ ಪ್ರೇಮಲತಾರ ಬಟ್ಟೆ ಮೇಲೆ 'ಮಂತ್ರೋದಕ' ಕರುಣಿಸಿದ್ದು ತಾನೇ ಎಂಬುದು ಸಾಬೀತಾಗಿ ಸಿಕ್ಕಿಬೀಳುತ್ತೇನೆಂಬ ಭಯ ರಾಘುನದಾಗಿತ್ತು.

ವಾಸ್ತವವೆಂದರೆ, ನಾಗಪುರ-ದಿಲ್ಲಿ ಆರೆಸ್ಸೆಸ್ ದೊರೆಗಳು ರಾಘುನ ವ್ಯಭಿಚಾರಕ್ಕೆ ಹೇಸಿ ಆತನನ್ನು ಪೀಠದಿಂದ ಇಳಿಸುವ ಸ್ಕೆಚ್ ಹಾಕಿದ್ದರು. ಆದರೆ ರಾಜ್ಯದ ಸೋಕಾಲ್ಡ್ ಸೆಕ್ಯುಲರ್ ಸರ್ಕಾರ ರಾಘುನ ಬಗ್ಗೆ ಸಿಂಪತಿ ಹೊಂದಿತ್ತು. ಕಲ್ಲಡ್ಕ ಭಟ್ಟ ಮಾತ್ರ ಚೆಡ್ಡಿ ಹಿರಿಯರ ವಿರುದ್ಧ ಬಂಡಾಯವೆದ್ದು ರಾಘುನ ಪರ ನಿಂತಿದ್ದ. ಇದು ಸಂಘ ಪರಿವಾರದ ಒಳಸುಳಿ. ಮೊನ್ನೆ ಟ್ರಯಲ್ ಕೋರ್ಟ್ ರಾಘುನನ್ನು ರೇಪ್ ರಾದ್ಧಾಂತದಿಂದ ಮುಕ್ತಿಗೊಳಿಸಿದಾಗ ಇದೇ ಕಲ್ಲಡ್ಕ ಹಾರಾಡುತ್ತ ಗಿರಿನಗರದ ಮಠಕ್ಕೆ ಹೋಗಿ ರಾಘುಗೆ ಕಂಗ್ರಾಟ್ಸ್ ಹೇಳಿಯೂ ಬಂದಿದ್ದಾನೆ. ಚೆಡ್ಡಿ ಬರಹಗಾರ ಭೈರಪ್ಪ "ಇಷ್ಟು ದಿನ ಹಿಂದೂ ಮಠದ ವಿರುದ್ಧ ಷಡ್ಯಂತ್ರ ನಡೆಸಿದರೂ ನ್ಯಾಯಾಲಯದಲ್ಲಿ ಜಯ ಸಂದಿದೆ..." ಎಂದು ಕುಣಿದು ಕುಪ್ಪಳಿಸಿದರು.

ಮಜಾ ಎಂದರೆ, ಮರುದಿನ ತೀರ್ಪಿನ ವಿವರ ಮಾಧ್ಯಮಗಳಲ್ಲಿ ಬಹಿರಂಗವಾಗುತ್ತಲೇ ಕಲ್ಲಡ್ಕ, ಭೈರಪ್ಪ, ಮಠದ ತಾಲಿಬಾನಿಗಳು ಮಂಕು ಬಡಿದಂತಾಗಿ ಹೋದರು. ಸಂತ್ರಸ್ತೆಯ ಒಳಉಡುಪಿನಲ್ಲಿದ್ದದ್ದು ರಾಘು ಸ್ವಾಮಿಯದೇ 'ಮಂತ್ರೋದಕ', ರಾಘುನದು ಅಸಹ್ಯ ಅನ್ಯೋನ್ಯತೆ ಆ ಹೆಂಗಸಿನೊಂದಿಗೆ ಎಂದು ಕೋರ್ಟ್ ತೀರ್ಪಲ್ಲಿ ಬರೆದದ್ದು ನೋಡಿ ಇಂಗು ತಿಂದ ಮಂಗನಂತಾದರು. ವೀರ್ಯ ಪತನದಿಂದ ರಾಘುನ ಬ್ರಹ್ಮಚರ್ಯ ಭಂಗವಾಗಿರುವ ಸುದ್ದಿ ಸ್ಫೋಟಕ್ಕೆ ತತ್ತರಿಸಿಹೋದರು.

ಮಠದ ತಾಲಿಬಾನಿಗಳು, ಭೈರಪ್ಪ, ಕಲ್ಲಡ್ಕ, ಸಂಸದ ನಳಿನ್‌ಕುಮಾರ್‌ನಂಥ ಗಾಂಪರು ಈಗೇನೆನ್ನುತ್ತಾರೆ? ರಾಘು ಪರಿಶುದ್ಧ ಸಂನ್ಯಾಸಿಯಾ? ಮಲಿನ ಮುತ್ಠಾಳನಾ? ಪೀಠದಲ್ಲಿರಲು ಅರ್ಹನಾ? ಒದ್ದೋಡಿಸಲು ಯೋಗ್ಯನಾ? ಸ್ತ್ರೀ ಅಂಗಸಂಗ ಸರಸದಲ್ಲಿ ಮೈಮರೆತು ಧರ್ಮಭ್ರಷ್ಟನಾಗಿರುವ ರಾಘುನನ್ನು ಪೀಠದಿಂದ ಇಳಿಸದೇ ಹವ್ಯಕ ಬ್ರಾಹ್ಮಣರಿಗೆ ಮೋಕ್ಷವಂತೂ ಸಿಗದು. ಮಾಜಿ ಮಂತ್ರಿ ಕೆ.ಎಚ್. ಶ್ರೀನಿವಾಸ್, ಡಾ. ಟಿ.ಟಿ. ಹೆಗಡೆ, ಮದ್ಗುಣಿ ಭಟ್ಟ, ವಕೀಲ ಅಶೋಕ್ ಭಟ್ಟರಂಥ ಸಂಪನ್ನ ಹಿರಿಯ ಹವ್ಯಕ ಮುಖಂಡರ ಮುಂದಿಟ್ಟುಕೊಂಡು ಹವ್ಯಕ ಸಮುದಾಯವನ್ನು ಕೊಳಕೇಶ್ವರ ಸ್ವಾಮಿಯ ಕಪಿಮುಷ್ಟಿಯಿಂದ ಬಚಾವು ಮಾಡೋದು ಇಂದಿನ ಜರೂರತ್ತು, ಅಲ್ಲವಾ?

ರಮನೆ ಮಯೂರಕ್ಕೆ ಮದವೇರಿದೆ!



ಂಕೋಲಾದ 'ಅರಮನೆ' ಅಮಾತ್ಯ ರಾಕ್ಷಸರ ಪಡೆಯ ತಾಗಿದೆ! ಸಮಾಜಘಾತುಕ ಸೈತಾನರ, ದೋನಂಬರ್ ರ ಪುಂಡರ ಮತ್ತು ರಕ್ತಪಿಪಾಸು ರೌಡಿಗಳ ತಾಣದಂತಾಗಿದೆ!! ಈ ಅರಮನೆಯ ಚಂದದ ರ ಪಕ್ಕಾ ರಣಹದ್ದಿನಂತಾಗಿ ಕಂಡಕಂಡವರ ಡಗಿದೆ. ಮಯೂರ ಎಂದರೆ ಯಾರು ಗೊತ್ತಾ? ೋಕದ ಪಿತಾಮಹನಂತಿದ್ದ ಬನ್ನಂಜೆ ರಾಜಾ ಸುಪಾರಿ ಬನಾವಟಿ ಬಿಸ್ನೆಸ್‌ಮನ್ ಆಗಿದ್ದ ಆರ್.ಎನ್. ್‌ನ ಹತ್ಯೆ ಮಾಡಿಸಿದ್ದನಲ್ಲ, ಅದೇ ಧನನಾಯಕ್‌ನ ತ್ರ ಕುಲಪುತ್ರ ಈ ಮಯೂರ ನಾಯಕ.

ಪರ್ಯಾಸ ಎಂದರೆ, ತಂದೆಯ ಅಗಲುವಿಕೆ ಶೋಕದಿಂದ ಹೊರಬರದ ಮಯೂರ ಅಂಥದೇ ದುಃಖದ ವಿಗೆ ಯಾರ್‍ಯಾರದೋ ಕುಟುಂಬ ದೂಡುವ ುಷ ಕಾರ್ಯಾಚರಣೆ ಮಾಡುತ್ತಿದ್ದಾನೆ; ಅಸಹಾಯಕ ಗಳನ್ನು ತಬ್ಬಲಿ ಮಾಡಿ ಅಂಕೋಲೆಯ ಸಾಮಾಜಿಕ-ಯ-ವ್ಯವಹಾರಿಕ ರಂಗದ ಅಧಿಪತಿಯಾಗುವ ಕೆಯಲ್ಲಿದ್ದಾನೆ. ಕಳೆದ ಮಾರ್ಚ್ 22ರ ರಾತ್ರಿ 8 ಹೊತ್ತಲ್ಲಿ ಸ್ಥಳೀಯ ಪತ್ರಕರ್ತ, ಪ್ರಗತಿಪರ ಟಿಕೆಯಲ್ಲಿ ತೊಡಗಿಸಿಕೊಂಡಿರುವ ಕೆ. ರಮೇಶ್‌ರನ್ನು ಅರಮನೆ ಆವರಣಕ್ಕೆ ಕರೆಸಿಕೊಂಡ ಮಯೂರ ಾಂತಿಕ ಹಲ್ಲೆ ಮಾಡಿಸಿ ಕೇಕೆ ಹಾಕಿದ್ದಾನೆ. ಇಂಥ ನ್ಯ-ದಾದಾಗಿರಿ ದಿನವೂ ಮಯೂರನ ಹಿಂಬಾಲಕರು ತ್ತಲೇ ಇರುತ್ತಾರೆ. ಆದರೆ ರಮೇಶ್ ಮೇಲಿನ ಪ್ರಕರಣದ ದೂರು ಪೊಲೀಸ್ ಸ್ಟೇಷನ್‌ನಲ್ಲಿ ಾಗುವ ಮೂಲಕ ಮಯೂರನ ಮುಖವಾಡ ದ್ದಿದೆ; ಮಯೂರನ ಮಸ್ತಿ ಪುರಾಣ ಟಾಕ್ ಆಫ್ ಲ್ಲೂಕ್ ಆಗಿಹೋಗಿದೆ!

ಅರಮನೆ ಅಡ್ಡೆ

ಯೂರನ ಅಪ್ಪ ಧನನಾಯಕ್ ತನ್ನ ವಿರೋಧಿಗಳನ್ನು ಕವಾಗಿ ಹಣಿಯುವ ಹರಾಮಿತಕ್ಕೆ ಎಂದೂ ಾದವನಲ್ಲ. ತನ್ನ ದ್ವಾರಕಾ ಫೈನಾನ್ಸ್‌ನಲ್ಲಿ ಸಾಲ ವರು ತುಂಬದಿದ್ದರೆ ಪುಂಡ ಭಾವ ನೆಂಟರಾದ ್ ಮತ್ತು ಹರೀಶ್‌ರ ಛೂಬಿಟ್ಟು ಬೆದರಿಸಿ ವಸೂಲಿ ಸುತ್ತಿದ್ದನಾದರೂ ಹೊಡೆದಾಟಕ್ಕೆ ಕುಮ್ಮಕ್ಕು ವನಲ್ಲ. ಆದರೆ ಹದಿನಾರಕ್ಕೇ ಯಜಮಾನಿಕೆ ಸಿಕ್ಕಿರುವ ೂರ ಮಧ್ಯರಾತ್ರಿ ಕೊಡೆ ಹಿಡಿದು ಓಡಾಡುತ್ತಿದ್ದಾನೆ. ಡಿಪ್ಲೋಮ್ಯಾಟ್ ಆಗಿ ಪರಿಸ್ಥಿತಿ ನಿಭಾಯಿಸುತ್ತಿದ್ದ. ಕ್ಕಿಂತ ಸಾಮ-ಭೇದ ತಂತ್ರ ಬಳಸುತ್ತಿದ್ದ. ಮಗ ೂರ ಪುಂಡರ ದಂಡು ಕಟ್ಟಿಕೊಂಡು ದಾದಾಗಿರಿ ುತ್ತಿದ್ದಾನೆ. ಅಂಕೋಲೆಯ ಅಷ್ಟೂ ನಮೂನೆಯ ಕಸುಬಿಗಳನ್ನು ಮನೆಅಂಗಳದಲ್ಲಿ ಗುಡ್ಡ ಹಾಕಿಕೊಂಡು ಆಗಲು ಪ್ರಯತ್ನಿಸುತ್ತಿದ್ದಾನೆ.


ೂಪ್ಪರಿಗೆಗಟ್ಟಲೆ ಕಪ್ಪು ಕಾಸು ಕೂಡಿಹಾಕಿದ್ದ ಯಕ್‌ಗೆ ಒಂಥರಾ ಅಭದ್ರತೆ ಕಾಡುತ್ತಿತ್ತು. ಶಕುನಿ ನಂತಿದ್ದ ನಾಯಕ್‌ಗೆ ಜೀವಭಯವೂ ಕಾಡುತ್ತಿತ್ತು. ಗಿಯೇ ಆತ ತನ್ನ ಮನೆಯ ಸುತ್ತಲೂ 10-15 ಎತ್ತರದ ಆವರಣ ಗೋಡೆ ಹಾಕಿಸಿದ್ದ. ಈಗ ರುಳೂ ಈ ಆವರಣ ಗೋಡೆಯ ಒಳಗೆ ಕನಿಷ್ಠ 5 ಕಸುಬಿಗಳು, ಪುಂಡ-ಪೋಕರಿಗಳು ಅಡ್ಡೆ ತ್ತಾರೆ. ಅಕ್ರಮ ಚಿರೆಕಲ್ಲು (ಕೆಂಪು ಕಲ್ಲು) ದಂಧೆಯವರು, ಮಾಫಿಯಾದವರು, ಕಾಡುಗಳ್ಳರು, ಕೋಳಿ ಅಂಕದ ಗರು, ಗುದುಮುರಿಗೆ ಘಂಟರ್‌ಗಳು ಅರಮನೆ ದಲ್ಲಿ ಜಮೆಯಾಗಿ ಮಯೂರನಿಗೆ ಭೋಪರಾಕ್ ತ್ತಾರೆ. ಮರಳು ಮಾಫಿಯಾ ಒಂದೇ ಪ್ರತಿದಿನ ೂರನಿಗೆ ಒಂದೂವರೆ ಲಕ್ಷ ಕಪ್ಪ ಒಪ್ಪಿಸುತ್ತದೆ. ಇದರಲ್ಲಿ ಸತೀಶ್ ಸೈಲ್‌ಗೆ ಸಣ್ಣ ಪಾಲು ಕೊಟ್ಟು ಮಯೂರ ಮು 'ಸಮಾಜಸೇವೆ'ಗೆ ಬಳಸುತ್ತಾನೆ! ಪುಂಡರ ಸಾಕಲು ಸುತ್ತಾನೆ.

ನನಾಯಕ್ ತನ್ನ ಜೀವಿತಾವಧಿಯಲ್ಲಿ ಮಾಡಿದ ಾಜಿಕ-ರಾಜಕೀಯ ಮತ್ತು ಸಹಕಾರಿ ಕ್ಷೇತ್ರದ ್‌ಗಳನ್ನು ಮಯೂರ ಅಪ್ಪ ಗತಿಸಿದ ಎರಡೂರು ಲ್ಲೇ ಮುಗಿಸುವ ಅವಸರದಲ್ಲಿದ್ದಾನೆ. ಬರೀ

ಮೂವತ್ತರ ಗಡಿಯಲ್ಲಿರುವ ಈ ಹುಂಬ ಪೋರ ಶಾಸಕ ಕಾಗೇರಿ ಹೆಗಡೆಯಂಥವರ ಹಿಡಿದುಕೊಂಡು ಬಿಜೆಪಿಯ ಬಹಾದ್ದೂರನಾಗಿ ಹೊರಹೊಮ್ಮಿದ್ದಾನೆ.. ಬಿಜೆಪಿಯ ಬ್ರಾಹ್ಮಣ ಮುಖಂಡರು ಮಯೂರನಲ್ಲಿರುವ ಭರ್ಜರಿ ಕಾಸಿನ ಮೇಲೆ ಕಣ್ಣಿಟ್ಟು ಆತನ ಬಳಸಿಕೊಳ್ಳುತ್ತಿದ್ದಾರೆ. ಧನನಾಯಕ್‌ಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಅಥವಾ ವಿಧಾನಸಭೆಯಿಂದ ವಿಧಾನ ಪರಿಷತ್ ಸದಸ್ಯನಾಗುವ ತೆವಲು ತೀವ್ರವಾಗಿತ್ತು. ಹಣ ಕೊಟ್ಟು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆಯುವ ಹಪಾಹಪಿಯಿತ್ತು. ತಾನೊಬ್ಬ ಬಿಜೆಪಿಯ ಅನಿವಾರ್ಯ ಲೀಡರ್ ಎಂದು ತೋರಿಸಿಕೊಳ್ಳಲು ಆತ ಅಂಕೋಲೆಯ ಹಳ್ಳಿಗಳಲ್ಲಿ ಹಣಾಧಾರಿತ ರಾಜಕೀಯದ ಬೇರು ಗಳಿಸಿದ್ದ.

ಈ ಬೇರುಗಳ ಬಲದಿಂದ ಮಯೂರ ಈಗ ನರ್ತಿಸುತ್ತಿದ್ದಾನೆ. ಗ್ರಾಪಂ ಚುನಾವಣೆಯಲ್ಲಿ ಅರ್ಧ ಕೋಟಿಯಷ್ಟು ಹಣ ಹರಿಸಿ ಅಂಕೋಲೆಯ 21 ಪಂಚಾಯ್ತಿಗಳ ಪೈಕಿ 18ರಲ್ಲಿ ಬಿಜೆಪಿ ಝೂಂಡಾ ಊರಿದ ಮಯೂರ ಕಳೆದ ಜಿಪಂ ಚುನಾವಣೆಯಲ್ಲಿ ಮತ್ತರ್ಧ ಕೋಟಿ ಚೆಲ್ಲಾಡಿದ್ದಾನೆ. ಕಾಂಗ್ರೆಸ್ ಸಹ ಶಾಸಕ ಸತೀಶ್ ಸೈಲ್ ತನ್ನ ಕ್ಯಾಂಡಿಡೇಟ್ ಪಾಂಡುರಂಗ ಗೌಡನ ವಿರುದ್ಧವೇ ಕೆಲಸ ಮಾಡುವಂಥ ಪರಿಸ್ಥಿತಿ ನಿರ್ಮಾಣ ಮಾಡಿದ್ದ ಮಯೂರ. ತನ್ನ ಮರಳು ಮಾಫಿಯಾದ ಕಿಂಗ್‌ಪಿನ್ ಮೊಗಟಾದ ಜಗದೀಶ್ ನಾಯಕನನ್ನು ಜಿಪಂ ಸದಸ್ಯನಾಗಿ ಮಾಡಿಕೊಂಡಿರುವ ಮಯೂರನ ದುಡ್ಡಿನ ತಂತ್ರಗಾರಿಕೆ ಆಘಾತಕಾರಿಯಾಗಿವೆ.





ಕಳೆದ ವಿಧಾನ ಪರಿಷತ್ ಎಲೆಕ್ಷನ್‌ನಲ್ಲಿ ಸ್ವ-ಪಕ್ಷದ ಗಣಪತಿ ಉಳ್ವೇಕರ್‌ಗೆ ಬತ್ತಿಯಿಟ್ಟು ಕಾಂಗ್ರೆಸ್‌ನ ಘೋಟನೇಕರ್ ಪರ ರಹಸ್ಯ ಕಿತಾಪತಿ ಮಾಡಿದ್ದ. ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿರುವ ಘೋಟನೇಕರ್ ಈ ಋಣಕ್ಕಾಗಿ ಮಯೂರನ ಫೈನಾನ್ಸ್‌ಗೆ ಬರೋಬ್ಬರಿ ನಾಲ್ಕು ಕೋಟಿ ಸಾಲ ಕೊಟ್ಟಿದ್ದಾನೆಂದು ರಾಜಕೀಯ ಪಡಸಾಲೆಯಲ್ಲಿ ಚರ್ಚೆಯಾಗುತ್ತಿದೆ. ಉಳ್ವೇಕರ್‌ಗೆ ಎಲೆಕ್ಷನ್ ಖರ್ಚಿಗೆಂದು ತನ್ನ ಫೈನಾನ್ಸ್‌ನಿಂದ 50 ಲಕ್ಷ ಸಾಲ ಕೊಟ್ಟಿದ್ದ ಮಯೂರ ಅದರಲ್ಲಿ 10 ಲಕ್ಷ ಪ್ರಚಾರಕ್ಕೆಂದು ತಾನಿಟ್ಟುಕೊಂಡಿದ್ದ. ಆದರೆ ಸಹಕಾರ ಕೊಟ್ಟಿದ್ದು ಕಾಂಗ್ರೆಸ್ ಕ್ಯಾಂಡಿಡೇಟ್‌ಗೆ. ಇದು ಗೊತ್ತಿದ್ದರೂ ಕಾಗೇರಿ ಮಾಣಿ ಏನೂ ಮಾಡಲಾಗದೆ ಕೈ-ಕೈ ಹೊಸಕಿಕೊಳ್ಳುತ್ತಿದ್ದಾರೆ. ಪಾಪ! ಈತನ ಪ್ರಳಯಾಂತಕ ಪರಾಕ್ರಮ ಕಂಡವರು "ಡೂಪ್ಲಿಕೇಟ್ ಆನಂದ್ ಅಸ್ನೋಟಿಕರ್" ಎಂದು ಬ್ರಾಂಡ್ ಮಾಡಿ ನಗುತ್ತಿದ್ದಾರೆ.

ಗೂಂಡಾ ಗೋಪು!!

ಸಣ್ಣ ವಯಸ್ಸಿನಲ್ಲೇ ಫಿಟ್ಟಿಂಗ್ ಮಾಸ್ಟರ್ ಆಗಿ ಅವತರಿಸಿರುವ ಮಯೂರ ಜನ ಮೆಚ್ಚುವ ಯಾರನ್ನೂ ಪೋಷಿಸಿಲ್ಲ. ಅಂಕೋಲೆಯ ಜನರು ಮೂಗು ಮುರಿಯುವಂಥವರೇ ಆತನ ಸಹಚರರು. ಅಗಸೂರು ಗ್ರಾಮ ಪಂಚಾಯ್ತಿ ಸದಸ್ಯ ಗೂಂಡಾಗೋಪು ಯಾನೆ ಗೋಪಾಲ ಕೃಷ್ಣ ನಾಯಕ್ ಅರಮನೆ ಮಯೂರನ ಅಚ್ಚುಮೆಚ್ಚಿನ ಸೇನಾಧಿಪತಿ. ಅಂಕೋಲೆಯ ಗಂಗಾವಳಿ ನದಿಯಲ್ಲಿ ಗೆಬರುವ ಮರಳೆಲ್ಲ ಶೇಖರಣೆಯಾಗುವುದು ಅಗಸೂರು-ಅಡ್ಲೂರಲ್ಲಿ. ಈ ಮಾಫಿಯಾದ ದೊರೆ ಜಿಪಂ ಸದಸ್ಯ ಜಗದೀಶ್ ನಾಯಕನಾದರೂ ಉಸ್ತುವಾರಿಯೆಲ್ಲ ಗೂಂಡಾ ಗೋಪುನದೇ. ಈ ಗೋಪು ಮತ್ತವನ ತಮ್ಮ ಮಂಜುನಾಥ ಹಗಲು ದರೋಡೆಕೋರರು. ಅಂಕೋಲೆಯ ಬಾಳೆಗುಳಿ ಕ್ರಾಸ್‌ನಿಂದ ಯಲ್ಲಾಪುರದವರೆಗಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಲ್ಲೇ ವಾಹನ ಅಪಘಾತವಾದರೂ ಈ ಅಣ್ಣ-ತಮ್ಮ ಅಲ್ಲಿ ಕ್ಷಣಾರ್ಧದಲ್ಲೇ ಹಾಜರ್. ಈ 'ಸಮಾಜಸೇವಕ ಸಹೋದರರು' ಮೊದಲು ಮಾಡೋದು ಹೆಣ ಮತ್ತು ಗಾಯಾಳುಗಳ ಮೈಮೇಲಿನ ಒಡವೆ, ಮೊಬೈಲ್, ಹಣ ಎಗರಿಸೋದು. ನಂತರ ತಾವೇ ಮುಂದೆ ನಿಂತು ಆಂಬುಲೆನ್ಸ್ ತರಿಸಿ ಗಾಯಾಳುಗಳನ್ನು ಹೆಣವನ್ನು ಸಾಗಿಸೋದು. ಕೆಟ್ಟು ನಿಂತ ಲಾರಿ-ಕಾರ್‌ಗಳ- ಇನ್ನಿತರ ವಾಹನಗಳ ಟೈರ್, ಬಿಡಿ ಭಾಗ ಕದಿಯುವ ಈ ಸಹೋದರರ ಗ್ಯಾಂಗ್‌ನ ಪರಿಣತಿ ಜನಜನಿತ. ಮೊನ್ನೆ ಪತ್ರಕರ್ತ ರಮೇಶ್ ಮೇಲೆ ನಡೆದ ಬರ್ಬರ ಹಲ್ಲೆಯ ರೂವಾರಿ ಇದೇ ಗೂಂಡಾ ಗೋಪು.

ದಾಳಿಗೇನು ಕಾರಣ?

ಕೆ. ರಮೇಶ್ ಸ್ಥಳೀಯ 'ಮುಂಜಾವು' ದಿನಪತ್ರಿಕೆಯ ವರದಿಗಾರ. ಕೋಮು ಸೌಹಾರ್ದ ವೇದಿಕೆ, ಸಂಗಾತಿ ರಂಗಭೂಮಿ ಸಂಘಟನೆಯ ಕ್ರಿಯಾಶೀಲ ಕಾರ್ಯಕರ್ತ. ತನ್ನ ಕಾರ್ಯಕ್ರಮಕ್ಕೆಲ್ಲ 'ಕೊಡುಗೈ ದಾನಿ' ಮಯೂರ ನಾಯಕ್ ಮತ್ತು ಇತರರಿಂದ ದೇಣಿಗೆ-ದಾನ ಪಡೆಯುತ್ತ ಬಂದಿದ್ದಾನೆ ರಮೇಶ್. ಪತ್ರಕರ್ತನಾದ್ದರಿಂದ ಆತನ ಮೇಲೆ



ಆರ್.ಎನ್.ನಾಯಕ್

ಆಗಾಗ ಹಲ್ಲೆ-ದಾಳಿ ನಡೆಯುತ್ತಲೇ ಇದೆ. 'ಮುಂಜಾವು' ಪತ್ರಿಕೆಗೆ ಅಂಕೋಲೆಯಲ್ಲಿ ಅರ್ಧ ಡಜನ್ ಸುದ್ದಿಗಾರರಿದ್ದಾರೆ. ಹೀಗಾಗಿ ಗಂಡಾಂತರಕಾರಿ ಸುದ್ದಿ ಬಂದರೆ ಅದಕ್ಕೆ ರಮೇಶ ತಲೆಯೇ ಟಾರ್ಗೆಟ್ ಆಗುತ್ತಿದೆ.

ಗೂಂಡಾ ಗೋಪು ಮತ್ತವನ ತಮ್ಮ ಮಂಜುರ ಅಕ್ರಮ ದಂಧೆಗಳ ಬಗ್ಗೆ, ಅವರ ದರೋಡೆ ಗ್ಯಾಂಗ್ ಅಪಘಾತವಾದಾಗ ಪ್ರಯಾಣಿಕರ, ಹೆಣದ ಮೈಮೇಲಿನ ಬಂಗಾರ ಲೂಟಿ ಮಾಡುವ ಬಗ್ಗೆ ರಮೇಶ 'ಮುಂಜಾವು'ದಲ್ಲಿ ಆಗಾಗ ವರದಿ ಮಾಡಿದ್ದ. ಒಮ್ಮೆ ಶಾಸಕ ಸೈಲ್ ಅಗಸೂರಲ್ಲಿ ಗ್ರಾಮಸಭೆ ನಡೆಸಿದಾಗ ಈ ಗೂಂಡಾ ಗೋಪು ಗಲಾಟೆ ಮಾಡಿದ್ದ. ಅಧಿಕಾರಿಗಳಿಗೆ ಅಸಹ್ಯವಾಗಿ ಬೈದು ಬೊಬ್ಬೆ ಹಾಕಿದ್ದ. ಆಗ ಶಾಸಕ ಸೈಲ್ ಈ ಗ್ರಾಪಂ ಸದಸ್ಯರನ್ನು ಸಭೆಯಿಂದ ಹೊರಗೋಡಿಸಿದ್ದ. ಇದನ್ನು ರಮೇಶ್ ವರದಿ ಮಾಡಿದ್ದ. ಇದೆಲ್ಲ ಗೂಂಡಾ ಗೋಪುನ ಪಿತ್ಥ ನೆತ್ತಿಗೇರಿಸಿತ್ತು.


ಆದರೆ ಮಯೂರ ಮಾತ್ರ ರಮೇಶನನ್ನು ಹತ್ತಿರ ಇಟ್ಟುಕೊಂಡಿದ್ದ. ಇದು ಸಹಿಸಲು ಗೋಪು ಗ್ಯಾಂಗಿಗೆ ಆಗಲಿಲ್ಲ. ಹೇಗಾದರೂ ಮಾಡಿ ಬಾಸ್ ಮಯೂರನಿಂದ ರಮೇಶನಿಗೆ ಉಗಿಸಬೇಕೆಂದು ಗೋಪು ಸಂಚು ಮಾಡುತ್ತಲೇ ಇದ್ದ. ಅದಕ್ಕಾತನಿಗೆ ಮುಹೂರ್ತ ಕೂಡಿಬಂದಿದ್ದು ಆರು ತಿಂಗಳ ಹಿಂದೆ. ಬನ್ನಂಜೆ ರಾಜ ಅಂದರ್ ಆದಾಗ 'ಲಂಕೇಶ್'ಲ್ಲಿ ಧನನಾಯಕ್ ಹತ್ಯೆ ಸುತ್ತ ಒಂದು ವರದಿ ಬಂದಿತ್ತು. ಇದರಲ್ಲಿ ಮಯೂರ ಮತ್ತವನ ಅಪ್ಪ ಸಿಬಿಐ ಮಾಫಿ ಸಾಕ್ಷಿಯಾದ ಹಿನ್ನೆಲೆ, ಅದರಿಂದಾದ ಒಟ್ಟು ಪರಿಣಾಮದ ಬಗ್ಗೆ ವಿವರಗಳಿತ್ತು. ಸದ್ರಿ ವರದಿಯಿಂದ ಮಯೂರನ ಪರಿವಾರ ಪತರುಗುಟ್ಟಿ ಹೋಗಿತ್ತು. ಇದೇ ಸರಿಯಾದ ಸಮಯವೆಂದು ಭಾವಿಸಿದ ಗೂಂಡಾಗೋಪು ಈ ವರದಿಗೆ ರಮೇಶನೇ ಕಾರಣವೆಂದು ಮಯೂರನ ಕಿವಿಯೂದಿಬಿಟ್ಟ. ಹಿತ್ತಾಳೆ ಕಿವಿಯ, ಪೆದ್ದು ಪೋರ ಮಯೂರ ಹಿಂದೆ-ಮುಂದೆ ಯೋಚಿಸದೆ ಚಮಚಾಗಳು ಹೇಳಿದ್ದು ನಂಬಿದ. ತನ್ನಿಂದ ಆಗಾಗ ಆರ್ಥಿಕ ಸಹಾಯಕ

⇨12

ಪಾಪ, ಮಯೂರನ ಹತ್ರಾ ಹಣ ಇಲ್ವಂತೆ!!

ಅಂಕೋಲೆಯ ಆರೋಗ್ಯಕ್ಕೆ ಅನಾಹುತಕಾರಿಯಾಗಿ ಮಯೂರ ನಾಯಕ್ ಬೆಳೆಯುತ್ತಿದ್ದಾನೆ. ಈತನ ನಖರಾ ಕಂಡರೆ ದಾರಿ ತಪ್ಪಿದ ಹುಡುಗನಂತೆ ಕಾಣಿಸುತ್ತಾನೆ. ಸಣ್ಣ ವಯಸ್ಸಿನಲ್ಲೇ ಸಮಯಸಾಧಕತನವನ್ನೇ ಸಿದ್ಧಾಂತ ಮಾಡಿಕೊಂಡಿರುವ ಈ ಬಿಜೆಪಿಯ ಯುವ 'ನಾಯಕಾಗ್ರೇಸ' ತನಗೆ ಲಾಭವಾಗುತ್ತದೆಂದರೆ ಯಾವ ಪಾರ್ಟಿ ಮುಖಂಡರ ಪಾದಕ್ಕಾದರೂ ಬೀಳಲು ರೆಡಿ. ಆಡಳಿತಾರೂಢ ಕಾಂಗ್ರೆಸ್‌ನ ಶಕ್ತಿಶಾಲಿ ಮಂತ್ರಿ ಆರ್.ವಿ. ದೇಶಪಾಂಡೆ ಸಾಹೇಬರ ಕೃಪಾಕಟಾಕ್ಷದಿಂದ ಪೊಲೀಸ್ ಇಲಾಖೆಗೆ ತುಂಬ ಬೇಕಾಗಿರುವ 58 ಲಕ್ಷ ಮನ್ನಾ ಮಾಡಿಸಿಕೊಳ್ಳಲು ಮಯೂರ ಮಸಲತ್ತು ನಡೆಸಿದ್ದಾನೆಂಬ ಸುದ್ದಿ ಹಬ್ಬಿದೆ.


ಧನನಾಯಕ್ ಸ್ಥಾಪಿಸಿಟ್ಟುಹೋಗಿರುವ ಕೋಟಿ-ಕೋಟಿಗಳ ಸಾಮ್ರಾಜ್ಯಕ್ಕೆ ಅಧಿಪತಿಯಾಗಿರುವ ಮಯೂರನಿಗೆ ಭೂಗತ ಪಾತಕಿಗಳಿಂದ ಗಂಡಾಂತರ ಇದೆಯೆಂದು ಪೊಲೀಸ್ ಸೆಕ್ಯುರಿಟಿ, ಗನ್‌ಮ್ಯಾನ್‌ಗಳನ್ನು ಕೊಡಲಾಗಿದೆ. ಈ ಗನ್‌ಮ್ಯಾನ್‌ಗಳನ್ನು ಹಿಂದೆ-ಮುಂದೆ ಇಟ್ಟುಕೊಂಡು ಒಣಗತ್ತಿನಿಂದ ಓಡಾಡುವ ಖಯಾಲಿಗೆ ಆತ ಅಡಿಕ್ಟ್ ಆಗಿ ತುಂಬ ದಿನಗಳೇ ಕಳೆದುಹೋಗಿದೆ. ಈತನ ತಂದೆಯ ಪ್ರಾಣ ತೆಗೆದ ಬನ್ನಂಜೆ ರಾಜನೇ ಈಗ ಜೈಲು ಪಾಲಾಗಿರುವಾಗ ಮಯೂರನಿಗೆ ಗನ್‌ಮ್ಯಾನ್ ಅವಶ್ಯಕತೆ ಇದೆಯಾ ಎಂಬ ಚರ್ಚೆಯೂ ಪೊಲೀಸ್ ಇಲಾಖೆ ಮತ್ತು ಅಂಕೋಲೆಯಲ್ಲಿ ಜೋರಾಗೇ ನಡೆಯುತ್ತಿದೆ.



ಈ ಪೊಲೀಸ್ ರಕ್ಷಣೆ ಪಡೆದಿದ್ದಕ್ಕೆ ಮಯೂರ ಸರ್ಕಾರಕ್ಕೆ ಸೇವಾಶುಲ್ಕ ತುಂಬಬೇಕಿದೆ. ಈವರೆಗೆ ಆತ ಒಟ್ಟು 58 ಲಕ್ಷ ರೂ. ಸರ್ಕಾರಕ್ಕೆ ಭರಣ ಮಾಡಬೇಕಿದೆ. ಇತ್ತೀಚೆಗಷ್ಟೇ ಜಿಲ್ಲೆಯಿಂದ ವರ್ಗವಾಗಿ ಹೋಗಿರುವ ಎಸ್ಪಿ ಆರ್. ದಿಲೀಪ್ ಅದ್ಯಾಕೋ ಮಯೂರನಿಂದ ಬರಬೇಕಾದ ಹಣ ವಸೂಲಿಗೆ ನಿಷ್ಠೂರ ಕ್ರಮ ಕೈಗೊಂಡಿರಲಿಲ್ಲ. ಆದರೆ ವಂಶಿಕೃಷ್ಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಬರುತ್ತಿದ್ದಂತೆಯೇ ಸೆಕ್ಯುರಿಟಿ ಶುಲ್ಕ ತುಂಬುವಂತೆ ಮಯೂರನಿಗೆ ನೋಟಿಸು ಹೋಗಿದೆ. ಇದರಿಂದ ಕಕ್ಕಾಬಿಕ್ಕಿಯಾದ ಮಯೂರ ಸರ್ಕಾರಕ್ಕೆ ಪಂಗನಾಮ ಹಾಕೋದು ಹೇಗೆಂಬ ಲೆಕ್ಕಾಚಾರಕ್ಕೆ ಬಿದ್ದಿದ್ದಾನೆ.

"ಅಪ್ಪನ ಹತ್ಯೆಯಾದ ನಂತರ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಆದಾಯ ಮೂಲ ಇಲ್ಲದಂತಾಗಿದೆ.... ದಯವಿಟ್ಟು ಸೆಕ್ಯೂರಿಟಿ ಶುಲ್ಕ ಮನ್ನಾ ಮಾಡಿರಿ..." ಎಂದು ಮಯೂರ ಪೊಲೀಸ್ ಇಲಾಖೆಗೆ ಪತ್ರ ಬರೆದು ಬೇಡಿದ್ದಾನೆ. ಕೋಟ್ಯಾಂತರ ರೂ. ಬಂಡವಾಳದ ತರಹೇವಾರಿ ದಂಧೆಗಳನ್ನು ನಡೆಸುವ ಮಯೂರನ ಹತ್ತಿರವಿರುವ ಕಪ್ಪು-ಬಿಳುಪು ರೊಕ್ಕಕ್ಕೆ ಲೆಕ್ಕವೇ ಇಲ್ಲ. ಆದರೂ ಸರ್ಕಾರಕ್ಕೆ ವಂಚಿಸುವ ನಿರ್ಲಜ್ಜ ಕರಾಮತ್ತು ಆತ ನಡೆಸಿದ್ದಾನೆ.

ಧನನಾಯಕ್ ಹತ್ಯೆಯ ನಂತರ ಬರೋಬ್ಬರಿ 5 ಕೋಟಿ ಜೀವವಿಮೆ ಹಣ ಮಯೂರನ ಕುಟುಂಬಕ್ಕೆ ಸಿಕ್ಕಿದೆ. ಜಿಲ್ಲೆಯಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಮಾಡುವ ಕಾಮಗಾರಿ ಪಡೆದಿರುವ ಐಆರ್‌ಬಿ ಕಂಪನಿಗೆ ಕಲ್ಲು ತೆಗೆಯಲೆಂದು ಈತ ಬೆಳಸೆ ಬಳಿಯ ಎಕರೆಗಟ್ಟಲೆ ಭೂಮಿ ನೀಡಿದ್ದಾನೆ. ಈ ಡೀಲ್ 8 ಕೋಟಿ ರೂ.ಗಳದ್ದು. ಇದರಲ್ಲಿ ಬಿಳಿ ಹಣವೇ 3 ಕೋಟಿ ಮುಂಗಡವಾಗಿ ಸಿಕ್ಕಿದೆ. ಕಳೆದ ಗ್ರಾಮ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಬಿಜೆಪಿ ಗೆಲ್ಲಿಸಲು 50 ಲಕ್ಷದಷ್ಟು ಖರ್ಚು ಮಾಡಿರುವ ಮಯೂರ ಮೊನ್ನೆ-ಮೊನ್ನೆ ಮುಗಿದ ಜಿಪಂ ಎಲೆಕ್ಷನ್‌ನಲ್ಲಿ ಅಷ್ಟೇ ಪ್ರಮಾಣದ ಹಣ ಹರಿಸಿದ್ದಾನೆ. ತನ್ನ ಫೈನಾನ್ಸ್‌ಗೆ ಜಿಲ್ಲಾ ಮಧ್ಯವರ್ತಿ ಬ್ಯಾಂಕಿದ 5 ಕೋಟಿ ಸಾಲ ತಂದಿದ್ದಾನೆ.



ಎಲ್ಲಕ್ಕಿಂತ ಹೆಚ್ಚಾಗಿ ಹಲವು ಫೈನಾನ್ಸ್‌ಗಳ ಒಡೆಯನಾದ ಈ ಮಯೂರ, ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾನೆ. ರಿಯಲ್ ಎಸ್ಟೇಟ್ ದಂಧೆಯಲ್ಲಿ ಹಲವು ಕೋಟಿ ತೊಡಗಿಸಿದ್ದಾನೆ. ಇದರಲ್ಲಿ ಲೆಕ್ಕವಿಲ್ಲದಷ್ಟು ವರಮಾನವಿದೆ. ದೊಡ್ಡ ಬಿಲ್ಡರ್ ಈ ಮಯೂರ. ಅಡ್ವಾನ್ಸ್ ಇನ್‌ಕಂಟ್ಯಾಕ್ಸ್ ಪೇಯೀ (ಮುಂಗಡವಾಗಿ ವರಮಾನ ತೆರಿಗೆ ತುಂಬುವಾತ) ಆಗಿರುವ ಮಯೂರನ ಬಳಿ ಸರ್ಕಾರಕ್ಕೆ ತುಂಬಬೇಕಾದ ಕೆಲವೇ ಕೆಲವು ಲಕ್ಷ ಇಲ್ಲವೆಂದರೆ ನಂಬುವವರು ಮೂರ್ಖರಷ್ಟೇ!

ಎದುರಾಳಿ ಪಾರ್ಟಿಯವನ ಸೆಕ್ಯುರಿಟಿ ಶುಲ್ಕ ಮನ್ನಾ ಉಸಾಬರಿ ಮಂತ್ರಿ ದೇಶಪಾಂಡೆಗೆ ಬೇಕಿತ್ತಾ?!

10⇦ ಸಗಣಿ ಸ್ವಾಮಿ

ಸಂಸಾರಿಗಳಿಗಿಂತಲೂ ಕೀಳು ಮಾಂಛೆಯ ಕಾಮೋನ್ಮಾದಿ ರಾಘು ಎಂದಾಯ್ತಲ್ಲವಾ? ಯತಿಯ ವೀರ್ಯ ಹಸನವಾದರೆ ಆತ ಕಾವ ಮರಳಿನಲ್ಲಿ ಹೊರಳಾಡಿ, ಹೊರಳಾಡಿ ಜೀವ ಬಿಡಬೇಕೆನ್ನುತ್ತದೆ ಸಂನ್ಯಾಸ ಸಂಹಿತೆ.

ದೂರುದಾರೆಯ ಒಳಉಡುಪಿನಲ್ಲಿನ ವೀರ್ಯದ ಕಲೆ ರಾಘುನದೇ ಎಂಬುದು ಸೂರ್ಯ ಸತ್ಯ. ಇದು ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಸಾಬೀತಾಗಿದೆ. ಅದನ್ನು ನ್ಯಾಯಾಲಯ ತಳ್ಳಿ ಹಾಕಿಲ್ಲ. ಆದರೆ ಇದಿಷ್ಟೇ ರೇಪ್ ಸಾಬೀತಿಗೆ ಸಾಲದು ಎಂದಿದೆ. ಇದು ಕಾನೂನಿನ ತರ್ಕವಾಯ್ತು. ನೈತಿಕ ತರ್ಕ ಏನೆನ್ನುತ್ತದೆ. ಸನ್ಯಾಸಿಯೊಬ್ಬನ ವೀರ್ಯ ಮಹಿಳೆಯೊಬ್ಬಳ ಪ್ಯಾಂಟಿ ಲೈನರ್‌ನಲ್ಲಿ ಕಾಣಿಸಿಕೊಳ್ಳುತ್ತದೆಂದರೆ ಏನರ್ಥ? ರಾಘು "ರಾಮ... ರಾಮಾ...." ಎನ್ನುತ್ತಲೇ ಕಾಮದ ಆಟ ಆಡುತ್ತ ಲೌಕಿಕ ಸುಖ ಭೋಗದಲ್ಲಿ ಕಾಲ ಕಳೆದಿದ್ದಾನೆ ಎಂದಲ್ಲವಾ? ಯಾವುದು ಯತಿಗೆ ನಿಷಿದ್ಧವೋ ಅದನ್ನೇ ರಾಘು ದಿನದಿನವೂ ಮಾಡಿದ್ದಾನೆ. ತ್ರಿಕಾಲ ಪೂಜೆ ಮರೆತು ಅನುಗಾಲ ರಾಸಲೀಲೆಯಲ್ಲಿ ಮುಳುಗಿದ್ದಾನೆ. ಇಂಥವನು ಅದೆಂಥ ಮಾರ್ಗದರ್ಶನ ಭಕ್ತರಿಗೆ ಮಾಡಬಹುದು? ಈತ ಪೀಠದಲ್ಲಿರಲು ಅರ್ಹನಾ? ಯೋಚಿಸಬೇಕಾಗಿರುವುದು ಇಷ್ಟು ದಿನ ಅನುಮಾನ-ಗೊಂದಲದಲ್ಲಿದ್ದ ಹವ್ಯಕರು! ಈಗ ಯಾವ ಕನ್‌ಫ್ಯೂಜನ್ ಇಲ್ಲ ತಾನೆ?

ಅಸಹ್ಯ ಅನ್ಯೋನ್ಯತೆ

ಯಾವ ಕೋನದಿಂದ ನೋಡಿದರೂ ರಾಘುನಲ್ಲಿ ಸನ್ಯಾಸಿಯಲ್ಲಿರಬೇಕಾದ ಒಂದೇ ಒಂದು ಸನ್ನಡತೆ, ಸದ್ವಿಚಾರ, ಸದಾಚಾರಗಳಿಲ್ಲ! ಆತನ ಬಾಡಿಲ್ಯಾಂಗ್ವೇಜೇ ಪಕ್ಕಾ ಕಾಮವಿಕಾರಿ ಎಂಬುದನ್ನು ತೋರಿಸುವಂತಿದೆ. ಹೆಂಗಸರ ಕಂಡಾಗ ಹೊಯ್ದಾಡುವ ಆತ ಪೀಠದಲ್ಲಿ ಒಂದು ಗಳಿಗೆ ಸ್ಥಿರ ಆಸನದಲ್ಲಿ ಕುಳಿತ ದಾಖಲೆಯಿಲ್ಲ, ಅರಿಶಿಣ ಕುಂಕುಮ ಧಾರಣೆ, ಕನ್ಯಾ ಸಂಸ್ಕಾರ, ಸ್ತ್ರೀಯರ ಜತೆ ಏಕಾಂತ ವ್ಯವಹಾರ... ಇದೆಲ್ಲ ರಾಘುನ ತೀಟೆಯ ಸೂಕ್ತ ಸಂಕೇತಗಳು. ರಾಘುಗೆ 38 ವರ್ಷ; ಪ್ರೇಮಲತಾಗೆ 51 ವರ್ಷ. ಇದು ತಾಯಿ-



ಶ್ಯಾಮ ಶಾಸ್ತ್ರಿ

ಮಗನ ನಡುವಿನ ಅಂತರವೆಂದು ನ್ಯಾಯಾಲಯವೇ ಹೇಳಿದೆ. ಇಂತಹ ತಾಯಿ ಸಮಾನಳನ್ನು ತಲುಬಿಗೆ ಬಳಸಿಕೊಂಡಿರುವ ರಾಘು ಅದೆಂಥ ಪಾಪಿಯಾಗಿರಬಹುದು?

ಬರೋಬ್ಬರಿ ನಾಲ್ಕು ವರ್ಷ ಕಾಲ ರಾಘು ಪ್ರೇಮಲತಾರನ್ನು ಉಪಯೋಗಿಸಿದ್ದಾನೆ. ಮದುವೆಯಾದ ಹೆಣ್ಣು ವರ್ಷಕ್ಕಿಂತ ಹೆಚ್ಚು ಕಾಲ ಪರಪುರುಷನ ನಿಯಂತ್ರಣದಲ್ಲಿದ್ದಾಳೆಂದರೆ ಅದು ಒಂದೇ ಸೂರಿನಡಿ ವಾಸಿಸಿದವರ ಸಂಬಂಧ ಎಂದು ನ್ಯಾಯಾಲಯ ವ್ಯಾಖ್ಯಾನಿಸಿದೆ. ರಾಘು-ಪ್ರೇಮಲತಾರದು "ಪರಸ್ಪರ ಒಪ್ಪಿತ ಸಂಬಂಧ" ಎಂದು ಸೆಷನ್ಸ್ ಕೋರ್ಟ್ ಅಭಿಪ್ರಾಯಪಟ್ಟಿದೆ. ಇದಕ್ಕೆ ನೈತಿಕ ಹೊಣೆಗಾರ ರಾಘು ಸ್ವಾಮಿ ಅಲ್ಲವಾ? ಪ್ರೇಮಲತಾರನ್ನು ವ್ಯಭಿಚಾರಿಣಿ ಎನ್ನುವುದಾದರೆ ಅಷ್ಟೇ ಪಾತಕಿ ರಾಘು ಅಲ್ಲವಾ?

169 ಬಾರಿ ರಾಘು ಭೋಗಿಸಿದ್ದಾನೆ ಎಂಬ ಬಗ್ಗೆ ಕೋರ್ಟ್ ಆಕ್ಷೇಪಿಸಿದೆ. ಆಕೆಯನ್ನು ಒಂದು ಬಾರಿಯೂ ರಾಘು ತನ್ನಲ್ಲಿಗೆ ಬಾ ಎಂದು ಕರೆದಿಲ್ಲ ಎಂದು ತೀರ್ಪಲ್ಲಿ ಉಲ್ಲೇಖಿಸಲಾಗಿದೆ. ಸಂತ್ರಸ್ತೆಯೇ ಯಾವ ಅಳುಕಿಲ್ಲದೆ ಸ್ವಾಮಿಯಿದ್ದಲ್ಲಿ ಹೋಗಿದ್ದಾಳೆ ಎಂದಿದೆ. ಸರಿ, ಸನ್ಯಾಸಿಯಾದವನು ಹೆಂಗಸೊಬ್ಬಳು ಹತ್ತಿರ ಬಂದಾಗ ಬಳಸಿಕೊಳ್ಳಬಹುದಾ? ಇದು ಸನ್ಯಾಸ ನೀತಿಯಾ? ರಾಘು ತನ್ನ ಬಳಿ ಬಂದವಳಿಗೆ ಬುದ್ಧಿ ಹೇಳಿ ಕಳಿಸುವ ಸ್ಥಾನದಲ್ಲಿದ್ದಾತ. ಅಂಥವನೇ ಹೆಣ್ಣೊಬ್ಬಳು ತನ್ನ ಬಳಿ ಪದೇಪದೇ ಬರುವಂತೆ ಮಾಡಿದ್ದಾನೆಂದರೆ ಆತ ಸನ್ಯಾಸಕ್ಕೆ ಯೋಗ್ಯವಾ? ಹೆಜ್ಜೆಹೆಜ್ಜೆಗೂ ಎಡವಿರುವ ರಾಘುನನ್ನು ಇನ್ನೂ ಹವ್ಯಕರು ಸಹಿಸಿಕೊಂಡರೆ ಅದಕ್ಕಿಂತ ದೊಡ್ಡ ದುರಂತ ಆ ಸಮಾಜದಲ್ಲಿ ಮತ್ತೊಂದಾಗಲಿಕ್ಕಿಲ್ಲ!

ಕೋರ್ಟ್ ಕರುಣೆ

ರಾಘು ಅತ್ಯಾಚಾರ ಮಾಡಿಲ್ಲ; ಅನಾಚಾರ ಮಾಡಿದ್ದಾನೆಂಬುದು ಕೋರ್ಟ್ ತೀರ್ಪಿನ ಒಟ್ಟು ತಾತ್ಪರ್ಯ! ಕೋರ್ಟ್ ಈ ಕಳ್ಳ ಸನ್ಯಾಸಿ ಮೇಲೆ ಒಂಚೂರು ಕರುಣೆ ತೋರಿಸಿದಂತಿದೆ. ಆದರೆ ಅಗ್ನಿಪರೀಕ್ಷೆಯಲ್ಲಿ ಆತನನ್ನು ಸಂಪೂರ್ಣ ಪಾಸ್ ಮಾಡಲು ಕೋರ್ಟಿಗೂ ಸಾಧ್ಯವಾಗಿಲ್ಲ. ಅಷ್ಟು ಬಲವತ್ತರವಾದ ಪಾಪ ಈ ರಾಘು ಕಾವಿ ತೊಟ್ಟುಕೊಂಡೇ ಮಾಡಿದ್ದಾನೆ. ಆತ ಅತ್ಯಾಚಾರ ಮಾಡಿಲ್ಲವೆಂದು ಹೇಳುತ್ತ ಹೋಗುವ ತೀರ್ಪು ಪ್ರೇಮಲತಾಳೇ ತಪ್ಪಿತಸ್ಥೆ ಎಂದು ತೋರಿಸಿದಂತೆಲ್ಲ ರಾಘು ನೈತಿಕ ಅಧಃಪತನಕ್ಕೆ ಬಿದ್ದಿದ್ದು ಸ್ಪಷ್ಟವಾಗುತ್ತದೆ; ಸಂತ್ರಸ್ತೆ ಜತೆ ಸನ್ಯಾಸಿಗೆ ಲೈಂಗಿಕ ಸಂಬಂಧ ಇತ್ತೆಂಬುದು ಎಳೆಎಳೆಯಾಗಿ ಮನದಟ್ಟಾಗುತ್ತದೆ!

ಒಂದು ಬಾರಿ, ಎರಡು ಬಾರಿ, ಮೂರು ಬಾರಿ ಅತ್ಯಾಚಾರವಾಗಿದೆ ಎಂದರೆ ನಂಬಬಹುದು. ನೂರಕ್ಕೂ ಹೆಚ್ಚು ಬಾರಿ, ವರ್ಷಕ್ಕೂ ಹೆಚ್ಚು ಕಾಲ ಅತ್ಯಾಚಾರ ನಡೆದಿದೆ, ದೇವರ ಹೆಸರಲ್ಲಿ ಹೆದರಿಸಿ ಬಳಸಲಾಗಿದೆ ಎಂದರೆ ಅದು ಕಟ್ಟುಕತೆ- ಎಂಬುದು ಸೆಷನ್ಸ್ ನ್ಯಾಯಾಧೀಶರ ತರ್ಕ. ಇದೊಂದು ಪರಸ್ಪರ ಒಪ್ಪಿತ ಲೈಂಗಿಕ ಸಂಪರ್ಕ ಎಂದು ನ್ಯಾಯಾಲಯ ಹೇಳಿದೆ. ದೇವರ ಭಯ, ಆಕೆಯ ಕೌಟುಂಬಿಕ ದೌರ್ಬಲ್ಯಗಳನ್ನೆಲ್ಲ ಬಳಸಿ ಪ್ರೇಮಲತಾರ ದಿಕ್ಕು ತಪ್ಪಿಸುವ ತಂತ್ರಗಾರಿಕೆ ರಾಘು ಮಾಡಿದ್ದ. ಆಕೆಯೇ ಕಡೆಕಡೆಗೆ ಒಪ್ಪಿಕೊಂಡು ಆತನಿಗೆ ಅರ್ಪಿಸಿಕೊಳ್ಳುವಂತೆ ಷಡ್ಯಂತ್ರ ರಾಘು ಮಾಡಿದ್ದ.

ಇದೆಲ್ಲಾ ಏನೇ ಇರಲಿ. ಆರಂಭದಲ್ಲಿ ದೇವರು-ಧರ್ಮ-ರಾಮನ ಶಾಪ ಎಂದೆಲ್ಲಾ ಹೆದರಿಸಿ ಅತ್ಯಾಚಾರ ಮಾಡಿರುವ ರಾಘು ನಂತರ ಪಳಗಿಸಿದ್ದಾನೆ. ಸಿಆರ್‌ಪಿಸಿ 227ರ ಪ್ರಕಾರ ಧಾರ್ಮಿಕ-ದೇವರ ಭೀತಿ ಹುಟ್ಟಿಸಿ ಮಹಿಳೆಯನ್ನು ಲೈಂಗಿಕವಾಗಿ ಸಮರ್ಪಣೆ ಆಗುವಂತೆ ಮಾಡುವುದೂ ಅತ್ಯಾಚಾರವೇ! ಈಗ ಬಂದಿರುವ ತೀರ್ಪನ್ನೇ ಇಟ್ಟುಕೊಂಡು ಸರಿಯಾದ ಟ್ರಾಯಲ್ (ವಿಚಾರಣೆ) ನಡೆಸಿದರೆ ರಾಘು ವಿಕೃತ ರೇಪಿಸ್ಟ್ ಎಂಬುದು ರುಜುವಾತಾಗುತ್ತದೆ.

ದುರ್ಬಲ ತೀರ್ಪು

ಪ್ರಬಲವಾದ ಸಾಕ್ಷ್ಯ-ಅಂಶಗಳನ್ನು ಟ್ರಾಯಲ್ ಕೋರ್ಟ್ ಕಡೆಗಣಿಸಿ ಜಾಳು-ಜಾಳಾದ ಅಂಶಗಳನ್ನು ಪರಿಗಣಿಸಿ ಕ... ಹರುಕ ರಾಘುಗೆ ರಿಲೀಸ್ ನೀಡಲಾಗಿದೆ. ಸಮ... ವಿಶ್ಲೇಷಣೆಯೂ ಮಾಡಿಲ್ಲ, ಈ ಇಡೀ ರೇಪ್ ಪ್ರಕರಣದಲ್ಲಿ ಸಂತ್ರಸ್ತೆ ರಾಮನ ಹೆಸರಲ್ಲಿ ತನ್ನನ್ನು ಕುಲಗುರು ಲೈಂಗಿಕವಾ... ಬಳಸಿಕೊಂಡರು ಎಂದು ಆರೋಪಿಸಿದ್ದು ಪ್ರಮುಖ ಅಂಶ... ಇದರ ಸುತ್ತ ವಿಚಾರಣೆ-ವಿಶ್ಲೇಷಣೆ ನ್ಯಾಯಾಲಯದಲ್ಲಿ ನಡೆದೇ ಇಲ್ಲ, ತೀರ್ಪಿನಲ್ಲಿ ರಾಘು ಕಾವಿ ಮುಖವಾಡದಲ್ಲಿ ಕಾಮದಾಟ ಆಡುವ ಕೀಚಕನೆಂಬುದು ಜಗಜ್ಜಾಹೀರಾಗಿದ... ಯಾದರೂ ಪ್ರೇಮಲತಾರಿಗೆ ನ್ಯಾಯ ಸಿಕ್ಕಿಲ್ಲ.

ನ್ಯಾಯ ಸಿಗುವುದಿರಲಿ, ಆಕೆಯೇ ರಾಘುನ ಜ... ಅನೈತಿಕ ಮಿಲನಕ್ಕೆ-ಸಂಬಂಧಕ್ಕೆ ಹಾತೊರೆಯುತ್ತಿದ್ದ... ವ್ಯಭಿಚಾರಿಣಿ ಎಂಬಂತೆ ಚಿತ್ರಿಸಲಾಗಿದೆ. ರಾಘು ಮತ್ತಾತನ ತಾಲಿಬಾನಿ ಅನುಯಾಯಿಗಳಿಂದ ಪ್ರೇಮಲತಾರಿಗೆ ಆಗಿರುವ ಹಿಂಸೆ, ಅವಮಾನ, ಅನ್ಯಾಯ, ಅನಾಹುತದ ಬಗ್ಗೆ ನ್ಯಾಯಾಲಯ ತಲೆ ಕೆಡಿಸಿಕೊಂಡಿಲ್ಲ, ರಾಘುನ ಧಾರ್ಮಿಕ... ದಾದಾಗಿರಿಯಿಂದ ಆಕೆಯ ಮೈದುನ (ಗಂಡನ ತಮ್ಮ) ಶ್ಯಾಮಶಾಸ್ತ್ರಿಯ ಬಲಿಯಾಗಿದೆ. ರಾಘುನ ಇಡೀ ಕಾಮ... ಕಾಂಡದಲ್ಲಿ ಶ್ಯಾಮಶಾಸ್ತ್ರಿಯದು ಅತ್ಯಂತ ಹೃದಯವಿದ್ರಾವಕ... ಬರ್ಬರ, ಅಮಾನುಷ, ಅನ್ಯಾಯದ ಆಹುತಿ. ಇದಕ್ಕೆ ರಾಘುನ ದೌರ್ಜನ್ಯವೇ ಕಾರಣ. ಪ್ರೇಮಲತಾರ ಬೆಳೆದುನಿಂತ ಇಬ್ಬರು ಹೆಣ್ಣು ಮಕ್ಕಳ ಚಾರಿತ್ರ್ಯಹನನ ತಾಲಿಬಾನಿ ಸೈತಾನರು ಫೇಸ್‌ಬುಕ್, ವ್ಯಾಟ್ಸ್‌ಆ್ಯಪ್ ಮೂಲಕ ವ್ಯವಸ್ಥಿತವಾಗಿ ಮಾಡಿದ್ದಾರೆ. ಇಂಥ ಅನ್ಯಾಯಕ್ಕೆಲ್ಲ ಪ್ರೇಮಲತಾ ಕುಟುಂಬಕ್ಕೆ ನ್ಯಾಯದ ಪರಿಹಾರ ಸಿಕ್ಕಿಲ್ಲ.

ಈಗ ಸಿದ್ದು ಸರ್ಕಾರ ನೇರ-ದಿಟ್ಟವಾಗಿ ನಡೆದುಕೊಳ್ಳ... ಬೇಕಿದೆ. ಸೆಷನ್ಸ್ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಹೈಕೋರ್ಟ್‌ಗೆ ಹೋಗಬೇಕಿದೆ. ಅಲ್ಲಿ ಸಮರ್ಥ, ನಿಷ್ಠೂರ, ಪ್ರಾಮಾಣಿಕವಾಗಿ ವಾದ ಮಂಡಿಸುವಂತೆ ಅಡ್ವೊಕೇಟ್ ಜನರಲ್‌ಗೆ ತಾಕೀತು ಮಾಡಬೇಕಿದೆ. ರಾಘುನ ಬಚಾಯಿಸಿದರೆ ಹವ್ಯಕ ಬ್ರಾಹ್ಮಣರೇನೂ ಕಾಂಗ್ರೆಸ್‌ಗೆ ಮತ ಹಾಕೋದಿಲ್ಲ ಎಂಬ ವಾಸ್ತವದ ಅರಿವು ಸಿದ್ದು-ದೇಶಪಾಂಡೆ ವಗೈರೆ ಕಾಂಗ್ರೆಸ್ ಕಲಿಗಳು ಅರ್ಥಮಾಡಿಕೊಳ್ಳಬೇಕಿದೆ. ಬಿಜೆಪಿಗಳು-ಚೆಡ್ಡಿಗಳೇ ರಾಘುನ ದೂರ ಮಾಡಿರುವಾಗ ಈ ಸೋಕಾಲ್ಡ್ ಸೆಕ್ಯುಲರ್ ಕಾಂಗ್ರೆಸಿಗರಿಗೇಕೆ ಕಾಮುಕ ರಾಘು ಸ್ವಾಮಿ ಸಹವಾಸ?!


■ ಶುದ್ಧೋಧನ

11⇦ ಅಂಕೋಲಾ...

ಪಡೆಯುವ ರಮೇಶ್ ಕೃತಘ್ನನೆಂಬ ತೀರ್ಮಾನಕ್ಕಾತ ಬಂದ. ಅಷ್ಟೇ ಅಲ್ಲ, ರಮೇಶನಿಗೆ ಏಟು ಕೊಟ್ಟೇ ಪಾಠ ಕಲಿಸುವ ನಿರ್ಧಾರ ಮಾಡಿದ.

ಅರಮನೆಯಲ್ಲಿ ಪಾತಕ

ದುಡ್ಡಿನ ದೊಡ್ಡಪ್ಪ ಮಯೂರ ಮತ್ತು ಪತ್ರಕರ್ತ ರಮೇಶ್ ನಡುವೆ ಒಂಥರಾ ವೈಯಕ್ತಿಕ ಬಾಂಧವ್ಯ ಬೆಳೆದಿತ್ತು. ಪತ್ರಕರ್ತನಾದ್ದರಿಂದ ಪ್ರಚಾರದ ತೆವಲಿಗೆ ಈ ರಮೇಶ ನೆರವಾಗಬಹುದೆಂಬ ಲೆಕ್ಕಾಚಾರದ ನಂಟು ಮಯೂರ ಮಾಡಿಕೊಂಡ. ರಮೇಶನೂ ಆತನಿಗೆಂದೂ ಕೆಡು ಬಗೆದವನಲ್ಲ, ತನ್ನ ಕಾರ್ಯಕ್ರಮಗಳ ಪ್ರಾಯೋಜಕನಾದ ಮಯೂರ ಹಿತೈಷಿಯಂತೆಯೇ 'ವರದಿಗಾರಿಕೆ'



ರಮೇಶ್ ಮೇಲೆ ಹಲ್ಲೆಯನ್ನು ಖಂಡಿಸಿ ಬೃಹತ್ ಸಭೆ

ಮಾಡಿಕೊಂಡಿದ್ದ. ಹಾಗಂತ ಮಯೂರನ ಹಿಂಬಾಲಕರ ಬಗ್ಗೆ ಆತನಿಗೆ ಮೃದು ಧೋರಣೆ ಇರಲಿಲ್ಲ, 'ಲಂಕೇಶ್'ನಲ್ಲಿ ಮಯೂರ್‌ನ ಅಸಲಿ ಅವತಾರ ಅನಾವರಣವಾದ ಬಳಿಕ ರಮೇಶ್‌ಗೆ ಗಂಡಾಂತರ ಶುರುವಾಗಿತ್ತು. ಮಯೂರ್-ರಮೇಶ್ ಸಂಬಂಧ ಹಳಸಿತ್ತು. ಆ ವರದಿ ತಾನು ಮಾಡಿದ್ದಲ್ಲವೆಂದು ರಮೇಶ್ ಪರಿಪರಿಯಾಗಿ ಹೇಳಿ ಅಲವತ್ತುಕೊಂಡರೂ ಮಯೂರ ನಂಬಲೇ ಇಲ್ಲ, ಅಷ್ಟು ಆತನ ಮನಸ್ಸನ್ನು ಹಿಂಬಾಲಕರು ಕೆಡಿಸಿಬಿಟ್ಟಿದ್ದರು.

ಜಗದೀಶ್ ನಾಯಕ್ ಎಂಬ ಕನ್ನಡ ಶಾಲೆ ಮಾಸ್ತರ್ ಒಬ್ಬರು ರಾಜಿಗೆ ಹಲವು ದಿನದಿಂದ ಪ್ರಯತ್ನ ನಡೆಸಿದ್ದರು. ಕಳೆದ 22.03.16ರ ಮುಸ್ಸಂಜೆ ವೇಳೆಗೆ ಈ ಮಾಸ್ತರ್ ರಮೇಶ್‌ನನ್ನು ಅರಮನೆಗೆ ಕರೆದೊಯ್ದಿದ್ದಾರೆ. ವರದಿ ಬಗ್ಗೆ ವಿವರಣೆ ಕೊಟ್ಟು 'ದೇವರಿಗೆ' ಸಮಾಧಾನಮಾಡುವಂತೆ ಕಿವಿ ಮಾತು ಹೇಳಿದ್ದಾರೆ. ಹಿರಿಯರಾದ ಮಾಸ್ತರ್ ಬಗ್ಗೆ ರಮೇಶ್‌ಗೆ ಯಾವ ಸಂಶಯವೂ ಇರಲಿಲ್ಲ, ಆದರೆ ಅರಮನೆ ಗೇಟು ದಾಟುತ್ತಿದ್ದಂತೆಯೇ ಅಲ್ಲಿದ್ದ ಗೂಂಡಾ ಗೋಪು ಗ್ಯಾಂಗು ರಮೇಶನ ಮೇಲೆ ಮುಗಿಬಿದ್ದಿದೆ. ಒಂದೇಸಮನೆ ಹೊಡೆಯತೊಡಗಿದೆ. ನೆಲಕ್ಕುರುಳಿಸಿ ಮನಸೋಇಚ್ಛೆ ಒದ್ದು-ತುಳಿದು ಹಿಂಸಿಸಿದ್ದಾರೆ. ಅರಮನೆ ಆವರಣದಲ್ಲಿದ್ದ 20-25 ಮಂದಿ ಪುಂಡರ ದಂಡಿನ ದಾಳಿಗೆ ರಮೇಶ್ ಹೈರಾಣಾಗಿ ಹೋಗಿದ್ದಾನೆ.

20-25 ನಿಮಿಷ ಈ ಬರ್ಬರ ಹಲ್ಲೆ ನಡೆದಿದೆ. ಆಗ ಮಯೂರ ಕೇವಲ ಐದ್ಹತ್ತು ಅಡಿ ದೂರದಲ್ಲಿ ಕುರ್ಚಿ ಹಾಕಿ ಕುಂತು ಕ್ರೌರ್ಯ ಕಂಡು ಖುಷಿಗೊಂಡಿದ್ದಾನೆ. ಹಲ್ಲೆಕೋರ ಹಿಂಬಾಲಕರ ತಡೆಯುವ ಯಾವ ಪ್ರಯತ್ನವೂ ಈ ದುಷ್ಟನಿಂದ ಆಗಿಲ್ಲ. ಬದಲಿಗೆ ಮೌನವಾಗೇ ಸಹಚರರನ್ನು ಪ್ರಚೋದಿಸಿದ್ದಾನೆ. ಮಯೂರನ ಮಾವ ರಾಜೇಶ್ ನಾಯಕ್ ಎಂಬ ರೌಡಿ "ರಮೇಶಾ... ಇಂದಿನಿಂದ ನಮ್ಮ ಯುದ್ಧ ಶುರು... ನಿನಗೆ ಏನು ಮಾಡಬೇಕೋ ಅದು ಮಾಡ್ತೇವೆ... ನಾವು ಯಾರಿಗೂ ಹೆದರೋದಿಲ್ಲ..." ಎಂದು ಪ್ರಾಣಭಯ ಮೂಡಿಸಿದ್ದಾನೆ. ಮಾವನ ಕ್ರಿಮಿನಲ್ ಮಾತಿಗೆ ಅಳಿಯ ಮಯೂರ ಮೀಸೆಯಲ್ಲೇ ನಕ್ಕಿದ್ದಾನೆ. 20-25 ನಿಮಿಷ ಪೆಟ್ಟು ತಿಂದು ತತ್ತರಿಸಿಹೋಗಿದ್ದ ರಮೇಶ್ ಹೇಗು-ಹೇಗೋ ಅಂತೂ ಸೈತಾನರ ಅಡ್ಡೆಯಿಂದ ಹೊರಗೋಡಿ ಬಂದಿದ್ದಾನೆ.

ಸಾಕ್ಷಿಗಳಿಗೂ ಧಮಕಿ

ರಮೇಶ್ ನೇರ ಪೊಲೀಸ್ ಠಾಣೆಗೆ ಹೋಗಿದ್ದಾನೆ. ಕಂಪ್ಲೇಂಟು ಬರೆಯುತ್ತಿರುವಾಗಲೇ ಮಯೂರನ ಪುಂಡರ ದಂಡು ದೂರು ಕೊಡದಂತೆ ಒತ್ತಡ ಹಾಕಿದೆ. ಆದರೆ ರಮೇಶ್ ಹೆದರದೇ ಗೂಂಡಾಗೋಪು ಮತ್ತವನ ಗ್ಯಾಂಗ್‌ಸ್ಟರ್‌ಗಳ ಮೇಲೆ ಕಂಪ್ಲೇಂಟು ಕೊಟ್ಟಿದ್ದಾನೆ. ಆದರೆ ಮಯೂರನ ಮೇಲೆ ಕರುಣೆ ತೋರಿದ್ದಾನೆ. ಕೇಸ್‌ನಲ್ಲಿ ಮಯೂರನ ಫಿಕ್ಸ್ ಮಾಡದೆ ಎಡವಿದ್ದಾನೆ. ಇಡೀ ಹಲ್ಲೆ ಪ್ರಕರಣದ ಸೂತ್ರಧಾರನಾದ ಮಯೂರನ ಮೇಲೆ ದೂರು ದಾಖಲಾಗಿದ್ದರೆ ಕೇಸ್‌ಗೆ ಶಕ್ತಿ ಬರುತ್ತಿತ್ತು.

ತಕ್ಷಣ ಪಿಎಸ್‌ಐ ಕುಮಾರ ಕಾಡಕರ್ ತನ್ನ ಸಿಬ್ಬಂದಿ ಜತೆ ಪಂಚನಾಮೆಗೆಂದು ಅರಮನೆ ಆವರಣಕ್ಕೆ ಹೋಗಿದ್ದಾನೆ. ಅಲ್ಲಿ ಮತ್ತದೇ ರಾಜೇಶ್, ಗೋಪು ಪೊಲೀಸರಿಗೂ ಕೇರ್ ಮಾಡದೆ ಹಾರಾಡಿದ್ದಾರೆ. ಪಂಚನಾಮೆಗೆಂದು ಬಂದಿದ್ದ ನಾಲ್ಕು ಮಂದಿ ಸಾಕ್ಷಿಗಳಿಗೆ ಧಮಕಿ ಹಾಕಿ ಓಡಿಸಿದ್ದಾರೆ. ಕೇಸ್ ಹಳ್ಳ ಹಿಡಿಸಲು ಮಯೂರನ ಗೂಂಡಾಪಡೆ ಮಾಡಬಾರದ್ದೆಲ್ಲ ಮಾಡುತ್ತಿದೆ. ಸಾಕ್ಷಿಗಳೇ ಸಿಗದಂತೆ ಮಾಡುತ್ತಿದ್ದಾರೆ. ಆದರೆ ಮಯೂರನ ಮನೆ ಆವರಣದ ಸಿಸಿ ಕ್ಯಾಮರಾದ ಪುಟೇಜ್‌ಗಳೇ ಸಾಕು ಘಟನೆಯನ್ನು ನಿಸ್ಸಂಶಯವಾಗಿ ವಿವರಿಸಲು. ಮಯೂರನ ಪೊಲೀಸ್ ಬೆಂಗಾವಲು ಪಡೆಯ ಪೊಲೀಸರನ್ನೇ ವಿಚಾರಣೆಗೆ ಒಳಪಡಿಸಿದರೆ ಸತ್ಯಾಸತ್ಯತೆ ಗೊತ್ತಾಗುತ್ತದೆ.

ಈಗಿರುವ ಜರೂರತ್ತೆಂದರೆ ನಿಷ್ಪಕ್ಷಪಾತ ತನಿಖೆ ಒಂದೇ. ಪತ್ರಕರ್ತರು, ಎಸ್ಪಿ, ಡಿಸಿಗಳಿಗೆಲ್ಲಾ ಹಲ್ಲೆ ಖಂಡಿಸಿ ಮನವಿ ಕೊಟ್ಟಿದ್ದಾರೆ. ವರದಿಗಾರರಿಗೆ ಭದ್ರತೆ ಒದಗಿಸಲು ಕೋರಿದ್ದಾರೆ. ಆದರೆ ರಮೇಶನ ಜೀವಕ್ಕೆ ಅಪಾಯವಂತೂ ಎದುರಾಗಿದೆ. ಮಯೂರನ ಕುಟುಂಬದ ರೌಡಿಗಳು ಮತ್ತು ಬೆಂಬಲಿಗ ಪುಂಡರು ಏನು ಮಾಡಲಿಕ್ಕೂ ಹೇಸದ ಹರಾಮಿಗಳೆಂಬುದು ಇಡೀ ಅಂಕೋಲೆಗೇ ಗೊತ್ತಿರುವ ಸತ್ಯ. ರಮೇಶನ ಜೀವ-ಜೀವನಕ್ಕೆ ತೊಂದರೆಯಾದರೆ ಎಸ್ಪಿ ವಂಶಿಕೃಷ್ಣರೇ ಹೊಣೆಗಾರರಾಗಬೇಕಾಗುತ್ತದೆ. ಎಸ್ಪಿ ಸಾಹೇಬರು ಮುಲಾಜಿಗೆ-ಒತ್ತಡಕ್ಕೆ ಸಿಲುಕದೆ ಅಸಹಾಯಕ ಜೀವ ಕಾಪಾಡಬೇಕಿದೆ!!

■ ವರದಿಗಾರ

ವಚನಧರ್ಮ ಸಾರ

ಒಲವಿನ ಚೆಲುವಿನ ಬಸವನಾಡು
ಭೂರಮೆಗೆ ಶೃಂಗಾರ ಶರಣಬೀಡು.


ಧುಮ್ಮಿಕ್ಕಿ ಹರಿದು ಜನಸಾಗರ
ತುಂಬಿ ತುಂಬಿ ಕಲ್ಯಾಣನಗರ
ವಚನಗಳ ನಾದದ ಝೇಂಕಾರ
ಲೋಕಾನುಭವದ ಸಾಕ್ಷಾತ್ಕಾರ.

ಮಹಾಮನೆ ಮದಿಲ ಮಮಕಾರ
ದಾಸೋಹ ಮಾತೆಯ ಉಪಚಾರ
ಸರ್ವಕಾಯಕ ನಿಷ್ಠೆಯ ಶಿಷ್ಟಾಚಾರ
ಸಮತೆಯೆ ಸದ್ಗುಣ ಸದಾಚಾರ.

ಅನುಭವ ಮಂಟಪದ ವಿಚಾರ
ಅರಿವಿನ ಸುದಿಗಡಣ ನಿರಂತರ
ಪರಿಶೀಲಿಸಿ ಮಾಡಿದರು ಸ್ವೀಕಾರ
ಶರಣರ ಕ್ರಿಯೆಗಿಳಿಯಿತು ಆಚಾರ.

ವಚನಗಳು ತುಂಬಿದವು ಭಂಡಾರ
ದಶದಿಕ್ಕುಗಳಿಗೆ ನವ ಸಮಾಚಾರ
ಶರಣರಿಗೆ ಸಂಕಟ ಡಂಬಾಚಾರ
ಶರವೇಗದಿ ಸಾಗಿತು ಜ್ಞಾನಸಂಚಾರ.

ಬಯಸಲಿಲ್ಲ ಯಾರ ಉಪಕಾರ
ಇದ್ದರವರು ಅತ್ಯಂತ ಉದಾರ
ಬಸವ ಮಂತ್ರವೊಂದೇ ಉದ್ಧಾರ
ಮಾಡಿದರೆಲ್ಲೆಡೆ ವಚನ ಪ್ರಚಾರ.



ಹಾಡುತ್ತ ಸಾಗಿದರು ಊರೂರ
ಭೇದಭಾವ ಮರೆತು ಬಲುದೂರ
ಪ್ರಾಣವೇ ಪಣಕ್ಕಿಟ್ಟು ಹೋದವರ
ಕುರುಹು ವಚನಧರ್ಮ ಸಾರ.

■ ಜಯಶ್ರೀ ಸುಕಾಲಿ

ಫಲಿಸೇ ಫಲಿಸುತ್ತೆ 'ಹೋಮಫಲ'

ಅವತ್ತು ಗುರುವಾರ.

ಟಿವಿ ನೋಡುತ್ತಾ ಕುಳಿತಿದ್ದೆ.

ಎರಡು ಪ್ರತ್ಯೇಕ ಸಂದರ್ಭ. ದೇವರ ಪ್ರಸ್ತಾಪ ಬಂತು. ಇತ್ತೀಚೆಗೆ ದೇವಾನುದೇವತೆಗಳಿಗೆ ಟಿವಿ ಹುಚ್ಚು ...ಳವಾಗಿ ಹತ್ತಿಕೊಂಡಿದೆ ಇರಲಿ.

ಸಂದರ್ಭ 1 : ಯಾವುದೋ ದೇವಸ್ಥಾನ.

ಹೋಮ ನಡೆಯುತ್ತಿತ್ತು.

ನೂರಾರು ಜನ ಶ್ರದ್ಧಾಭಕ್ತಿಗಳಿಂದ ಅದರಲ್ಲಿ ...ಲ್ಗೊಂಡಿದ್ದರು. ಆನಂದಮಯ ನೋಟ.

ಹೋಮ ಮಾಡಲು ಕಾರಣ ಅಂತ ಇರಬೇಕಲ್ಲ, ...ರಣ ಇಲ್ಲದೆ ಹಾಗೆಲ್ಲ ಹಣ, ಸಮಯ ವ್ಯರ್ಥ ...ಾಡುವವರಲ್ಲ ನಾವು.

ಭಾರತದಲ್ಲಿ ಹೋಮ ನಡೆಯುವುದು ಎರಡು ...ರಣಗಳಿಗಾಗಿ.

1. ವಿಶ್ವಶಾಂತಿಗಾಗಿ.

ತೆಲಂಗಾಣ ಮುಖ್ಯಮಂತ್ರಿ ಚಂದ್ರಶೇಖರ್ ಮಾಡಿದ ...ತ್ತೀಚಿನ ಯಜ್ಞವನ್ನು ಉದಹರಿಸಬಹುದು.

2. ಭಾರತ ಕ್ರಿಕೆಟ್ ತಂಡದ ಗೆಲುವಿಗಾಗಿ.

ಭಾರತ-ಪಾಕಿಸ್ತಾನ ನಡುವಣ ಪಂದ್ಯ ಇದರೆ ಇದು ...ತ್ಯಾಯ. ಇವೆರಡೂ ಸಾಂಪ್ರದಾಯಿಕ ವಿರೋಧಿಗಳು ...ಂದು ಮಾಧ್ಯಮಗಳು ತೀರ್ಪು ನೀಡಿವೆ. ಭಾರತದ ...ಡ ಪಾಕಿಸ್ತಾನವನ್ನು ಸದೆಬಡಿಯಲು 'ಹೋಮ' ...ನಿವಾರ್ಯ. ಈಗ ಅದರ ಉಪಯೋಗ ಇಲ್ಲ, ಪಾಕಿಸ್ತಾನದ ...ಂಡವನ್ನು ಸದೆಬಡಿದು ಆಗಿದೆ. ಮಾಧ್ಯಮಗಳು ...ೊಂಡಾಡಿವೆ. ಪ್ರಧಾನಿ ಮೋದಿ ಅಭಿನಂದಿಸಿಯೂ ಆಗಿದೆ. ...ನ್ನೂ ಯಾಕೆ ಇದು?

ವಿಶ್ವಕಪ್ ಭಾರತಕ್ಕೆ ಬರಬೇಕು!

ಅದಕ್ಕೆ ಸೆಮಿಫೈನಲ್ ಗೆಲ್ಲಬೇಕು. ಇದು ಆಗದಿದ್ದರೆ ...ದು ಅಸಾಧ್ಯ, ಅದಕ್ಕಾಗಿ ಈ ಹೋಮ.

ಫಲಿಸಿತೆ ಅವರ ಹೋಮದ ಫಲ?

ವೆಸ್ಟ್ ಇಂಡೀಸ್ ಧಾಂಡಿಗರು ಬಯಲಿಗೆಳೆದರು ಭಾರತ ತಂಡದ ದೌರ್ಬಲ್ಯವ!

ಅಂದರೆ ನಿಷ್ಫಲವಾಯಿತು ಹೋಮ?

ಇಲ್ಲ ಇಲ್ಲ, ಹೋಮ ಫಲ ನಿಷ್ಫಲ ಸಾಧ್ಯವೇ ಇಲ್ಲ, ಈಗ ಫಲಿಸದಿರಬಹುದು. ಮುಂದೆ ಫಲಿಸೇ ಫಲಿಸುತ್ತೆ!

ಅದಕ್ಕೆ ಇರಬೇಕು ನಮ್ಮ ಮಾಧ್ಯಮಗಳು ಇಂತಹವುಗಳಿಗೆ ನಿರಂತರವಾಗಿ ಪ್ರಚಾರ ನೀಡುತ್ತಲೇ ಬಂದಿರುವುದು!

ಸಂದರ್ಭ 2 : ಕೊಲ್ಕತ್ತ ನಗರ.

ವಿವೇಕಾನಂದ ಫ್ಲೈ ಓವರ್ ನಿರ್ಮಾಣ ಹಂತದಲ್ಲಿತ್ತು, ಡಿಸೈನ್ಸ್, ಕನ್‌ಸ್ಟ್ರಕ್ಷನ್ನು ಎಲ್ಲ ಸೈಂಟಿಫಿಕ್ ಆಗೇ ಇತ್ತಂತೆ. ಆದರೂ ಅದು ಕುಸಿದುಬಿತ್ತು.

ಜನನಿಬಿಡ ಪ್ರದೇಶ ಅದು. ಬಿದ್ದ ಫ್ಲೈಓವರ್ ಅಡಿ ಸಿಕ್ಕ ಇಪ್ಪತ್ತಾರು ಅಮಾಯಕರು ಅಸು ನೀಗಿದರು; ನೂರಾರು ಜನ ಗಾಯಗೊಂಡರು; ಹತ್ತಾರು ವಾಹನಗಳು ಜಖಂಗೊಂಡವು.

ಯಾರು ಈ ಸಾವು ನೋವಿಗೆ ಹೊಣೆ?


ಯಾರೂ ಇಲ್ಲವಂತೆ!

ಇದು ದೇವರ ಆಟ ಅಂತೆ!

ನಿರ್ಮಾಣ ಕಂಪನಿಯ ಅಧಿಕಾರಿಯ ಉತ್ತರ ಇದು!

ಇರಬೇಕು. ಈ ಕಂಪನಿ ಇಂತಹ ಹಲವಾರು ಕಾಮಗಾರಿಗಳನ್ನು ಯಶಸ್ವಿಯಾಗಿ ಮಾಡಿಮುಗಿಸಿದೆಯಂತೆ. ಅಲ್ಲೆಲ್ಲೂ ಆಗದ್ದು ಇಲ್ಲಿ ಆಯಿತು ಎಂದರೆ ಇದು ದೇವರ ಆಟವೇ ಸರಿ!

ಈ ವಾದ ಕೆಲವರಿಗೆ ಹಿಡಿಸಲಿಲ್ಲ, 'ಕಂಪನಿ ಮಾಡಿದ ತಪ್ಪಿಗೆ ದೇವರು ಹೇಗೆ ಹೊಣೆಯಾಗುತ್ತಾನೆ?' ಇದು ಅವರ ಪ್ರಶ್ನೆ. ಅದನ್ನೇ ಕಂಪನಿ ಅಧಿಕಾರಿಗೆ ಕೇಳಿದಾಗ ಬಂದ ಉತ್ತರ: 'ಇದು ನಿಯಂತ್ರಿಸಲಾಗದ ಅಪಘಾತ!'



ಅಂದರೆ ಅಳಿಯ ಅಲ್ಲ ಮಗಳ ಗಂಡ ಅಂದ ಹಾಗಾಯಿತು.

ರಾಜಕಾರಣಿಗಳ ವರಸೆನೇ ಬೇರೆ.

'ಕಮ್ಯುನಿಸ್ಟರು ಹೊಣೆ' ಎನ್ನುತ್ತಾರೆ ಮಮತಾ ಬ್ಯಾನರ್ಜಿ. ಅವರ ಕಾಲದಲ್ಲೇ ಇವರಿಗೆ ಕಾಂಟ್ರಾಕ್ಟ್ ಕೊಟ್ಟದ್ದು ಎಂಬುದು ಅವರ ವಾದ. ಲಂಚ ಪಡೆದು ಪರವಾನಗಿ ನೀಡಲಾಗಿದೆ ಎಂಬ ಇಂಗಿತ.

'ಪರವಾನಗಿ ಕೊಟ್ಟದ್ದು ನಾವೆ. ಆದರೆ ಫ್ಲೈ ಓವರ್ ನಿರ್ಮಾಣಕ್ಕೆ ತಡೆಒಡ್ಡಿದ್ದು ಈ ಸರ್ಕಾರ. ನಂತರ ಒಪ್ಪಿಗೆ ನೀಡಿತು' ಎನ್ನುತ್ತದೆ ಸಿಪಿಎಂ. ಕಾಮಗಾರಿ ಮತ್ತೆ ಪ್ರಾರಂಭಿಸಲು ಲಂಚ ನೀಡಲಾಗಿತ್ತು ಎಂಬ ಸೂಕ್ಷ್ಮ ಇದರಲ್ಲಿದೆ.

'ಸಿಪಿಎಂ, ಟಿಎಂಸಿ ಎರಡೂ ಭ್ರಷ್ಟತೆಯಲ್ಲಿ ಭಾಗಿಯಾಗಿವೆ' ಎನ್ನುತ್ತದೆ ಭಾಜಪ. ಇದು ಸಹಜವೇ. ಅದಿನ್ನೂ ಅಲ್ಲಿ ಅಧಿಕಾರ ಹಿಡಿದಿಲ್ಲ, ಅದು ಸಿಗುವವರೆವಿಗೂ ಅವರು ಸತ್ಯಹರಿಶ್ಚಂದ್ರರೇ!

ಪಾಪ ಕಾಂಗ್ರೆಸ್ಸು, ಭಾಜಪ ಮೇಲೆ ಗೂಬೆ ಕೂರಿಸುವಂತಿಲ್ಲ, ಯಾಕೆಂದರೆ ಅದು ಅಧಿಕಾರಕ್ಕೆ ಬಂದಿಲ್ಲ, ಸಿಪಿಎಂ ಮೇಲೆ ಕೂರಿಸೋಣ ಅಂದ್ರೆ ಅದರ ಜತೆ ಚುನಾವಣೆ ಹೊಂದಾಣಿಕೆ ಮಾಡಿಕೊಂಡಿದೆ. ಇವರ್ ಬಿಟ್ ಇವರ ಬಿಟ್ ಇವರ್ಯಾರು ಅಂದ್ರೆ ಟಿಎಂಸಿ ತಾನೆ. ಅದೇ ಹೊಣೆ. ಅಂದವ್ರೆ ರಾಹುಲ್ ಗಾಂಧಿ.

ಎಲ್ಲ ಪಕ್ಷಗಳೂ ಕೆಸರೆರಚಾಟದಲ್ಲಿವೆ. ಸಾವುನೋವಿಗೆ ಈಡಾದ ಅಮಾಯಕರ ಪ್ರಶ್ನೆ ಯಾರಿಗೂ ಬೇಕಿಲ್ಲ!

ಒಂದಂತೂ ಸ್ಪಷ್ಟ. ಫ್ಲೈ ಓವರ್ ಕುಸಿತದ ವಿಲನ್- ಭ್ರಷ್ಟಾಚಾರ!

ಆದರೆ ಯಾರಿಗೂ ಶಿಕ್ಷೆ ಆಗುವುದಿಲ್ಲ!

ಅಪಘಾತ ಕುರಿತು ಮೊದಮೊದಲು ಬಿಸಿಬಿಸಿ ಚರ್ಚೆಯಾಗುತ್ತೆ, ಕ್ರಮೇಣ ಮರೆತುಹೋಗುತ್ತೆ!

ಭ್ರಷ್ಟಾಚಾರಿಗಳಿಗೆ ಭಾರತದಲ್ಲಿ ಭಯವಿಲ್ಲ!

■ ಎಚ್ಚೆಲ್ಕೆ

...ಜಯಕಾರ' ಹಾಕುವ ಬದಲು 'ನಮಸ್ಕಾರ' ಹಾಕುವುದು ಸರಿ

ನಮ್ಮ ದೇಶದಲ್ಲಿ ದೇಶಭಕ್ತಿ ರಾಷ್ಟ್ರಗೀತೆಯ ಬಗ್ಗೆ ...ರ್ಥವಿಹೀನ ಚರ್ಚೆಗಳು ನಡೆಯುತ್ತಿರುವ ಹೊತ್ತಿನಲ್ಲೇ ...ರೋಮಣಿ ಅಕಾಲಿ ದಳದ ಮುಖ್ಯಸ್ಥ ಸಿಮ್ರಂಜಿತ್ ...ಂಗ್ ಮಾನ್ ಅವರು ಈ ರೀತಿ ಹೇಳಿಕೆಯನ್ನು ನೀಡಿದ್ದಾರೆ: ...ಸಿಖ್ ಸಮುದಾಯದವರು ಮಹಿಳೆಯರನ್ನು ಯಾವುದೇ ...ರೂಪದಲ್ಲಿ ಆರಾಧಿಸುವುದಿಲ್ಲ, ಆದ್ದರಿಂದ ನಾವು ಭಾರತ್ ...ಮಾತಾ ಕಿ ಜೈ ಎಂದು ಕೂಗುವುದಿಲ್ಲ."

ಭಾರತ್ ಮಾತಾ ಕಿ ಜೈ ಎನ್ನುವ ಬದಲು 'ಭಾರತ್ ...ದೇಶ್ ಕಿ ಜೈ' ಎಂದರೆ ಸರಿತೋರಬಹುದು. ಜತೆಗೆ ...ಭಾರತ ದೇಶದ ಪ್ರತೀಕವಾಗಿ ಹಿಂದೂ ಮಹಿಳೆಯ ಬದಲು ...ಭಾರತ ದೇಶದ ನಕಾಶೆಯನ್ನು ಚಿತ್ರಿಸಿ ಅದರ ನಡುವೆ ...ಭಾರತ್ ದೇಶ್ ಕಿ ಜೈ ಎಂದು ಬರೆದರೆ ಯಾರ ...ಆಭ್ಯಂತರವೂ ಇರಲಿಕ್ಕಿಲ್ಲ. ಅಥವಾ ಜೈ ಭಾರತ್, ಜೈ ...ಹಿಂದ್, ಮಾದರೇ ವತನ್ ಎಂದು ಹೇಳಿದರೂ ...ತಾಯಿನಾಡಿಗೆ ಜಯಕಾರ ಹಾಕಿದಂತೆಯೇ ಆಗುತ್ತದೆ. ...ಕೇವಲ ಭಾರತ್ ಮಾತಾ ಕಿ ಜೈ ಎನ್ನುವ ಹಿಂದಿ ಘೋಷಣೆ ...ಮಾತ್ರ ರಾಷ್ಟ್ರಪ್ರೇಮ ಆಗುವುದಿಲ್ಲ, ಅದು ಕೇವಲ ಹಿಂದಿ ...ದುರಾಭಿಮಾನ ಆಗುತ್ತದೆ ಅಷ್ಟೇ. ಕನ್ನಡ ಭಾಷೆಯಲ್ಲಿಯೂ ...ತಾಯಿನಾಡಿಗೆ ವಂದಿಸಿದರೆ ಅಥವಾ ಜಯಕಾರ ಹಾಕಿದರೂ ...ಅದು ದೇಶಪ್ರೇಮವೇ ಆಗುತ್ತದೆ.

ಈಗ ಭಾರತ ಮಾತೆಯನ್ನು ಒಂದು ಹಿಂದೂ ...ದೇವತೆಯಂತೆ ಚಿತ್ರಿಸಲಾಗುತ್ತಿದೆ. ಅದೇ ಕಿರೀಟ, ಅದೇ ...ಒಂಬತ್ತು ಗಜ ಸೀರೆ, ಮರಾಠಿ ಹೆಂಗಸಿನ ಸ್ಟೈಲಿನಲ್ಲಿ ...ಚ್ಚೆ ಕೆಲವೊಮ್ಮೆ ಹಿಂಬದಿಯಲ್ಲಿ ಘರ್ಜಿಸುವ ಭಂಗಿಯಲ್ಲಿ ...ಭಯಂಕರ ಸಿಂಹ (ಈ ಸಿಂಹ ಮನುವಾದಿಗಳ ...ರಕ್ತಪಿಪಾಸುತನದ ಸಂಕೇತವಿರಬಹುದೇ?). ಇದನ್ನೆಲ್ಲಾ ...ಸಿಖ್ಖರು ಒಪ್ಪಲು ಹೇಗೆ ಸಾಧ್ಯ. ಮೇಲಾಗಿ ಸಿಖ್ಖರ ...ತಾಯಂದಿರು ಸೀರೆ ಉಡುವುದೇ ಇಲ್ಲ, ವಯಸ್ಸಾದ ...ಹಿರಿಯ ಸಿಖ್ ಮಹಿಳೆಯರೂ ತೊಡುವುದು ಸಲ್ವಾರ್ ...ಕಮೀಜ್. ಹಾಗಿರುವಾಗ ರಾಜಾ ರವಿವರ್ಮನ ಚಿತ್ರಕಲೆ ...ಶೈಲಿಯ ಸೀರೆಯುಟ್ಟ ಹಿಂದೂ ಮಹಿಳೆಯ ಚಿತ್ರವೊಂದನ್ನು ...ಭಾರತ್ ಮಾತಾ ಎಂದು ಸಿಖ್ಖರು ಒಪ್ಪದಿರುವುದು ...ನ್ಯಾಯವಾಗಿಯೇ ಇದೆ. ಮೇಲಾಗಿ ಹಿಂದಿನ ಕಾಲದಲ್ಲಿ ...ಭಾರತೀಯರಿಗೆ ಬ್ಲೌಸ್ ಹೊಲಿಯುವುದು ಗೊತ್ತಿರಲಿಲ್ಲ, ...ಬ್ಲೌಸ್ ಬಂದಿದ್ದು ಪರ್ಶಿಯಾದಿಂದ ಹಾಗೂ ಸೀರೆ ಉಡುವ ...ಪದ್ಧತಿ ಬಂದಿದ್ದು ಗ್ರೀಸ್ ದೇಶದಿಂದ. ಈಗಲೂ 70% ...ಭಾರತೀಯರು ಬಡತನ ರೇಖೆಗಿಂತ ಕೆಳಗಿರುವಾಗ ಹಾಗೂ ಜೀವನದಲ್ಲೆಂದೂ ಒಂದು ಗ್ರಾಂ ಚಿನ್ನವನ್ನೂ ನೋಡಿರದಿದ್ದ ಕಡು ಬಡವರು ನಮ್ಮಲ್ಲಿ ಇರುವಾಗ, ರಾಜಾ ರವಿವರ್ಮನ ಭಾರತ ಮಾತೆ ಮೈ ತುಂಬೆಲ್ಲ ಕಿಲೋಗಟ್ಟಲೇ ಚಿನ್ನ ಹೇರಿಕೊಂಡು ವಜ್ರದ ಕಿರೀಟ ಧರಿಸಿ ವಯ್ಯಾರದಿಂದ ಪೋಜ್ ಕೊಡುವುದು ವಿರೋಧಾಭಾಸವಾಗಿ ಕಾಣುವುದಿಲ್ಲವೇ?

ಒಂದು ಪತ್ರ

ಭಾರತ್ ಮಾತಾ ಕಿ ಜೈ ಎನ್ನುವ ಜಯಕಾರ ಹಾಕುವುದೇತಕ್ಕೆ? ಭಾರತಕ್ಕೆ ಯಾರ ವಿರುದ್ಧ ವಿಜಯ ಬೇಕಾಗಿದೆ? ಭಾರತ ಮಾತೆಯ ಎದುರಾಳಿ ಯಾರು ಎಂದು ಗೊತ್ತಿರದೇ ವಿಜಯ ಘೋಷ ಹಾಕುವುದು ವ್ಯರ್ಥ ಅಲ್ಲವೇ. ಆದುದರಿಂದ "ಜಯಕಾರ" ಹಾಕುವ ಬದಲು ಭಾರತ ದೇಶಕ್ಕೆ "ನಮಸ್ಕಾರ" ಹಾಕುವುದು ಸರಿಹೊಂದುತ್ತದೆ.

ಮಹಾರಾಷ್ಟ್ರದ ಮುಖ್ಯಮಂತ್ರಿ ಫಡ್ನವೀಸ್ ಸಹ ಭಾರತವೆಂದರೆ ಅವನಪ್ಪನ ಆಸ್ತಿ ಎಂಬಂತೆ ನಿನ್ನೆ ಭಾರತ್ ಮಾತಾ ಕಿ ಜೈ ಎನ್ನದವರು ಭಾರತದಲ್ಲಿ ಇರಬಾರದು ಎಂದು ಹೇಳಿದ್ದಾನೆ. ಮಹಾರಾಷ್ಟ್ರದಲ್ಲಿ ಈ ಬಾರಿ ಭಯಂಕರ ಬರಗಾಲ ಬಿದ್ದು ಪ್ರಾಣಿಗಳು ನೀರು ಆಹಾರವಿಲ್ಲದೇ ಸಾಯುತ್ತಿವೆ ಮತ್ತು ರೈತರು ಗುಳೇ ಹೋಗುತ್ತಿದ್ದಾರೆ. ವಿದರ್ಭ ಮತ್ತು ಮರಾಠವಾಡಾದಲ್ಲಿ ಬರಗಾಲ ಸ್ಥಿತಿ ಅತಿ ಭಯಂಕರವಾಗಿದ್ದು ಅಲ್ಲಿ ಸರಕಾರದ ಪರಿಹಾರ ಕಾರ್ಯ ಸಮರ್ಪಕವಾಗಿಲ್ಲದೇ ಜನರು ಬಿಜೆಪಿ ಸರಕಾರದ ವಿರುದ್ಧ ದಂಗೆ ಏಳುವ ಸ್ಥಿತಿ ತಲುಪಿದ್ದಾರೆ. ಗೋಹತ್ಯಾ ನಿಷೇಧದಿಂದ ಬಡರೈತರು ತಮ್ಮ ಹಸು ಎತ್ತುಗಳನ್ನು ಸಹ ಮಾರಲಾಗದೇ ತಮ್ಮ ಕಣ್ಣೆದುರಿನಲ್ಲಿಯೇ ಅವು ನೀರು ಆಹಾರವಿಲ್ಲದೇ ಸಾಯುವುದನ್ನು ನೋಡುತ್ತಾ ಸಂಕಟ ಪಡುತ್ತಿದ್ದಾರೆ. ದೇಶದ ಆರ್ಥಿಕ ವ್ಯವಸ್ಥೆಯ ಸರಪಳಿಯಲ್ಲಿ ಧರ್ಮ ನುಸುಳಿದರೆ ಕೊನೆಗೆ ಬಡ ಜನರಿಗಾಗುವ ಕಷ್ಟನಷ್ಟ ಏನೆಂದು ಗೊತ್ತಾಗಬೇಕಾದರೆ ಮಹಾರಾಷ್ಟ್ರದ ಈಗಿನ ಗ್ರಾಮೀಣ ಸ್ಥಿತಿ ನೋಡಬೇಕು. ಈಗ ತಕ್ಷಣ ಮಹಾರಾಷ್ಟ್ರದಲ್ಲಿ ಚುನಾವಣೆ ನಡೆದರೆ ಬಿಜೆಪಿ-ಶಿವಸೇನೆ ದಿಲ್ಲಿಯಂತೆ ಸಂಪೂರ್ಣ ವಾಶ್-ಔಟ್ ಆಗುವುದು ಖಚಿತ. ಅದಕ್ಕಾಗಿ ಜನರ ಮನಸ್ಸು ಬೇರೆ ಕಡೆ ತಿರುಗಿಸಲು ಫಡ್ನವೀಸ್ ಭಾರತ್ ಮಾತಾ ಕಿ ಜೈ ಎಂಬ ದೇಶಭಕ್ತಿಯ ನಾಟಕ ಆಡುತ್ತಿದ್ದಾನೆ ಅಷ್ಟೇ.



ಇಂತಹ ಕೃತ್ರಿಮ ದೇಶಭಕ್ತಿ ಪ್ರದರ್ಶಿಸುವ ಈ ಮೂರ್ಖ ಫಡ್ನವೀಸ್ ನಮ್ಮ ಬೆಳಗಾವಿಯ ವಿಷಯದಲ್ಲಿ ಮಾತ್ರ ತನ್ನ ಸಂಕುಚಿತ ಬುದ್ಧಿ ಬಿಟ್ಟಿಲ್ಲ, ಈಗ ಬೆಳಗಾವಿ ಇರುವ ನಮ್ಮ ಕರ್ನಾಟಕ ಪಾಕಿಸ್ತಾನದಲ್ಲಿ ಇದೆಯೇನೋ ಎಂಬ ರೀತಿಯಲ್ಲಿ ಗಡಿ ತಂಟೆಯ ವಿಷಯದಲ್ಲಿ ಕರ್ನಾಟಕದೊಂದಿಗೆ ಈತ ದ್ವೇಷ ಸಾಧಿಸುತ್ತಿದ್ದಾನೆ. ರಾಷ್ಟ್ರಪ್ರೇಮ ಇರುವ ಯಾರೇ ಆಗಲಿ ಇಂತಹ ಭಾರತದೊಳಗಿನ ಭಾಷಾ ವಿಷಯದಲ್ಲಿ ಇಂತಹ ದ್ವೇಷ ಸಾಧಿಸುತ್ತಿರಲೇ ಇಲ್ಲ, ಸೊಲ್ಲಾಪುರ ಅಕ್ಕಲಕೋಟೆ ಜತ್ತ ಇಲ್ಲಿಯ ಕನ್ನಡಿಗರೂ ಈಗ ಮಹರಾಷ್ಟ್ರದಲ್ಲಿ ಶಾಂತಿಯುತವಾಗಿ ಬಾಳುತ್ತಿಲ್ಲವೇ? ಬೆಳಗಾವಿಯ ಮರಾಠಿಗರಂತೆ ಅವರು ಹೀನ ಪರಕೀಯ ಭಾವನೆ ತೋರಿಸುತ್ತಿದ್ದಾರೆಯೇ? ಕರ್ನಾಟಕದ ಮುಖ್ಯಮಂತ್ರಿಗಳು ಈ ಸೊಲ್ಲಾಪುರದ ಕನ್ನಡಿಗರನ್ನು ಮಹಾರಾಷ್ಟ್ರದ ವಿರುದ್ಧ ಪ್ರಚೋದಿಸುವ ನೀಚ ಕೆಲಸ ಎಂದಾದರೂ ಮಾಡಿದ್ದಾರೆಯೇ? ನಿಜವಾದ ದೇಶಭಕ್ತಿ ರಾಷ್ಟ್ರಪ್ರೇಮ ಇರುವ ಮುಖ್ಯಮಂತ್ರಿ ಭಾರತದೊಳಗೆಯೇ ನೆರೆಯ ರಾಜ್ಯದೊಂದಿಗೆ ಭಾಷೆಯ ಸಂಕುಚಿತ ಬುದ್ಧಿ ತೋರಿಸಿ ಕಾಲು ಕೆದರಿ ಜಗಳಾಡುವುದಿಲ್ಲ. ಆದರೆ ಫಡ್ನವೀಸ್ ಮಾತ್ರ ಬೆಳಗಾವಿ ಪಾಕಿಸ್ತಾನಕ್ಕೆ ಹೋಗಿದೆಯೋ ಎಂಬ ರೀತಿಯಲ್ಲಿ ವರ್ತಿಸುತ್ತಿದ್ದಾನೆ. ವಿಚಿತ್ರವೆಂದರೆ ಫಡ್ನವೀಸನ ಆಡಳಿತದಲ್ಲಿ ಪಾಲುದಾರರಾಗಿರುವ ಶಿವಸೇನೆಯವರು ಎಂದೂ ಭಾರತ್ ಮಾತಾ ಕಿ ಜೈ ಅನ್ನುವುದೇ ಇಲ್ಲ, ಅವರು ಯಾವಾಗಲೂ ಹೇಳುವುದು ಜೈ ಮಹಾರಾಷ್ಟ್ರ - ಜೈ ಹಿಂದ್ ಅಥವಾ ಜೈ ಭಾರತ್ ಎಂಬುದಾಗಿ ಮಾತ್ರ. ಇದೇ ಮರಾಠಿಗರು ಮೊದಲು ದಕ್ಷಿಣ ಭಾರತೀಯರು ಮಹಾರಾಷ್ಟ್ರದಲ್ಲಿ ಇರಬಾರದೆಂದು ಉಡುಪಿ ಹೋಟೆಲುಗಳನ್ನು ಒಡೆದು ಹಾಕಿದರು. ನಂತರ ಬಿಹಾರಿಗಳು ಇರಬಾರದು ಎಂದು ಗಲಾಟೆ ಎಬ್ಬಿಸಿದರು. ನಂತರ ಮಾಲೆಗಾವ್‌ನಿಂದ ಮುಸ್ಲಿಮರನ್ನು ಓಡಿಸಲು ನೋಡಿದರು. ಕೊನೆಗೆ ಈಗ ಭಾರತ್ ಮಾತಾ ಕಿ ಜೈ ಅನ್ನದವರನ್ನು ಹೊರದೂಡುತ್ತಾರಂತೆ. ಸಂಕುಚಿತ ಬುದ್ಧಿಯವರಿಗೆ ಎಷ್ಟೊಂದು ವಿಧದ ನೀಚ ಮುಖಗಳಿವೆ ನೋಡಿ.

ಪ್ರಸಿದ್ಧ ಬ್ರಿಟಿಷ್ ಲೇಖಕ ಸ್ಯಾಮ್ಯುಯೆಲ್ ಜಾನ್ಸನ್ 1765 ರಲ್ಲಿಯೇ ಹೇಳಿದ್ದೇನೆಂದರೆ "ಅಪಾಧಭೂತಿಗಳ ಮತ್ತು ಫಟಿಂಗರ ಕೊನೆಯ ಆಶ್ರಯವೇ (ಸ್ಯೂಡೋ) ರಾಷ್ಟ್ರಪ್ರೇಮ!" ಈಗ 250 ವರ್ಷಗಳ ನಂತರ ನಮ್ಮ ದೇಶದಲ್ಲಿ ಅವನ ನಾಣ್ನುಡಿ ನಿಜವಾಗುತ್ತಿದೆ

- ಪ್ರವೀಣ್ ಎಸ್. ಶೆಟ್ಟಿ ಮಂಗಳೂರು

ಪುಸ್ತಕ ವಿಮರ್ಶೆ

ಅರ್ಧನಾರೀಶ್ವರ


'ಅರ್ಧನಾರೀಶ್ವರ'. ಇದು ಪೆರುಮಾಳ್ ಮುರುಗನ್ ಎಂಬ ತಮಿಳ್ ಲೇಖಕರ ಕಾದಂಬರಿ. ತಮಿಳು ಜಗತ್ತು ಇದನ್ನು ತನ್ನ ಸಂಸ್ಕೃತಿಯ ಭಾಗವಾಗಿ ಸ್ವೀಕರಿಸಿತ್ತು. ಅದು ಪೆಂಗ್ವಿನ್ ಪ್ರಕಾಶನ ಮೂಲಕ ಇಂಗ್ಲಿಷಿಗೆ ಬಂದ ತಕ್ಷಣ ಹಳ್ಳಿಯ ಮಾನ ದಿಲ್ಲಿಯಲ್ಲಿ ಬಯಲಾದಂತೆ ದಿಲ್ಲಿಯ ಮಾನ ಪಶ್ಚಿಮ ಜಗತ್ತಿನಲ್ಲೆಲ್ಲಾ ಇಂಗ್ಲಿಷಿನ ಮೂಲಕ ಬೆತ್ತಲಾಯಿತೆಂದು ಹಿಂದೂ ಜಗತ್ತು ಬೆಚ್ಚಿಬೀಳುತ್ತದೆ. ಮೊಬೈಲ್ ತಂತ್ರಜ್ಞಾನ ಇಂಟರ್‌ನೆಟ್ ಅಂಧಾಭಿಮಾನ ಲೇಖಕನ ಮೇಲೆ ಧರ್ಮವನ್ನು ಮುಂದೊಡ್ಡಿ ಮುಗಿಬೀಳುತ್ತದೆ. 'ಲೇಖಕ ಸತ್ತನೆಂದು' ಬದುಕಿರುವ ಲೇಖನಿ ಹಿಡಿದ ಮನುಷ್ಯ ಘೋಷಿಸಿಕೊಳ್ಳುತ್ತಾನೆ. ಇದು ವಿದ್ಯೆಯ ಅಭಿವೃದ್ಧಿಯ ಜಗತ್ತು ಸ್ಪಂದಿಸಿದ ಬಗೆ.

ಹಾಗಾದರೆ ಅಂತಹುದು ಏನಿರಬಹುದೆಂದು ಈ ಪುಸ್ತಕವನ್ನು ಲಂಕೇಶ್ ಪ್ರಕಾಶನ ಮೂಲಕ ಬಂದಾಗ ಓದಿದರೆ ಕನ್ನಡ ಭಾಷೆಗೆ ಅದು ಏನೂ ಅನಿಸದೆ ಒಂದು ಸಾಂಸ್ಕೃತಿಕ ಹಿನ್ನೆಲೆಯ ಸಾಮಾಜಿಕ ಕಾದಂಬರಿಯಾಗಿ ಕಂಡಿತು. ಅದು ಈ ದೇಶದ ಮಹಾಭಾರತ ರಾಮಾಯಣಗಳಲ್ಲಿನ ಉದುರಿದ ಬೀಜದಂತೆ ಕಂಡಿತು. ಹೌದು ಈ ಜಗತ್ತು ಮಾತೃ ಮೂಲಜಗತ್ತು. ಪಿತೃ ಮೂಲಕ್ಕೆ ಸರಿದಾಗ ಆಳ್ವಿಕೆ ಪ್ರಾರಂಭವಾಗುತ್ತದೆ. ಅದು ಆಸ್ತಿಯ ಮೇಲಿನ ಆಳ್ವಿಕೆ. ಹೆಣ್ಣು ಕೂಡ ಒಂದು ಆಸ್ತಿಯಾಗಿ ಪರಿವರ್ತಿತವಾದ ಕೌಟುಂಬಿಕ ಸ್ತರ. ಕುಟುಂಬ ಎಂಬುದು ಜಗತ್ತಿನಲ್ಲಿ ಶಿವೆ ಪ್ರಧಾನದ್ದು. ಶಿವೆ-ಶಿವನನ್ನು ಅದ್ವಯ ಮಾಡಿಕೊಂಡ ವಿಧಾನವೇ ಅರ್ಧನಾರೀಶ್ವರ ವಿಧಾನ. ಎಲ್ಲಮ್ಮ ಚಾಮುಂಡಿ ಈ ಎಲ್ಲಾ ಬಗೆಗಳು ಈ ಬಗೆಯವು. ಅವು ಲಕ್ಷ್ಮಿಯಾಗಿ ಪಾರ್ವತಿಯಾಗಿ ಬದಲಾದಂತೆ ಪುರಾಣೀಕೃತ ವಿಧಾನವೇ ಪಿತೃ ಪ್ರಧಾನ ರೀತಿಗಳು.

ಕೃತಿಯ ಮುನ್ನುಡಿಯ ಆಶಾದೇವಿ ಮಾತಿನಂತೆ 'ದಾಂಪತ್ಯವೊಂದು ಏರಬಹುದಾದ ಸಿದ್ಧಿಸಿಕೊಳ್ಳಬಹುದಾದ ಆತ್ಯಂತಿಕ ನೆಲೆಯೆಂದರೆ ಅರ್ಧನಾರೀಶ್ವರ ಸ್ಥಿತಿ. ಇದೊಂದು ರೂಪಕವೂ ಹೌದು. ಆದರ್ಶವೂ ಹೌದು. ಆದರೆ ಈ ದಾರಿಯಲ್ಲಿ ನಡೆಯುವುದೆಂದರೆ ಅದು ಹೋಗುತ್ತಾ ಕೊಯ್ಯುವ ಬರುತ್ತ ಕೊಯ್ಯುವ ಗರಗಸದಂತೆ' ಎಂಬುದು ಈ ಕೃತಿಗೆ ಸರಿಯಾಗಿ ಒಪ್ಪುತ್ತದೆ. ಈ ಕೃತಿಯಲ್ಲಿ ಮಕ್ಕಳಿಲ್ಲದ ದಂಪತಿಗಳು ತೊಳಲಾಡುವ ಸ್ಥಿತಿ ಸಮಾಜವು ಬಂಜೆಯನ್ನು ನಡೆಸಿಕೊಳ್ಳುವ ರೀತಿ, ಆಕೆಯನ್ನು ಪುನಃ ಮಾತೃ ನೆಲೆಗೆ ಕೊಂಡೊಯ್ಯುವಾಗ ಪುರಾತನ ಪಳೆಯುಳಿಕೆಯ ಸಂಸ್ಕೃತಿ ವಿಧಾನಗಳಿಗೆ ಒಪ್ಪಿಸುವಾಗ ಅರ್ಧನಾರಿ ಸ್ಥಿತಿಯ ಪ್ರೇಮ ದಂಪತಿಗಳು ತೊಳಲಾಡುವ ಸ್ಥಿತಿಯೇ ಈ ಕಾದಂಬರಿ ವಸ್ತು.

ಇದರಲ್ಲಿ ಹಿಂದೂ ಬಲಪಂಥೀಯರಿಗೆ ಅದು ಹೇಗೆ ತನ್ನ ಸಂಸ್ಕೃತಿಗೊದಗಿದ ಅಪಮಾನವಾಗಿ ಕಂಡುಬಿಟ್ಟಿದೆಯೋ ತಿಳಿಯುವುದಿಲ್ಲ. ಕುಂತಿಯನ್ನು ಕಂಡಕಂಡವರಿಗೆಲ್ಲಾ ಒಪ್ಪಿಸುವಾಗ, ಕುರು ಮನೆತನವನ್ನು ನಿಯೋಗ ಪದ್ಧತಿಗೆ ಒಪ್ಪಿಸುವಾಗ, ದಶರಥನ ಹೆಂಡಿರನ್ನೆಲ್ಲಾ ಕೂರಿಸಿ ಋಷಿ ನೀಡುವ ಪಾಯಸಕ್ಕೆ ರುಚಿ ತೋರಿಸುವಾಗ ಇದನ್ನೆಲ್ಲಾ ಒಪ್ಪಿಕೊಂಡಿರುವ ಭರತಖಂಡದ ಪ್ರಜೆಗಳು ಪೆರುಮಾಳ್ ಮುರುಗನ್ ಬರೆದ ಇದರ ಕತೆ ಅವಮಾನ ತರಿಸಿದ ರೀತಿ ಕ್ಷುಲ್ಲಕವಾದದು.

ಈ ಕಾದಂಬರಿಯಲ್ಲಿ ಕೌಟುಂಬಿಕ ಪಯಣವು ಏಕ ಪತಿ, ಏಕಪತ್ನಿ ಸ್ವರೂಪಕ್ಕೆ ಬಂದು ನಿಂತಿರುವ ಕಾಲ ಸೂಚಿಸುತ್ತಿದೆ. ತೆಕ್ಕೆಹಕ್ಕಿಗಳಂತೆ ಅವರು ಹೂವರಸಿ ಮರದಡಿ ಪ್ರೇಮದ ಸಂಸಾರ ಮಾಡುತ್ತಿದ್ದಾರೆ. ಆದರೆ ಆ ಮರ ಹೂಬಿಡುವಂತೆ, ಕಾಯಾಗುವಂತೆ ಫಲನೀಡುವಂತೆ ಆಕೆಯ ಹೊಟ್ಟೆಯೊಳಗೆ ಗರ್ಭ ಮೂಡುತ್ತಿಲ್ಲ. ಈ ಕಾದಂಬರಿಯನ್ನು ವಿರೋಧಿಸಿದ ಸಮಾಜವೂ ಕೂಡ ಏಕಪಕ್ಷೀಯವಾಗಿ ಹೆಣ್ಣನ್ನು ಶೋಷಿಸುವ ಸಾಮಾಜಿಕ ಸಂರಚನೆಯ ಕ್ರೌರ್ಯ ಸಮಾಜ. ಬಾಳೆಲೆಯ ಹಾಸುಂಡು ಬೀಸಿ ಒಗೆಯುವ ಗಂಡು ಸಮಾಜವು ಬಂಜೆ ಎಂದಾಕ್ಷಣ ಕಠಿಣ ಪರೀಕ್ಷೆಗೆ ಒಡ್ಡುತ್ತಿದೆ. ವೃಕ್ಷದಲ್ಲಿ ಒಸರುವ ಹಾಲು ಹಾಗೂ ವಕ್ಷದಲ್ಲಿ ಒಸರುವ ಹಾಲು ಪ್ರಕೃತಿಯ ಸಹಜ ಸ್ವರೂಪ. ಹಾಗಾಗಿಯೇ ಫಲವಂತಿಕೆಗೆ ಆದಿ ಸಮಾಜದಲ್ಲಿ ಪ್ರಥಮ ಪ್ರಾಶಸ್ತ್ಯ. ನಾಗ ಸಂಪ್ರದಾಯ, ಅದಿತಿ ಸಂಪ್ರದಾಯ ಈ ಮೂಲ ಚೂರುಗಳನ್ನಿಟ್ಟುಕೊಂಡು ಕನ್ನಡದ ಪ್ರಖ್ಯಾತ ಸಂಸ್ಕೃತಿ ಚಿಂತಕರಾದ ಶಂಬಾ ಜೋಷಿಯವರು 'ಸರ್ಪರಾಜ್ಞಿಸೂರ್ಯೋವಾಃ' ಎಂಬ ಋಗ್ವೇದ ಸೂತ್ರವನ್ನು ಒಡ್ಡಿಕೊಂಡು ಬೃಹತ್ ಗ್ರಂಥ ರಚಿಸಿದರು. ಅದೇ ಈ ಕಾದಂಬರಿಯ ವಸ್ತು ಹೂರಣದಂತೆ ಕಾಣುತ್ತದೆ. ವಸ್ತು ಬಹು ಸರಳವಾಗಿದೆ. ಸಾಂಸ್ಕೃತಿಕವಾಗಿ ಕ್ಲಿಷ್ಟ ಸ್ವರೂಪದಿಂದ ಕೂಡಿದೆ. ವಸ್ತು ಸರಳಪ್ರೇಮ ಮಾಧುರ್ಯದಲ್ಲಿದೆ. ಆದರೆ ಮಾನಸಿಕವಾಗಿ ಕರುಳು ಚಿವುಚುವಷ್ಟು ನುಲಿದುಕೊಂಡಿದೆ. ಕಥಾನಾಯಕ ಆಕೆಯೇ ನನ್ನ ಸರ್ವಸ್ವವೆಂದು ಪ್ರೀತಿಸುತ್ತಿದ್ದಾನೆ. ಮಕ್ಕಳಿಲ್ಲದಿದ್ದರೇನಂತೆ ನಾವೇನು ರಾಜ್ಯವಾಳಬೇಕೆ? ಎನ್ನುತ್ತಿದ್ದಾನೆ. ಆದರೆ ಆತನ ತಾಯಿಯೂ ಅತ್ತೆಯೂ ಯಾರೂ ಇವನ ಪ್ರೇಮಕಾಮವನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಆತನನ್ನು ನಿಧಾನಕ್ಕೆ ಆತನ ಹೆಂಡತಿ ಪೊನ್ನಳಿಂದ ದೂರವಾಗಿಸುತ್ತಾ ಸಾಂಸ್ಕೃತಿಕ ಲೋಕದೊಳಕ್ಕೆ ಎಳೆದುಕೊಳ್ಳುತ್ತಿದ್ದಾರೆ. ಆಕೆಯಾದರೋ ತನ್ನ ಗಂಡನ ಕುರಿತು 'ನೀನು ಹೋಗೆಂದರೆ ಹೋಗುತ್ತೇನೆ ಎನ್ನುತ್ತಿದ್ದಾಳೆ'. ಅವಳು ಹೋಗಲು ಹೊರಟಿರುವ ಜಾಗ ಮಕ್ಕಳಿಲ್ಲದ ಹೆಣ್ಣಿಗೆ ಮಕ್ಕಳು ನೀಡುವ ದೇವರಸನ್ನಿಧಿ. ಇದನ್ನು ನಂಜನಗೂಡಿನಲ್ಲಿ 'ತಿಕ್ಕಡಿ ಸೇವೆ' ಅಂದರೆ ರಥದ ಅಡಿ ಮಲಗುವ ಸೇವೆ



ಎಂದು ಕರೆಯುತ್ತಿದ್ದರು. ತಿಪಟೂರು, ಹೊಸವಳ್ಳಿ ಬಳಿ ಮುನಿಯಪ್ಪನ ಆಲದ ಮರದಡಿ ನಡೆಯುವ 'ಮುನಿಯಪ್ಪನ ಸೇವೆ' ಎಂದು ಕೂಡ ಎನ್ನುವರು. ಮಾಗಡಿ ಬಳಿ ತಿರುಮಲೆ ಎಂಬಲ್ಲಿ ಇದೇ ಸೇವೆ ವಿಚಾರಗಳು ಇವೆ. ಅಷ್ಟೇಕೆ ನಮ್ಮ ನಿಮ್ಮ ಊರ ಬಳಿ ನಡೆಯುವ ಸಾಮೂಹಿಕ ಜಾತ್ರೆಗಳು ಹೀಗೆ ಸಂಸಾರದ ಬಂಧನಗಳನ್ನು ಬಿಡಿಸಿಕೊಂಡು 'ಭಗ'ವಂತನ ಸನ್ನಿಧಿಯಲ್ಲಿ ಕುಟುಂಬದ ಏಳಿಗೆಗಳನ್ನು ಕಂಡುಕೊಂಡ ಬಗೆಗಳಾಗಿ ಕಂಡುಬಿಡುತ್ತವೆ. ಇಂಥವು ಕೆಲವೊಮ್ಮೆ ಮುಚ್ಚುಮರೆಯಲ್ಲಿರಬೇಕೆಂಬುದು ಈ ಸಮಾಜದ ಕಟ್ಟುಪಾಡು. ಕುಂತಿಗೆ, ಅಹಲ್ಯೆಗೆ, ಸತ್ಯವತಿಗೆ, ಅಂಬಾಲೆ ಅಂಬಿಕೆಯರಿಗೆಲ್ಲಾ ಪುರಾಣ ಕವಚ ತೊಡಿಸಿದ ಸಮಾಜವು ಕಾದಂಬರಿಯಲ್ಲಿ ಒಂದು ಕುಟುಂಬದ ತೊಳಲಾಟಕ್ಕೆ ವಿಚಾರವನ್ನು ತೊಡಿಸಿ ನೋಡಿದಾಗ ಇದೊಂದು ಸಾಂಸ್ಕೃತಿಕ ಚರಿತ್ರೆಯೆಂದು ಸ್ವೀಕರಿಸುವಷ್ಟು ತಾಳ್ಮೆ ಈ ದೇಶಕ್ಕಿಲ್ಲ. ಇದು ವಾಕ್ ಸ್ವಾತಂತ್ರವನ್ನು ಹತ್ತಿಕ್ಕುತ್ತಿರುವ ಈಗಿನ ಎಲ್ಲಾ ವಿಶ್ವವಿದ್ಯಾಲಯ ವಿಚಾರಗಳ ಕಥನಗಳ ಸರಮಾಲೆಯಂತೆ ಕಾಣುತ್ತಿದೆಯಲ್ಲವೆ!


'A fruitful woman makes plants fruitfull, a barren women makes them barren' ಎಂಬ ದೇವಿಪ್ರಸಾದರ 'ಲೋಕಯುತ' ಗ್ರಂಥ ಚಿಂತನೆಯಂತೆ ಈ ಕಾದಂಬರಿ ಕಾಣುತ್ತದೆ. ಅಂದಿನ ಸಮಾಜ ಮುಟ್ಟು ನಿಲ್ಲದ ಹೆಣ್ಣನ್ನು ಅಪರಾಧ ಸ್ಥಾನದಲ್ಲಿ ನಿಲ್ಲಿಸುತ್ತಿತ್ತು, ಈಗಲೂ ಅದು ಬದಲಾಗಿಲ್ಲ, ಇಂದು ಸಹ ಕೆಲವು ದೇವಸ್ಥಾನಗಳಿಗೆ ಹೆಣ್ಣಿನ ಪ್ರವೇಶವಿಲ್ಲ, ಆಕೆ ಮುಟ್ಟಾದಾಗ ಹೂಗಿಡ ಮುಟ್ಟಬಾರದು ಹೂ ಕುಯ್ಯಬಾರದೆಂಬ ನಂಬಿಕೆಯೂ ಇದೆ. ಈ ಮೌಢ್ಯವು ಕಾಡು ಗೊಲ್ಲರ ಸಮಾಜದಲ್ಲಿರುವ ಮುಟ್ಟು ವಿಚಾರದಲ್ಲಂತೂ ನಮ್ಮ ರಾಜ್ಯದಲ್ಲಿ ಬಹುಕಡೆ ಇಂದೂ ಜಾರಿಯಲ್ಲಿದೆ. ಇಂಥಾದನ್ನು ತಿಳಿಹೇಳುವ ರೀತಿನೀತಿಗಳು ಹಿಂದೂ ಧರ್ಮಾಂಧರಿಗಿಲ್ಲ. ಅದೊಂದು ನಂಬಿಕೆಯೆಂದು ಈ ನಂಬಿಕೆಯನ್ನು ಡಿಕೋಡ್ ಮಾಡಕೂಡದೆಂದು 'ಅರ್ಧನಾರೀಶ್ವರ' ಕಾದಂಬರಿಯಂತೆ ನಿರ್ಬಂಧಿಸಲು ಹೊರಡುತ್ತವೆ. ತಂತ್ರಪದ್ಧತಿಯಲ್ಲಿ ಕೌಲ ಮಿಶ್ರ ಮತ್ತು ಸಮಯಗಳೆಂಬ ಪಂಥಗಳಿವೆ. ಯಾಜ್ಞಿಕ ಮೂಲದಲ್ಲಿ ಮಧು, ಸೋಮ, ಹಾಲು, ಕಳ್ಳು ಇವೆಲ್ಲವೂ ಈ Totem ಮೂಲದವೇ ಆಗಿವೆ. ವ್ರತ ಎಂಬ ವಿಚಾರವಂತೂ ಇದೆಲ್ಲವನ್ನು ಹೊತ್ತು ತಂದ ಮೌಢ್ಯ ಮೂಟೆಯೇ ಆಗಿದೆ. ಅರಳಿಮರ ಅತ್ತಿಮರ ಸುತ್ತುತ್ತ ದೇವಸ್ಥಾನ ಪ್ರದಕ್ಷಿಣೆ ಮಾಡುವುದಂತೂ ಈ ಬಂಜೆತನ ಕಳೆದುಕೊಳ್ಳುವ ಎಲ್ಲ ಸಂಸಾರದ ಮೌಢ್ಯಗಳೇ ಆಗಿರುವಾಗ ಈ ಕಾದಂಬರಿಗೇಕೆ ನಿರ್ಬಂಧ ಎಂಬ ಪ್ರಶ್ನೆ ಕಾಡುತ್ತದೆ. ಈ ಚಲಿಸುವ ಒಂದು ಚಲನೆಯಲ್ಲಿ ಇದೇ ಸಮಾಜವು ಬಯಸುವ ಫಲವಂತಿಕೆಯ ಗೌಡಿಕೆಯ ಆಶಾಮೂಲಗಳಿವೆ.

ಬಂಜೆ ಎಂಬ ಶಬ್ದ ಕಳೆದುಕೊಳ್ಳಲು ಹಕ್ಕಿಪಕ್ಷಿಗಳಾದಿ ಯಾಗಿ ಪುರಾಣದ ಪಾತ್ರಗಳಾದಿಯಾಗಿ ಹಿಮಾಲಯದಿಂದ ಕನ್ಯಾಕುಮಾರಿವರೆಗೆ ಪರದೆ ಮರೆಯಲ್ಲಿ ದಾರಿ ಕಂಡುಕೊಂಡಿ ರುವುದು ಕಾಣುತ್ತದೆ. ಅದು ಮನಾಲಿ ಹಿಡಿಂಬಾಸುರನ ಪೂಜಿಸುವ ಮರವಿರಬಹುದು, ಗುಡಿಯ ಮುಂದಿನ ಕಲ್ಲಿರಬಹುದು, ಋಷಿಯೊಬ್ಬ ತಪಸ್ಸು ಮಾಡಿಹೋದ ಜಾಗವಿರಬಹುದು ಎಲ್ಲವೂ ಇಂಥಾ ಬೀಜ ಹುಡುಕುವ ದಾರಿಗಳೇ ಹೌದು.

ಥಾರ್ ಮರುಭೂಮಿಯ 'ಪುಷ್ಕರಣೀ' ಎಂಬ ವಿವಾಹ ಸಂಪ್ರದಾಯದಲ್ಲಿ ವರನ ಎದೆಯ ಸುತ್ತಳತೆಯನ್ನು ಅತ್ತೆ ಅಳೆದುನೋಡುತ್ತಾಳೆ. ಟ್ರೋಬ್ರಿಯಾಂಡ್ ದ್ವೀಪವಾಸಿಗಳಲ್ಲಿ ಅತ್ತೆ ತನ್ನ ಕ್ಷೇತ್ರವನ್ನೆ ಭಾವಿ ಅಳಿಯನಿಗೊಡ್ಡಿ ಲೈಂಗಿಕ ಕ್ರೀಡೆ ಕಲಿಸುತ್ತಾಳೆ. ನಮ್ಮ ನಿಮ್ಮ ಊರುಗಳಲ್ಲಿ ನಾಗರಪಂಚಮಿ ಹಬ್ಬದ ವಿಚಾರಗಳು, ಇಂಥವನ್ನು ಮುಗುಂ ಆಗಿ ಐಕ್ಯಗೊಳಿಸಿಟ್ಟುಕೊಂಡಿವೆ. ಹೆಣ್ಣು ಉಪವಾಸವಿದ್ದು ಅಂದು 'ಬರಿಮೈಲಿ ತನಿ ಆರೆವ' ಸಾಂಸ್ಕೃತಿಕ ಕಥನ ವಿಚಾರಕ್ಕೆ ಈಗ ಮಡಿಬಟ್ಟೆ ಸುತ್ತಿಕೊಂಡಿದೆ. ಇಷ್ಟಿದ್ದರೂ ಪೆರುಮಾಳ್ ಕಾದಂಬರಿ ಎಲ್ಲೂ ಇಂಥ ಯಾವ ಲೈಂಗಿಕ ಹಿಮ್ಮುಖ ಗಳನ್ನು ಪ್ರದರ್ಶಿಸದೆ ವರ್ತಮಾನದ ಕೌಟುಂಬಿಕ ಮಾದರಿಯಲ್ಲಿ ಬಂಜೆ ಎಂಬ ಶಬುದವ ತೀರಿಸಲು ಹೊರಡಿಸುತ್ತದೆ ಎಂಬುದು ಮುಖ್ಯ.

ಕಥಾನಾಯಕ ಕಾಳಿ ಕೌಂಡರ್ ಹುಡುಗ. ಆ ಮನೆತನಕ್ಕೆ ಕರ್ಮದ ನಂಬಿಕೆಗಳ ಭಯವಿದೆ. ಅದಕ್ಕಾಗಿಯೇ ಮಕ್ಕಳಾಗಿಲ್ಲ ಎಂಬ 'ಕರ್ಮದಪಾಂಗು' ಕೆಲಸ ಮಾಡುತ್ತಿದೆ. ಕಾಡೊಳಗೆ ಕುರಿ ಮೇಯಿಸುವಾಗ ಅಳುತ್ತ ಕುಳಿತಿದ್ದ ಅರೆಬೆತ್ತಲೆ ಎಳೆಮೊಲೆಯ ಹುಡುಗಿಯನ್ನು ಕಾಳಿಯ ಮೂಲಪುರುಷರಲ್ಲೊಬ್ಬರು ಕೆಡಿಸಿದ್ದಾರೆ. ಆಕೆಯ ಶಾಪ ತಗುಲಿರಬಹುದಾದ ಭಯ ಈಗ ಕಾಳಿಗಿದೆ. ಈ ಕರ್ಮವೇ ಪೊನ್ನಳಿಗೆ ಇಂದು ಕಾರಣವಾಗಿರಬಹುದೆಂಬ ನಂಬಿಕೆಯಿದೆ. ತಿರುಚ್ಚೆಂಗೋಡು ಬೆಟ್ಟದ್ ಪಾವತ್ತಾ ಈ ತಪ್ಪಿಗೆ ಕಾಣಿಕೆ ಪಡೆಯುತ್ತಿದ್ದಾನೆ. ಈ ನಡುವೆ ಕಾಳಿ ತಾತ ಪಡೈಪ್ಪನ್ ದೊಡ್ಡತೆಪ್ಪದ ಕೊಳದ ದಂಡೆಯಲ್ಲಿ ಕಲ್ಲೆಸೆಯುವ ಸ್ಪರ್ಧೆಯಲ್ಲಿ ಬ್ರಿಟಿಷ್ ದೊರೆಯ ಕಣ್ಣಿಗೆ ಮಣ್ಣೆರಚಿ ಬಹುಮಾನ ಪಡೆದಿರುತ್ತಾನೆ. ಆಗ ಬಂದ ಬಹುಮಾನ ಹತ್ತು ರೂಪಾಯಿ. ಅದು ತೊಂಡು ದೊಡ್ಡಿಯ ಭೂಮಿ ಕೊಂಡ ದುಡ್ಡು. ಇದು ತುಸು ಲಗಾನ್ ಸಿನಿಮಾ ನೆನಪಿಸಿದರೂ ಬದುಕಿನಲ್ಲಿ ಮೋಸದಿಂದ ಗೆಲ್ಲುವ ರೀತಿಯ ಕರ್ಮ ತನಗೆ ಮಕ್ಕಳಾಗಿಲ್ಲವೆಂಬ ಪಾಂಗಿಗೆ ನೂಕುತ್ತಿದೆ. ಹೀಗೆ ಬದುಕಿನಲ್ಲಿ ಬಾಳು ನಡೆಸುವ ಸತ್ಯಾಸತ್ಯತೆಗಳ ಪ್ರಜ್ಞೆ ಸಹ ಮಕ್ಕಳಾಗದ ರೀತಿಗೆ ಒರೆ ಹಚ್ಚಿವೆ. ಇಲ್ಲಿನ ಅರ್ಧನಾರೀಶ್ವರನೇ ಪಾವಾತ್ತಾ ತಮ್ಮ. ಈಶ್ವರಾ ಅಂಬಾಳೊಂದಿಗೆ ಸೇರಿ ಅರ್ಧನಾರೀಶ್ವರನಾಗಿ ಇಲ್ಲಿ ನಿಂತಿದ್ದಾನೆ. ಇಲ್ಲಿ ಅಪ್ಪನೂ, ಅಮ್ಮೆಯೂ ಅವನೇ. ಅವನೇ ಅಮ್ಮೈಯಪ್ಪನ್. ಇಲ್ಲಿ ಪುರಾಣ ಅದ್ವಯ ಸ್ವರೂಪ ಶಿವೆಶಿವರು. ಈ ಸಮಾಜದಲ್ಲಿನ ಶೈವ ಸಮಾಜದ ಆದಿ ಸ್ವರೂಪಗಳನ್ನು ಹೇಳುತ್ತಾ ಜಗತ್ತಿನ ನೆಲಪುರಾ... ಸೂಚಿಸುತ್ತಿದ್ದಾರೆ. ಇಲ್ಲಿ ಕಾಳಿ ಮತ್ತು ಪೊನ್ನ ಕೂ... ಬದುಕು ಬಾಳುತ್ತಿದ್ದರೂ ಪ್ರಕೃತಿಯ ಫಲದ ಪ... ವಂಚಿತರಾಗುತ್ತಿದ್ದಾರೆ. ಆಕೆಯು ಸಾಕಿದ ಕಡಸು ವಿ... ಬಾರಿ ಹಡೆದರೂ ಇವಳಿಗೆ ಮಾತ್ರ ಫಲವಿಲ್ಲ... ಸಂಬಂಧವಾಗಿ ಮುರುಗನಿಗೆ ಎಣ್ಣೆ ಅಭಿಷೇಕವಾ... ಏನೂ ಕೆಲಸ ಮಾಡುತ್ತಿಲ್ಲ. 'ಮುಟ್ಟಾದರೆ ಸಾವಿನ ಮ... ಸರಿ', (ಪು 29) ಎಂದು ತಿಂಗಳು ತಿಂಗಳು ದಂಪ... ನೊಂದುಹೋಗುತ್ತಿದ್ದಾರೆ. ತಂದೆತಾಯಿಗಳು ಕೊರಗುತ್ತಿ... ನೆರೆಯ ಸಮಾಜ ಆಡಿಕೊಳ್ಳಲು ದಾರಿ ಮಾಡು... ಕಾಳಿ ಚಿಂತೆ ದಿನೇದಿನೇ ಕಾಡುತ್ತದೆ. ತಮಿಳುನಾಡಿನ ಬ... ನೆಲದಂತೆ ಬದುಕು ಬರಡಾಗಿದೆ. ಇದರ ಪರಿಹಾ... ಎಂಬಂತೆ ಬಿಸಿಲ ಬೇಗೆ ತಾಳದೆ ಬಾವಿಯೊಳಗೆ ಇ... ಹೋಗಿ ಅದರೊಳಗೊಂದು ಕಿರುಬಾವಿಯೊಳಗೆ ಪ... ರೀತಿ ಮಾಡಿದ ಮನೆವೊಳಗೆ ತೂರಿ ಅಲ್ಲಿ ... ಭೂಪದರದಲ್ಲಿ ಮಲಗಿ, ಒಂದು ಬೀಜ ದಪ್ಪವಾದ ಗ... ಮತ್ತೊಂದು ಹೆಣ್ಣು ತ್ವಾಡಗಳ ಗುಡ್ಡೆ ಮಾಂಸದ ... ಮಾಡಿ ಮುತ್ತು ಎಂಬುವನೊಡನೆ ಸಾಯಂಕಾಲ ಹ... ಬರುವನು. ಏನು ವಿಷಯಾಂತರದ ಬದುಕು ಬದಲಿಸಿ... ನೆಮ್ಮದಿಯಿಲ್ಲವಾಗಿದೆ, ಪೊನ್ನಳಿಸಿ ಗರ್ಭ ನಿಲ್ಲಿಸಿಕೊ... ಹಠದಲ್ಲಿ ಎಲ್ಲ ಸೊಪ್ಪುಸೆದ ಕಹಿಸಿಹಿ ನೋವು... ಅಭ್ಯಾಸವಾಗಿ ಹೋಗಿದೆ. ಆ ಔಷಧಿಯನ್ನು ಕೂಡ ... ಸೀರೆಯುಟ್ಟ ಅಜ್ಜಿ ಕೊಡಬಾರದೆಂಬ ಸೂಕ್ಷ್ಮ ಕಾಣುತ್ತ... 'ಬಳಿಸೀರೆಯವಳ ಕೈಯಿಂದ ಕೊಟ್ಟರೆ ಆ ಮಾರವ... ಕೊಟ್ಟಂತೆ' ಎಂಬುದು ನಂಬಿಕೆ. 'ನನ್ನ ಬದ್ಲಾಗಿ ... ಆಡನ್ನ ಮದ್ವೆ ಮಾಡ್ಕೊಂಡಿದ್ರೆ ಇಷ್ಟೊಂದು ಎಲೆ ತಿಂ... ಒಂದು ಕೊಟ್ಟಿಗೆ ತುಂಬಾ ಮರಿನಾರ ಹಾಕಿರೋ... (ಪು 35) ಎಂದು ನೊಂದು ಪೊನ್ನ ನುಡಿಯುತ್ತಿ... 'ಗೋಡೆಗಳ ಮಧ್ಯೆ ಅಡಗಿ ಸಂಭೋಗಿಸುವುದನ್ನು ಅ... ಆಸಕ್ತಿಯೇ ಇರಲಿಲ್ಲ. ಬಟ್ಟಬಯಲು ಬೇಕು ... ಕಾಣಬೇಕು ಯಾವುದಾದರೂ ಹಕ್ಕಿ ಇಣುಕಿ ನೋ... ಹೋದರೆ ಇನ್ನು ಒಳ್ಳೆಯದು' (ಪು 39) ಹೀಗೆಲ್ಲ ಪ್ರಕೃ... ಮಧ್ಯೆ ಪ್ರಾಕೃತಿಯ ಭಾಗವಾಗಿ ಬದುಕುವ ಪ್ರೇಮಿ... ಪ್ರಾಕೃತಿಕವಾಗಿ ಫಲ ನಿಲ್ಲುತ್ತಿಲ್ಲ. ಇದಕ್ಕೆ ಅಲ್ಲಿನ ಸಮಾ... ವೈಜ್ಞಾನಿಕವಾಗಿ ವೀರ್ಯ ಸಂಪತ್ತನ್ನು ಅಳೆಯ... ವರ್ತಮಾನದಲ್ಲಿಲ್ಲ. ಹೆಣ್ಣನ್ನು ಫಲವಾಗಿಸಲಾರದ ಕಾಳಿ... ಪೊನ್ನ ದೂಷಿಸುತ್ತಿಲ್ಲ. ಆದರೆ ಇದಕ್ಕೆ ಸಹಕ... ಕರ್ಮವನ್ನು ಬಗೆದು ನೋಡುತ್ತಿದೆ.

ತಿರುಚ್ಚೆಂಗೋಡಿಗೆ ಹರಕೆ ಹೊರಟದ... ಉಚ್ಚಿಪ್ಪಿಳ್ಳೆಯಾರ್ ಎಂದು ದೇವರ ಹೆಸರು. ಪಾಂಡಿಶ್ವರನ್ ಗುಡಿ ಚಿಕ್ಕ ಮಾಡದಂತೆ ಮೇಲಿರುವ... ಅವನ್ನು ಆತುಕೊಂಡು ಆಳೆತ್ತರದ ಒಂಟಿಕಲ್ಲು ನಿಂತಿರು... ಅದೇ ಬರಡು ಬಂಡೆ! ಇಲ್ಲಿ ಗಂಡಹೆಂಡತಿಯ... ಮಕ್ಕಳಾದರೆ ಸಾಕೆಂದು ಕಠಿಣ ಹರಕೆ ತೀರಿಸುತ್ತಿ... ಇಷ್ಟಾದರೂ ಬರಡು ಬಂಡೆಯೆಂಬ ಆಘಾತವಾಗಬಹುದ... ಶಿಖರ ಆಯಕಟ್ಟಿನ ಸ್ಥಳ ಕುರಿತು 'ಮಾವ ... ನ... ಸುತ್ತೇನೆ. ನಂಗೇನಾದರೂ ಆದ್ರೆನೀ ಚಿಂತೆ ಮಾಡ್ಬೇ... ಇನ್ನೊಬ್ಬಳನ್ನು ಕಟ್ಕೊ ಅವಳ್ಗಾದ್ರೂ ಮಕ್ಕಳಾಗ್ಲಿ' ಎ... ಕಣ್ಣೀರು ಸುರಿಸುತ್ತಾಳೆ. 'ಮಕ್ಕಳಿಲ್ಲದಿದ್ರೆ ಏನು ನಾವ... ಕೋಟೆ ಕಟ್ಟಿ ಆಳ್ಬೇಕಾಗಿದ್ಯಾ?' (ಪು 41) ಎಂದು ಗ... ಸಮಾಧಾನಪಡಿಸುತ್ತಿದ್ದಾನೆ. ಈ ಮಾತುಗಳು ಇಂಥಾ ... ಸಮಾಜದಲ್ಲೂ ಪ್ರೀತಿಯೆಂಬ ತಂಪು ಹೆಣ್ಣಿಗಿದೆ ... ಸಮಾಧಾನವಿದೆ. ಶತಾಗತಾಯ ಬರಡನ್ನು ಬಿಡಿಸ... ಅತ್ತೆಯಾಗಲೀ ತಾಯಿಯಾಗಲೀ ಗಟ್ಟಿಯಾಗಿ ನಿ... ಬಿಟ್ಟಿದ್ದಾರೆ. ಸಮಾಜವು ಅಂತಾ ಒತ್ತಡಕ್ಕೆ ನೂಕಿದೆ. '... ಬ್ರಹ್ಮಚಾರಿಗೇಕೆ ಸಮಪಾಲು' ಎಂಬ ನಲ್ಲುಪ್ಪೈಯ... ಎಂಬ ಚಿಕ್ಕಪ್ಪನ ಕುರಿತ ಮಾತು ಬರುತ್ತದೆ. ಅವ... ಗಟ್ಟಿಗ. 'ನನ್ನ ಪಾಲು ನನಗೆ ಅದೆಲ್ಲ ನಿಮಗೇಕೆ' ಎ... ಎಗರಿ ಬೀಳುತ್ತಾನೆ. 'ಈ ಕೋಪಿನ್‌ದಾಗ್ ಒಟ್ ತ... ಇದಾನಲ್ಲ ಅವ್ನ ಸುಂಕೆ ಮಲಗಿದ್ರೆ ಪರ್ವಾಗಿಲ್ಲ, ಆಗ... ಎದ್ಬಿಟ್ಟಾನೆ, ಹಾಲು ಬೇಕೂಂತ ಗಲಾಟೆ ಮಾಡ... ತಮ್ಮಂದ್ರು ಅವ್ರ ಹೆಂಡ್ರು ಕೊಡ್ತಾರ ಕೇಳ್ ಹೇಳಿ' (... 63) ಎಂದು ಪಂಚಾಯ್ತಿದಾರರಿಗೆ ಹೇಳಿಬಿಡುತ್ತಾನೆ. ಇ... ಸಂಸಾರವೆಂಬ ತಾಪತ್ರಯ ಬೇಡ ಎನ್ನುವ ಎದ್ದಾಡಿ ಗ... ಇವನೇ ಕಾಳಿಗೆ ಮನೋ ಉಯ್ಯಾಟಕ್ಕೆ ನೆರವಿಗೆ ನಿಂತವ... (ಕಾದಂಬರಿಯ ಭಾಷೆ ಗ್ರಾಮೀಣ ಸೊಗಡಿನಿಂದಿ... ಅನುವಾದವೂ ಚೆನ್ನಾಗಿದೆ. ಕೆಲವೊಮ್ಮೆ ಸಂವಿಧ... ನಿರ್ಬಂಧಿತ ಪದಗಳಿಗೆ ಅಂಜಿದಂತೆ ಕಾಣುವುದುಂ...



...: ಹೊಲೆಯರು ಎಂಬುದಕ್ಕೆ ಅಸ್ಪೃಶ್ಯರು ಎಂದು ...ುವುದು).

ಕಾಳಿಗೆ ತನ್ನ ಹೆಂಡತಿಯನ್ನು ಜಾತ್ರೆಗೆ ಕಳುಹಿಸುವಂತೆ ...ಂಬದ ಒತ್ತಡವಿದೆ. ಅಪ್ಪ ಅಮ್ಮ ಒಪ್ಪಿದ್ದಾರೆ. ಸ್ವಲ್ಪ ...ತ ಹಾಕಿದರೆ ಪೊನ್ನ ಒಪ್ಪಿಕೊಳ್ತಾಳೆ ನೀ ಒಲ್ಲೆ ಎನ್ನಬೇಡ ...ು ಒತ್ತಡವಿದೆ. 'ಕಾಳಿ ಮೂಕನಾದನು. ಹದಿನಾಲ್ಕನೆಯ ...ದ ಜಾತ್ರೆಗೆ ಹೀಗೊಂದು ಉದ್ದೇಶವಿರುವುದೆಂದು ...ನಿಗೆ ಈವರೆಗೆ ತಿಳಿದಿರಲಿಲ್ಲ' (ಪು 69). ಅದಲ್ಲದೆ ... ಒಪ್ಕೊಂಡ್ರೇನೆ ನಡ್ಯೋದು. ನಾಳೆ ಕಾಪಾಡೋನು ...' ಎಂಬ ಒತ್ತಡ ಕೂಡ ಸೃಷ್ಟಿಯಾಗಿದೆ. 'ನೀ ಜಾತ್ರೆಗೆ ...ೀಗ್ಬೇಡ ಇಲ್ಲೇ ಇದ್ರೂ ಸರಿ. ಮಾವನ್ ಮನೆತಾವ್ ...್ರೂ ಸರಿ, ಚೆನ್ನಾಗ್ ಯೋಚಿಸಿ ನೋಡು, ನಿನ್ ಕೈಯಾಗೆ ...ಬದ್ಕಿರೋದು ಮಗ' (ಪು 70) ಇದು ಅವನಮ್ಮನ ...ತು. 'ಅಮ್ಮ ನನ್ನನ್ನು ಯಾಕೆ ಇಷ್ಟೊಂದು ಕಷ್ಟಪಟ್ಟು ...ದಳು? ಹೀಗೊಂದು ಅಗ್ನಿಕುಂಡದಲ್ಲಿ ತಳ್ಳಲೇ? (ಅದೇ ...) ಇದು ಮಗನ ಅಳಲು.

ಆ ಜಾತ್ರೆಗೆ ಮದುವೆಯಾಗದ ಹೆಣ್ಣುಗಳನ್ನು ...ಹಿಸುವುದಿಲ್ಲ, ಯುವಕರು ಅಧಿಕವಾಗಿ ಇರುವ ...ದಾಡುವ ಜಾಗ. ಅನೇಕ ಯುವಕರು ಸಂಭೋಗದ ...ದಲ ರುಚಿಯನ್ನು ಅಲ್ಲೇ ಸ್ವಾದಿಸುವರು. ...ಕೊಡುವವರು ಹೆಣ್ಣುಗಳು. ಅಂದಿನ ಜಾತ್ರೆ ದಿನ, ...ನ ದೇವಸ್ಥಾನದ ಎದುರು ಇರುವ ವೇಶ್ಯೆಯರ ರಸ್ತೆಯಲ್ಲಿ ...ವೇ ಇರುವುದಿಲ್ಲ, 'ಈವತ್ತು ನಮ್ಮನ್ನಾರು ನೋಡ್ತಾರೆ, ...್ಲಾ ಹೆಂಗಸ್ರೂ ಈವತ್ ಸೂಳೇರೇ' (ಪು 72). ಇದು ...ನ ವೇಶ್ಯೆಯರ ನಗುವಿನ ಮಾತು.

ಕಾಳಿಗೆ ಇಷ್ಟಾದರೂ ತನ್ನ ಪ್ರಿಯೆ ಈ ಸಂಭೋಗ ಸವಾರಿಗೆ ಒಪ್ಪದಿರಬಹುದು ಎಂಬ ಎಲ್ಲೋ ಆಸೆಯಿತ್ತು. ಆದರೆ ಅವಳು ಒಳಗೊಳಗೆ ಮಗುವಿಗಾಗಿ ಸಮಾಜದ ಬೇಡಿಕೆಗಾಗಿ ಅಮ್ಮ ಅಪ್ಪ ಅತ್ತೆಮಾವಂದಿರ ಸ್ಥಿತಿಗಾಗಿ ತಯಾರಾಗುತ್ತಿದ್ದಾಳೆ. 'ಈ ಹಾಳ್ಮಗೂಗಾಗ್ ನೀನು ಹೋಗಂದ್ರೆ ಹೋಗ್ತಿನಿ' ಎಂದು ಬಿಡುತ್ತಾಳೆ. ಆ ರಾತ್ರಿಯಷ್ಟು ನೀರಸವಾದ ಸಂಭೋಗ ಹಿಂದೆ ಎಂದೂ ಇರಲಿಲ್ಲ (ಪು 80). ಆರತಿಯೊಂದರಲ್ಲಿ 'ನೀ ಆ ಕಡೆ ನಿಲ್ಲು' ಎಂದು ಸೋದರ ಮಾವನ ಹೆಂಡತಿ ಆ ಕಡೆ ತಳ್ಳಿದ ನೋವು ಅವಳಲ್ಲಿ ತಳಮಳಗೊಳಿಸಿದ ಸ್ಥಿತಿಯಾಗಿತ್ತು. ಒಮ್ಮೆ ಬೀಜ ಬಿತ್ತುವಾಗ ಕಾಳಿಯನ್ನು ಸೇರಿಸಿಕೊಳ್ಳದ ವಿಚಾರ ಕಾಡುತ್ತಿತ್ತು, ಬಂಜೆ ಬೀಜ ಬಿತ್ತಿದರೆ ಬೀಜ ಹುಟ್ಟೋದುಂಟೆ? ಎಂಬ ಮಾತು ಕೊರೆಯುತ್ತಿತ್ತು, ಮುಂದಿನ ವರ್ಷದಿಂದ ಜಮೀನಿಗೆ ಬರಲು ನಿರಾಕರಿಸಿದ ವಿಚಾರ ಅವಳದಾಗಿತ್ತು. ಇನ್ನೊಂದರ್ಥದಲ್ಲಿ ಅಮ್ಮ ಬಂದು 'ನಿನ್ನ ಹೆಂಡತಿಯನ್ನು ಮತ್ತೊಬ್ಬನೊಂದಿಗೆ ಮಲಗಲು ಕಳುಹಿಸು' ಎನ್ನುವುದು 'ನೀನು ಹೇಳಿದರೆ ಹೋಗುತ್ತೇನೆ' ಎಂದು ಹೆಂಡತಿಯೇ ಹೇಳುವುದು ಅವನನ್ನು ಕುಟ್ಟಿ ಹುಳುವಂತೆ ಕೊರೆಯಲಾರಂಭಿಸಿತು. ಕಾಳಿ ಹಾಗೂ ಮುತ್ತು ಗೆಳೆಯರು, ಮುತ್ತು ಪೊನ್ನುವಿನ ಅಣ್ಣ, ಹೀಗೆ ಇವೆಲ್ಲವೂ ಕುಟುಂಬದ ಪರಿಧಿಯೊಳಗೆ ನಡೆವಾಗ ಯಾವುದು ಸಾಮಾಜಿಕವಾಗಿ ತಪ್ಪು-ಒಪ್ಪು ಎಂಬುವು ಅಡ್ಡಬರುವುದಿಲ್ಲ, ಮಕ್ಕಳಿಲ್ಲದ ಕಾಳಿ ಪೊನ್ನು ದಂಪತಿಗಳನ್ನು ಸಮಾಜದಲ್ಲಿ ಸ್ಥಾನ ನಿರ್ಮಿಸಿಕೊಳ್ಳಲು ಪ್ರಯತ್ನ ನಡೆಯುತ್ತಿವೆ.

'ದೇವರ ಕಾರ್ಯ, ನನಗೆ ಯಾರು ದೇವರಾಗಿ ಕಾಣುತ್ತಾರೋ ಅವರೊಂದಿಗೆ ಇರುವೆ' (ಪು 99) ಎಂದು ಅವಳ ಅತ್ತೆಯೂ ಹೇಳುತ್ತಿದ್ದಾಳೆ. ಕಾದಂಬರಿಯಲ್ಲಿ ಬದುಕಿನ ಪ್ರಾಕೃತಿಕ ವಿಚಾರಗಳು ತಿಂಡಿತೀರ್ಥಗಳು ಹೆಚ್ಚಾಗಿ ಕಳ್ಳುಬಾಡು ಎದ್ದು ಕಾಣುತ್ತದೆ. ಸೇಲಂ ಜಿಲ್ಲೆಯಲ್ಲಿ ಕಳ್ಳು ಸಾರಾಯಿ ನಿಷೇಧ ಆಜ್ಞೆಗಳು ಬಂದಾಗ ಜನ ತತ್ತರಿಸಿಹೋಗಿದ್ದಾರೆ. ಬಿಳಿಯರು ಮಾಂಸಮಡ್ಡಿ ತಿನ್ನದ ಕಳ್ಳು ಕುಡಿಯದ ಬ್ರಾಹ್ಮಣರಿಗೆ ಅಧಿಕಾರ ಕೊಟ್ಟಿರುವುದೇ ಇದಕ್ಕೆ ಕಾರಣ ಎಂಬಂತಾಗಿದೆ. ಕಾದಂಬರಿ ಕಾಲದೃಷ್ಟಿಯಿಂದ ಸ್ವತಂತ್ರ ಪೂರ್ವದ್ದು. ಆ ಸಮಾಜದಲ್ಲೇನು ಭಾರತದ ಪ್ರಾಚೀನ ಕಾಲದಿಂದಲೂ ಮದ್ಯ ಮಿಥುನ ಮಾಂಸ ಎಂಬುದಕ್ಕೆ ಹಾದರವೆಂಬುದಕ್ಕೆ ಹೀನಾರ್ಥವು ಇಲ್ಲ, ಉನ್ನತಾರ್ಥವೂ ಇಲ್ಲ, ಇಷ್ಟಾದರೂ ಕಾಳಿ ಮತ್ತು ಪೊನ್ನು ಪ್ರೀತಿಯೆಂಬ ಚೌಕಟ್ಟಿನೊಳಗೆ ಇದ್ದಾರೆ. ಬಂಜೆ ಎಂಬ ವಿಧಿ ಪೊನ್ನುವನ್ನು ದೇವರ ಬಳಿಗೆ ನೂಕುತ್ತಿದೆ. ಅವಳು ಹೂ ಮುಡಿವುದೇ ಅಪರೂಪ. ಅಮ್ಮ ಕಾಡುಮಲ್ಲಿಗೆ ಹೂ ಮುಡಿಸುತ್ತಿದ್ದಾಳೆ. ಇದಕ್ಕಾಗಿಯೇ ಗಾಜಿನ ಬಳೆಗಳನ್ನು ತೊಡಿಸಿ ಅಮ್ಮ ಹೊಸದಾಗಿಸಿದ್ದಾಳೆ.

'ಆ ಹೂವಿನ ವಾಸನೆಗೆ ನಾಗರಹಾವು ಬರುವುದೆನ್ನುವರು. ಆದ್ದರಿಂದ ಹೂಗಳಾಗಿ ಪೊದರುಗಳನ್ನು ಹುಡುಕಿಕೊಂಡು ಹೋಗಬೇಡ ಎನ್ನುವಳು. ಇದೆಲ್ಲ ಹಿಂದಿನ ಮಾತಾಯಿತು. ಈಗ ಜಾತ್ರೆಯಲ್ಲಿ ಹಾಗಲ್ಲ, ಜನಸಮೂಹದಲ್ಲಿ ಒಂಟಿಯಾಗಿ ನಿಂತಿದ್ದಾಳೆ ಪೊನ್ನ. 'ಪ್ರವಾಹದಲ್ಲಿ ತೇಲುವ ಮರದ ದುಂಡಿನಂತೆ ಅಲೆದಾಡುತ್ತಿದ್ದಳು. ಲಾಂದ್ರಗಳು ಹಾವಿನಂತೆ ಉಸಿರಾಡುತ್ತಿದ್ದವು' (ಪು 143) ಈ ಸನ್ನಿವೇಶವು ಸಾಂಕೇತಿಕವಾಗಿ ನವ್ಯ ಶೈಲಿ ಪಡೆಯುತ್ತದೆ. ಹೊಸತುಗಳ ಆಕರ್ಷಣೆ ಅವಳನ್ನು ಆಕರ್ಷಿಸಲು ತಾನು ತೇರಿನ ಚಕ್ರದ ಬಳಿ ನಿಂತಿರುವುದನ್ನು ಅರಿತಳು. ತೇರಿನ ಪೂರ್ವಕ್ಕೆ ತೇರಡಿ ಬೀದಿ. ದೊಣ್ಣೆ ವರಸೆಯ ಆಟ. ಪಂಜಿನ ಬೆಳಕಿನ ನಡುವೆ ಹತ್ತಾರು ಯುವಕರು. 'ಕಾಲಿನ ಗೆಜ್ಜೆಯನಾದ ಕೋಲುಗಳ ಶಬ್ದಕ್ಕೆ ಹೊಂದಿಕೊಂಡಿದ್ದವು. ಅವರೆಲ್ಲರೂ ದೇವರಂತೆ ಕಂಡರು' (ಪು 146) ಇವನು ದೇವರಲ್ಲ, ಇವನು ದೇವರಿರಬಹುದೆ? ಅವಳಿಗೆ ಮನೋ ಒಯ್ದಾಟ. ಎಳೆಮರ, ಹತ್ತೊನ್ನೆ ಕೇಳ್ರೊ, ನಿನಗೆ ಮೇಲೆ ನನಗೆ ಕೆಳಗೆ ಹೀಗಿತ್ತು ಅವಳು ಹುಡುಕುವ ದೇವರ ಜಾತ್ರೆ. ಅಲ್ಲಿ ಪಳನಿಮುರುಗನ್ ಕಥೆ, ಅನೇಕ ರೀತಿ ಜನಪದ ಕಥೆ, ಲೇವಡಿ ಕಥಾನಕಗಳ ಜಾತ್ರೆ, ಸಿರಿಯಾಳ ಕಥೆ, ಮಗುವನ್ನು ಕೊಟ್ಟು ನಂತರ ಮಗುವಿನ ಮಾಂಸ ಕೇಳಬಹುದು ಎಂಬ ಕಥನ. ಸಿಳ್ಳು ಚಪ್ಪಾಳೆಗಳೊಡನೆ ಜಾತ್ರೆಯೆಲ್ಲಿ ಅಲ್ಲಿ ಐಕ್ಯ 'ಅದೇ ಕುಣಿದ ಶಿಖರ ಪ್ರಾಯವಾಗಿ ಕಂಡಿತು. ಕುಣಿಯುವವರನ್ನು ನೋಡಿ ಗಂಡಸರು ಇಷ್ಟೊಂದು ಸುಂದರವಾಗಿರುವವರೇ ಎಂದು ಆಶ್ಚರ್ಯಪಟ್ಟಳು' (ಪು 157). ಮುಖದಮೇಲೆ ಚಿಗುರುಮೀಸೆ ಗಡ್ಡ, ಇವನೇ ತನಗಾದ ದೇವರು ಎಂದು ಮನಸ್ಸು ಹೇಳಿತು. ಆದರೆ 'ಕಾಳಿಯನ್ನು ಒಮ್ಮೆಯೂ ಹೊರದಬ್ಬಲಾಗಲಿಲ್ಲ, ಹನ್ನೆರಡು ವರ್ಷದಿಂದ ಅವಳೊಡನೆ ಹಂತಹಂತವಾಗಿ ಹೂತು ಹೋಗಿರುವನು (ಪು 158). ಇಲ್ಲಿ ಒಂದು ಕಡೆ ಗರ್ಭದಾಸೆ ಮತ್ತೊಂದು ಕಡೆ ದಾಂಪತ್ಯದ ಪ್ರೀತಿಪವಿತ್ರಾಸೆ, ಮಗದೊಂದು ಕಡೆ ಕೂಡಿದವನಿಗೆ ಅನ್ಯಾಯ ಮಾಡುತ್ತಿದ್ದೇನೆಂಬ ಮನೋವ್ಯಥೆ, ಈ ನಡುವೆ ಎಲ್ಲವನ್ನು ನಿಭಾಯಿಸಬೇಕಾದ ಒತ್ತಡ ಇದೇ ಕಾದಂಬರಿ ಶಿಖರ ಭಾಗ.

ತಲೆತಗ್ಗಿಸಿಕೊಂಡು ನಿಂತಿರುವವನನ್ನು 'ಸೆಲ್ವಿ ಇಲ್ಲಿ ನೋಡು' ಎಂದನು. ಅದು ಹೊಸ ಹೆಸರಿನ ಹುಸಿ ನಾಮಕರಣ. ಕರೆಯಲು ಇಟ್ಟ ಹೆಸರು. 'ಅವನೇ ದೇವರು ಕರೆದುಕೊಂಡು ಹೋಗುವ ಜಾಗಕ್ಕೆ ಹೋಗುವುದು ಮಾತ್ರ ತನ್ನ ಕೆಲಸ ಅಂದುಕೊಂಡಳು. ಮಳೆಯಲ್ಲಿ ತೊಯ್ದ ಕೋಳಿಯ ಮರಿಯಂತೆ ಮುದುರಿಕೊಂಡು ಅವನ ಅಪ್ಪುಗೆಯಲ್ಲಿ ಅಡಗಿಹೋದಳು' (ಪು 159).

'ಮಕ್ಕಳಿಲ್ಲದ್ರೋ ಆಸ್ತಿಗೇಕ್ ಓಂಗಾಡ್ತೀಯ' ಎಂದು ಹಂಗಿಸಿಕೊಂಡಿದ್ದವಳು', 'ಎಲ್ಲಾದ್ರೂ ಹೋಗ್ ಒಂದ್ಮಗೂನ್ ತಕೊಂಡ್‌ಬಾ. ಅಸ್ಪೃಶ್ಯರ ಮನೆದಾದ್ರೂ, ಸರಿ. ಕಾಸ್ಕೊಟ್ಟು ತಂದ್ರೂಸರಿ, ನಂ ಆಸ್ತೀಗ್ ವಾರಸ್ದಾರಿಲ್ಲಾಂತ ಯಾರೂ ಹೇಳ್ಬಾರ್ದು' (ಪು 163) ಎಂದು ಒತ್ತಡಗಳಿಗೆ ಒಳಗಾಗಿ ಹೊರಟಿದ್ದ ಪೊನ್ನು ಬಸಿರಾದಳೆ? ಇದಕ್ಕೆ ಉತ್ತರ ಕಾದಂಬರಿಯಲ್ಲಿಲ್ಲ, ಇದು ಮೌಢ್ಯವೇ ನಿಯೋಗವೆಂಬ ಪುರಾತನ ನಂಬಿಕೆಯೇ? ಇದೆಲ್ಲ ಕದ್ದುಮುಚ್ಚಿಯಾದರೂ ಈಗಲೂ ಸಮಾಜದೊಳಗೆ ಇದೆಯೆ? ಇದ್ಯಾವುದನ್ನು ಕಾದಂಬರಿ ಚರ್ಚಿಸುವುದಿಲ್ಲ, ಆದರೆ ಕಾದಂಬರಿ ಕುರಿತು ದೇಶದ ಬಲಪಂಥ ಚರ್ಚಿಸುತ್ತದೆ.

ಕಾಳಿ ಬಾಗಿಲ ಕಡೆ ಹೋದನು. ಹೂವರಿಸಿನ ಮಂಚ ಕೆಳಗೆ ಹಾಗೇ ಇತ್ತು, ಬಾಗಿಲು ನೂಕಿದನು. ಸಾರಾಯಿ ಮತ್ತೆಲ್ಲ ಇಳಿದುಹೋಯಿತು. ಎತ್ತುಗಳು ಕಾಣಲಿಲ್ಲ ಬಂಡಿಯೂ ಇರಲಿಲ್ಲ. 'ಮೋಸಮಾಡ್ಬಿಟ್ಳು... ಮೋಸಮಾಡ್ಬಿಟ್ಳು...' ಎಂದು ಬಾಯಿ ಗೊಣಗಿತು (ಪು 168). ಇದು ಎಂಥ ಜೀವ ಪ್ರೇಮಿಯೂ ಪಿತೃ ಸಂಸ್ಕೃತಿಯಲ್ಲಿನ ಮೀರಿ ಹೋಗದ ಗೌಡಿಕೆಯ ಬಹು ಕಷ್ಟದ ಕತೆ ಹೇಳುತ್ತದೆ. ಹಾಗೆಯೇ ಅದು ಹಕ್ಕನ್ನು ಕಳೆದುಕೊಳ್ಳಲಾರದ ಸ್ಥಿತಿ ಸೂಚಿಸುತ್ತದೆ.

ಮುನ್ನುಡಿಯಲ್ಲಿ ಆಶಾದೇವಿ ಹೇಳುವಂತೆ ಪೊನ್ನ 'ತನ್ನ ಸದ್ಯದ ಬದುಕಿನ ಒಳ ಮತ್ತು ಹೊರ ಹಿಂಸೆಗಳಿಂದ ಪಾರಾಗುವ ಒಳದಾರಿಯೊಂದರ ಹುಡುಕಾಟದಲ್ಲಿರುವವಳಂತೆ ಕಾಣಿಸುತ್ತಾಳೆ'. ಹೌದು ಇದು ಹೆಣ್ಣಿಗೊದಗುವ ಕಡು ಕಷ್ಟದ ಸಮಯ. ಅದೇ ನಮ್ಮ ಪುರಾಣಗಳ ಸಮಯ. ಅದೇ ನಿಯೋಗವೆಂಬ ಕಠಿಣ ಸಮಯ. ಅದೇ ಈ ಕಾದಂಬರಿಯಲ್ಲಿನ ಅರ್ಧನಾರೀಶ್ವರಸ್ಥಿತಿ ವಿಭಾಗವಾಗುವ ಸಮಯ.

ಕಾದಂಬರಿಯನ್ನು ಅನುವಾದ ಮಾಡಿದ ಕೆ.ನಲ್ಲತಂಬಿ ಅವರು ದ್ರಾವಿಡ ಸಂಸ್ಕೃತಿಯನ್ನು ತಮಿಳಿನೊಳಗಿನ ಜನಪದ ಸಮಾಜವನ್ನು ಜನಪದ ಭಾಷೆಯನ್ನು ಕನ್ನಡಕ್ಕೆ ಕೂಡಿಸುವಲ್ಲಿ ಸಫಲರಾದಂತೆ ಕನ್ನಡೀಕರಿಸಿದ್ದಾರೆ. ಇದೇನಿದು 'ಅರ್ಧನಾರೀಶ್ವರ' ಎಂದು ಪೆರುಮಾಳ್ ಮುರುಗನ್ ಕಥನ ಕುರಿತು ಚಿಂತಿಸುತ್ತದೆ. ಓದುಗರಿಗೆ ಇಷ್ಟೇನಾ ಒಂದು ಬರವಣಿಗೆ ಮೇಲೆ ಸವಾರಿ ಮಾಡುವ ಮತೀಯವಾದ ಎನಿಸುತ್ತದೆ. ಇದರಲ್ಲಿ ಸಾಂಸ್ಕೃತಿಕ ಕೆನೆ ತೆಗೆದು ಇದು ನಮ್ಮ ಭಾರತೀಯ ಸಂಸ್ಕೃತಿಯ ಪಳಿಯುಳಿಕೆ ಎಂದು ಕೃತಿಕಾರರು ಎತ್ತಿ ತೋರಿಸಿದ್ದಾರೆ.

■ ಡಾ. ರಾಜೇಗೌಡ ಹೊಸಹಳ್ಳಿ

ಮನುವಾದಿಗಳ ಮನದಾಳದ ಆಶಯ

"ಮುಸ್ಲಿಮರೆಂದರೆ ರಾಕ್ಷಸರು; ಅವರನ್ನು ಮೂಲೋಚ್ಚಾಟನೆ ಮಾಡದೆ ...ರೋತ್ಪಾದನೆ ನಿಲ್ಲದು" ಎಂದು ಲೋಕಸಭಾ ಸದಸ್ಯರೊಬ್ಬರು ...ಳಿದರೆನ್ನಲಾಗಿದೆ. ಈಗ ಮುಸ್ಲಿಮರ ಕುರಿತು ಯಾರು ಏನು ಬೇಕಾದರೂ ...ಳ ಬಹುದು ಎಂಬಂತಹ ವಾತಾವರಣವೊಂದು ನಿರ್ಮಾಣ ವಾಗಿದೆ. ...ವ್ಯಕ್ತಿ ಸ್ವಾತಂತ್ರ್ಯವೆಂದರೆ ಮೌನವಾಗಿರುವ ಹಕ್ಕು ಎಂದು ನಟ ಶಾರುಖ್‌ಖಾನ್ ...ಳಿದರು. ದೇಶದಲ್ಲಿ ಅಸಹಿಷ್ಣುತೆ ಇದೆಯೆಂದು ಹೇಳಿದ್ದಕ್ಕೇನೇ ಅವರ ...ವನ್ನು ಬಿಡುಗಡೆ ಮಾಡಬಾರದೆಂದು ಬಜರಂಗದಳದ ಸದಸ್ಯರು ...ಯೇಟರ್‌ನ ಮುಂದೆ ಪ್ರತಿಭಟನೆ ಮಾಡಿದರು. ಪೊಲೀಸರು ದೂರು ...ತುಕೊಂಡು ನೋಡಿದರು! ಈ ಪ್ರತಿಭಟನೆ ತೆರವು ಮಾಡಲು ವಿದ್ಯಾ ...ಕರ್ ಎಂಬ ಸಾಮಾಜಿಕ ಕಾರ್ಯಕರ್ತೆ ಪೊಲೀಸ್ ಕಮಿಷನರ್ ಬಳಿಗೆ ...ದು ಕೊಂಡೊಯ್ಯಬೇಕಾಯಿತು.

ರಾಜಸ್ಥಾನದ ಕಾಲೇಜಿನ ವಿಶ್ವವಿದ್ಯಾಲಯದ ಹಾಸ್ಟೆಲ್ ನಲ್ಲಿ ಕಾಶ್ಮೀರದ ...ರ್ಥಿಗಳು ಬೀಫ್ ಬೇಯಿಸಿ ತಿಂದರೆಂಬ ಕಾರಣಕ್ಕೆ ಅವರ ಮೇಲೆ ...ಮಣ ಮಾಡ ಲಾಯಿತು. ಜಾರ್ಖಂಡ್‌ನಲ್ಲಿ ಕೋಣಗಳನ್ನು ವ್ಯಾಪಾರ ...ಡಲು ಜಾತ್ರೆಗೆ ಕೊಂಡೊಯ್ಯುತ್ತಿದ್ದ ಇಬ್ಬರು ಮುಸ್ಲಿಮರ ಕೈಗಳನ್ನು ...ದಕ್ಕೆ ಕಟ್ಟಿ, ಬಾಯಿಗೆ ಬಟ್ಟೆ ತುರುಕಿ ಮರಗಳಿಗೆ ನೇತು ಹಾಕಿ ಕೊಲೆ ...ಡಲಾಯಿತು. ಅವರಲ್ಲಿ ಒರ್ವನು ಹದಿನಾಲ್ಕು ವರ್ಷದ ಬಾಲಕನಾಗಿದ್ದನು. ...ಜನರ ಮನದಾಳದಲ್ಲಿ ಇಂತಹ ಅಸಹಿಷ್ಣುತೆ ತುಂಬಿಕೊಳ್ಳಲು ಕಾರಣವೇನು? ...ಾದ್ಯಂತ ಬೀಫ್ (ದನದ ಮಾಂಸ) ವಿದೇಶಕ್ಕೆ ರಫ್ತು ಮಾಡಿ ಹಣ ...ಸುವ ಹಿಂದೂಗಳದ್ದೇ ಆದ ನಾಲ್ಕೈದು ಕಂಪೆನಿಗಳಿವೆಯೆನ್ನಲಾಗುತ್ತಿದೆ. ...ದೇಶಗಳಿಗೆ ರಫ್ತು ಮಾಡಿದರೆ ಆಗಬಹುದು. ಇಂಡಿಯಾದೊಳಗೆ ಮಾತ್ರ ...ಬಾರದು ಎಂಬುದು ಇದರ ಅರ್ಥವೇ? ಇಂತಹ ದ್ವಿಮುಖ ನೀತಿ ...ನುವಾದಿಗಳ ಮಂಚಿಯು ಒಂದು ಉದಾಹರಣೆಯೇ? ಚರ್ಮದ ಚಪ್ಪಲಿಗಳಿಗೆ ...ರುವಾಸಿ ಯಾದ ಕೊಲ್ಹಾಪುರದಲ್ಲಿ ಈ ಕೈಗಾರಿಕೆಗೆ ಈಗಾಗಲೇ ಪೆಟ್ಟು ...ದೆ ಎನ್ನಲಾಗುತ್ತಿದೆ. ಇಂತಹ ಅಸಹಿಷ್ಣುತೆ, ದ್ವಿಮುಖ ನೀತಿ, ಮೋಸ, ...ಳೆಯು ಮುಖಾಂತರ ದೇಶಕ್ಕೆ ಎಂತಹ ಅಭಿವೃದ್ಧಿ ತಂದುಕೊಡುತ್ತಿದ್ದಾರೆ? ...ತ್ಪನ್ನದಲಾಗಿ ದೇಶದ ಜನರ ಬದುಕನ್ನು ಅಮಾನ ಹೀಯತೆಯ ...ದಿಂದ ನಾಶ ಮಾಡಿ ಮಾನವೀಯತೆ ಎಂಬುದೇ ಈ ದೇಶದಲ್ಲಿ ... ಎಂಬುದನ್ನು ಸಾಬೀತುಪಡಿಸುತ್ತಿದ್ದಾರೆಯೇ?

ಮುಸ್ಲಿಮರನ್ನು ಇಂಡಿಯಾದಿಂದ ಮೂಲೋಚ್ಚಾಟನೆ ಮಾಡಬೇಕೆಂಬ ...ನುವಾದಿಗಳ ಮನದಾಳದ ಆಶಯ ಇಂದು ನಿನ್ನೆಯದಲ್ಲ, ಕಳೆದ ಶತಮಾನದ



ಸ್ವಾತಂತ್ರ್ಯ ಹೋರಾಟದ ದಿನಗಳೊಮ್ಮೆ ಹಿಂತಿರುಗಿ ನೋಡಿ. ಆಗ ಮುಸ್ಲಿಮರೆಲ್ಲರೂ ಒಕ್ಕೊರಲಿನಿಂದ ಇಂಡಿಯಾದ ವಿಭಜನೆಯಾಗಬೇಕೆಂದು ಕೇಳಿಕೊಂಡರೇ? ಎಂದಿಗೂ ಇಲ್ಲ, ಕೆಲವು ರಾಜಕಾರಣಿಗಳ ಸಮಯಸಾಧಕತನ ಅದಾಗಿತ್ತೇ ಹೊರತು, ಸಾಮಾನ್ಯ ಮುಸ್ಲಿಮನ ಮನಸ್ಸಿನಲ್ಲಿ ಅಂತಹ ಒಂದು ಯೋಚನೆ ಮೊಳೆಯುವುದು ಸಾಧ್ಯವೇ ಇರಲಿಲ್ಲ, ಜಮೀನ್ದಾರರ ಬಳಿಯಿಂದ ಒಂದಿಷ್ಟು ನೆಲವನ್ನು ಒಕ್ಕಲುತನದಿಂದ ಪಡೆದುಕೊಂಡು ಮನೆಯವರೆಲ್ಲರೂ ಸೇರಿ ಆ ನೆಲದಲ್ಲಿ ಉತ್ತು, ಬಿತ್ತಿ ದೊರೆತದ್ದರಲ್ಲಿ ಅರ್ಧದಷ್ಟನ್ನೂ ಜಮೀನ್ದಾರರಿಗೆ ಕೊಟ್ಟು ಬಡತನದಿಂದ ಹೊರಬರಲಾಗದೆ, ತಮ್ಮ ನೆಲ, ಕೃಷಿ, ತೋಟ, ದನಕರುಗಳು, ಹೆಣ್ಣುಮಕ್ಕಳ ಮದುವೆ ಮುಂತಾದ ವಿಷಯದಲ್ಲಿ ಮುಳುಗಿದವರು ನಮಗೆ ಈ ದೇಶವನ್ನು ಪಾಲು ಮಾಡಿಕೊಡಿ ಎಂದು ಕೇಳುವ ಒಂದು ಯೋಚನೆ ಸಾಮಾನ್ಯ ಮುಸ್ಲಿಮನಲ್ಲಿ ಹುಟ್ಟುವುದು ಸಾಧ್ಯವೇ ಇರಲಿಲ್ಲ, ಹಾಗೆಯೇ ಅಬ್ದುಲ್ ಕಲಾಂ ಆಜಾದ್ ಮತ್ತು ಅವರಂತಹ ಕೆಲವು ಹಿರಿಯರು ದೇಶ ವಿಭಜನೆಯನ್ನು ವಿರೋಧಿಸಿದ್ದು, ಮುಸ್ಲಿಮರು ದೇಶಾದ್ಯಂತ ಹರಡಿದ್ದಾರೆಯೇ ಹೊರತು ಯಾವುದೇ ಒಂದು ಪ್ರದೇಶಕ್ಕೆ ಸೀಮಿತವಾಗಿಲ್ಲ, ಮುಸ್ಲಿಂ ಬಾಹುಳ್ಯದ ಪ್ರದೇಶ ಪಾಕಿಸ್ತಾನ ವಾಗಲಿದ್ದಾಗ ಇಲ್ಲಿ ಉಳಿದ ಮುಸ್ಲಿಮರ ಮೇಲೆ ಆಕ್ರಮಣ ವಾಯಿತು; ಹಿಂದೂ ಮುಸ್ಲಿಂ ಘರ್ಷಣೆ ಎಂಬ ಹೆಸರನ್ನೂ ಅದಕ್ಕೆ ಇಡಲಾಯಿತು. ಕೋಮು ಗಲಭೆಯಾದಲ್ಲಿಗೆ ಗಾಂಧೀಜಿಯೇ ಹೋಗಿ ಉಪವಾಸ ಕುಳಿತು ಅದನ್ನು ನಿಲ್ಲಿಸಿದ್ದೂ ಇದೆ. ಅಂತೂ ದೇಶ ವಿಭಜನೆ ಎಂಬ ಅಪವಾದವನ್ನು ಮುಸ್ಲಿಮರ ಮೇಲೆ ಹೊರಿಸಲಾಯಿತು.

ಆದರೆ ದೇಶದ ಇಂದಿನ ಪರಿಸ್ಥಿತಿ ಮತ್ತು ಈ ಅಸಹಿಷ್ಣುತೆ ನೋಡುವಾಗ ದೇಶ ವಿಭಜನೆ ಎಂಬುದು ಮುಸ್ಲಿಮರ ಬೇಡಿಕೆಗಿಂತಲೂ ಮನುವಾದಿಗಳೇ ಹುಟ್ಟು ಹಾಕಿದ ಒಂದು ಚಿಂತನೆಯಾಗಿರಬಹುದೆಂದು ಅನ್ನಿಸುವುದಿಲ್ಲವೇ? ಇಂದು ಕೋಮು ಗಲಭೆಗಳಲ್ಲಿ ಹಿಂದೂಗಳು ಮುಸ್ಲಿಮರೊಡನೆ ಕೇಳುತ್ತಿರುವ ಮಾತು, "ನೀವೇಕೆ ಇನ್ನೂ ಇಲ್ಲೇ ಇದ್ದೀರಿ? ನೀವೇಕೆ ಪಾಕಿಸ್ತಾನಕ್ಕೆ ಹೋಗಿಲ್ಲ? ನೀವು ಪಾಕಿಸ್ತಾನಕ್ಕೆ ಹೋಗಿ" ಎಂಬುದಾಗಿದೆ. ಅಂದರೆ ಈ ಜನರಿಗೆ ಬೇರೆ ದೇಶ ಕೊಟ್ಟು, ಇವರನ್ನು ಇಲ್ಲಿಂದ ಉಚ್ಚಾಟನೆ ಮಾಡಿದರೆ ಮನುವಾದಿ ಆಡಳಿತ ಸ್ಥಾಪಿಸುವುದು ಸುಲಭ ಎಂಬುದೇ ಇದರ ಹಿಂದಿರುವ ಹುನ್ನಾರವಾಗಿದೆ. ಮನುವಾದಿಗಳೆಂದೂ ಮೈಮುರಿದು ದುಡಿಯಲಾರರಲ್ಲ? ಉತ್ತು ಬಿತ್ತಿ ಆಹಾರ ಬೆಳೆಯಲು ಇವರಿಗೆ ಹಿಂದುಳಿದವರು ಬೇಕು.

ಅದಕ್ಕಾಗಿ ಶೂದ್ರರನ್ನು 'ಹಿಂದೂ, ನಾವೆಲ್ಲ ಒಂದು' ಎಂದು ಇಲ್ಲೇ ಉಳಿಸಿಕೊಳ್ಳಬಹುದು. ಹಾಗೆಯೇ ಇವರ ಮಲವನ್ನು ತಲೆ ಮೇಲೆ ಹೊತ್ತು ಕೊಂಡೊಯ್ಯಲು ದಲಿತರು ಇರಲಿ. ಅವರನ್ನು ಕೊಲೆ ಮಾಡಿದರೂ ಅವರಿಂದೇನೂ ಅಪಾಯವಿಲ್ಲ, ಅಪಾಯವಿರುವುದು ಮುಸ್ಲಿಮರಿಂದ ಮಾತ್ರ. ಅವರ ಉಚ್ಚಾಟನೆಯಾಗಲಿ ಎಂಬ ಮನುವಾದಿಗಳ ಯೋಚನೆಯೇ ದೇಶ ವಿಭಜನೆಗೆ ಕಾರಣವೆಂದು ಈಗ ಅನ್ನಿಸುತ್ತಿದೆ ಮತ್ತು ಈ ಅಪವಾದವನ್ನು ಮುಸ್ಲಿಮರ ತಲೆಗೇ ಕಟ್ಟಿದರಾಯಿತು. "ಮುಸ್ಲಿಮರು ದೇಶ ವಿಭಜನೆ ಮಾಡಿದರು" ಎಂದು ಇಂದಿಗೂ ಹೇಳುತ್ತಿರುತ್ತಾರೆ. ದೇಶ ವಿಭಜನೆಯಾಗಬಾರದ ಈ ಜನರಿಗೆ ಆಡಳಿತ ನಡೆಸಲು ಇಂತಹ ಒಂದು ಬಹುಮತ ಎಂದಿಗೂ ದೊರೆಯುತ್ತಿರಲಿಲ್ಲ!

■ ಡಾ. ಸಾರಾ ಅಬೂಬಕ್ಕರ್

ಇಬ್ಬಗೆಯ ನೀತಿ, ಟೋಪಿ ಹಾಕುವಿಕೆ, ಉಲ್ಟಾ ಹೊಡೆಯುವಿಕೆ ಇತ್ಯಾದಿ, ಇತ್ಯಾದಿ...


ಭಯೋತ್ಪಾದನೆ ವಿಷಯದಲ್ಲಿ ಇಬ್ಬಗೆಯ ನೀತಿ

'ಭಯೋತ್ಪಾದನೆ ವಿರುದ್ಧದ ಜಾಗತಿಕ ಸಮರ'ದ ಜನಕನಾದ ಅಮೆರಿಕ ತನ್ನ ಅಭಿಯಾನದ ಭಾಗವಾಗಿ ಶಂಕಿತ ಉಗ್ರರ ಹೆಸರು, ದೇಶ, ಜನ್ಮದಿನ, ಫೋಟೊ, ಬೆರಳಚ್ಚು, ಪಾಸ್‌ಪೋರ್ಟ್ ನಂಬ್ರ ಮೊದಲಾದ ದತ್ತಾಂಶಗಳನ್ನು ಕಲೆಹಾಕಿ ಉಗ್ರ ತಪಾಸಣಾ ಕೇಂದ್ರ (ಟಿಸಿಎಸ್) ಎಂಬ ಸಂಸ್ಥೆಯೊಂದನ್ನು ಹುಟ್ಟುಹಾಕಿದೆ. ಪ್ರಸಕ್ತವಾಗಿ ಟಿಸಿಎಸ್‌ನಲ್ಲಿ 11,000 ಶಂಕಿತ ಉಗ್ರರ ಮಾಹಿತಿಗಳಿವೆಯೆಂದು ಹೇಳಲಾಗಿದೆ. ಕಳೆದ ವರ್ಷ ಇದನ್ನು ಬಳಸಿ ಉಗ್ರರ ಜೊತೆ ಸಂಬಂಧ ಇರಿಸಿಕೊಂಡಿರುವ 24 ಜನರನ್ನು ಕೆನಡಾ ಮತ್ತು ಆಸ್ಟ್ರೇಲಿಯಗಳಿಂದ ಬಂಧಿಸಲಾಗಿತ್ತೆಂದು ಅಮೆರಿಕ ಹೇಳಿಕೊಳ್ಳುತ್ತದೆ. ಟಿಸಿಎಸ್‌ನೊಂದಿಗೆ ಮಾಹಿತಿ ಹಂಚಿಕೊಳ್ಳುವ ಒಪ್ಪಂದಕ್ಕೆ ಇದುವರೆಗೆ 30 ರಾಷ್ಟ್ರಗಳು ಸಹಿ ಹಾಕಿವೆ. ಆದರೆ ಗುಪ್ತಚರ ಸಂಸ್ಥೆಗಳಿಂದ ವಿರೋಧ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಭಾರತ ಈ ಗುಂಪಿಗೆ ಸೇರಲು ನಿರಾಕರಿಸಿದೆ ಎನ್ನಲಾಗಿದೆ. ಟಿಸಿಎಸ್ ಮೂಲಕ ಭಾರತದ ಶಂಕಿತ ಉಗ್ರರ ವಿವರಗಳು ಅಮೆರಿಕಕ್ಕೆ ಲಭ್ಯವಾದರೆ ಆ ದಾಖಲೆಗಳನ್ನು ಅದು ತನಗಿಷ್ಟ ಬಂದಂತೆ ಬಳಸಲಿದೆ ಎಂಬ ಭಯವೇ ಈ ವಿರೋಧಕ್ಕೆ ಕಾರಣವಂತೆ. ಆದರೆ ಭಾರತದ ಹಿಂಜರಿಕೆಗೆ ಮುಖ್ಯ ಕಾರಣ ಇದಲ್ಲ ಅನಿಸುತ್ತದೆ.

ಮಾರ್ಚ್ 30ರಂದು ಬ್ರುಸೆಲ್ಸ್‌ನ ಒಂದು ಸಭೆಯಲ್ಲಿ ಮಾತನಾಡಿದ ನರೇಂದ್ರ ಮೋದಿ ಕಳೆದ 40 ವರ್ಷಗಳಿಂದಲೂ ಭಾರತ ಉಗ್ರವಾದದ ಮುಷ್ಟಿಯಲ್ಲಿ ನಲುಗುತ್ತಿದೆ ಎಂದು ದೂರಿರುವುದಾಗಿ ವರದಿಯಾಗಿದೆ. ಭಾರತ ಉಗ್ರವಾದದ ಮುಷ್ಟಿಯಲ್ಲಿ ನಲುಗುತ್ತಿದೆ ಎನ್ನುವ ಸರ್ಕಾರ ಇದೀಗ ಪಠಾಣ್‌ಕೋಟ್ ದಾಳಿಗೆ ಸಂಬಂಧಿಸಿದಂತೆ ಜೈಶ್ ಎ ಮುಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್ ಹೆಸರನ್ನು ಕೈಬಿಟ್ಟಿರುವುದು ಗಮನಾರ್ಹವಿದೆ. ಇತ್ತೀಚೆಗಷ್ಟೆ ಭಾರತಕ್ಕೆ ಬಂದಿದ್ದ ಪಾಕಿಸ್ತಾನದ ಜಂಟಿ ಪರಿವೀಕ್ಷಣಾ ತಂಡ (ಜೆಐಟಿ) ಅಜರ್‌ಗೂ ಪಠಾಣ್‌ಕೋಟ್ ದಾಳಿಗೂ ಯಾವ ಸಂಬಂಧವೂ ಕಂಡುಬಂದಿಲ್ಲವೆಂದು ಹೇಳಿದೆ. ಭೇಟಿ ಕೊನೆಗೊಳ್ಳುತ್ತಿದ್ದಂತೆ ಭಾರತದ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸಿದ್ಧಪಡಿಸಿದ್ದ ಮೊದಲ ಅಧಿಕೃತ ಹೇಳಿಕೆಯಲ್ಲಿ ಅಜರ್ ಹೆಸರನ್ನು ಉಲ್ಲೇಖಿಸಲಾಗಿತ್ತಾದರೂ ನಂತರ ಅದನ್ನು ಕೈಬಿಡಲಾಗಿದೆ. ಇದರ ಹಿಂದೆ ವಿದೇಶ ವ್ಯವಹಾರಗಳ ಸಚಿವಾಲಯ ಅಥವಾ ಪ್ರಧಾನಿ ಕಾರ್ಯಾಲಯದ ಕೈವಾಡ ಇರುವುದಾಗಿ ತಿಳಿದುಬಂದಿದೆ. ಇದರರ್ಥ ಒಂದೊ ನಾವು ಸಿಕ್ಕಾಪಟ್ಟೆ ಆರೋಪಗಳನ್ನು ಮಾಡುವುದರಲ್ಲಿ ನಿಸ್ಸೀಮರು ಇಲ್ಲ ಪಾಕಿಸ್ತಾನ ಸರ್ಕಾರವನ್ನು ತೃಪ್ತಿಪಡಿಸುವುದಕ್ಕೋಸ್ಕರ ಹೀಗೆ ಮಾಡುತ್ತಿದ್ದೇವೆ.


ಭಾರತದ ನಲುಗುವಿಕೆಗೆ ಲಷ್ಕರ್, ಜೈಶ್ ಇತ್ಯಾದಿ ಗಳಂತೆಯೆ ಆರೆಸ್ಸೆಸ್‌ನ ಕೊಡುಗೆಯೂ ಇರುವುದು ಸಾಬೀತಾಗಿದೆ. ನಿಜಹೇಳಬೇಕೆಂದರೆ ನಲುಗುವಿಕೆ ಮಹಾತ್ಮ ಗಾಂಧಿಯ ಹತ್ಯೆಯಿಂದಲೆ ಪ್ರಾರಂಭವಾಗಿದೆ ಎನ್ನಬಹುದು. ಹೀಗೆ ಭಾರತದಲ್ಲಿ ಎರಡು ವಿಧದ ಉಗ್ರವಾದಗಳಿದ್ದರೂ ಅವುಗಳಿಗೆ ತೋರಲಾಗುತ್ತಿರುವ ಪ್ರತಿಕ್ರಿಯೆಯಲ್ಲಿ ಅಜಗಜಾಂತರವಿರುವ ವಾಸ್ತವ ಢಾಳಾಗಿ ಗೋಚರಿಸುತ್ತದೆ. ಇಲ್ಲಿ ಪೋಟಾದ ಇತ್ತೀಚಿನ ಆವೃತ್ತಿಯಾದ ಯುಎಪಿಎ ಎಂಬ ಕಠೋರ ಕಾಯ್ದೆಯಡಿ ಅನೇಕ ಅಮಾಯಕ ಮುಸ್ಲಿಮರನ್ನು ಬಂಧಿಸಿ, ಭಯೋತ್ಪಾದನೆಯ ಆರೋಪ ಹೊರಿಸಿ, ವರ್ಷಾನುಗಟ್ಟಲೆ ಜೈಲಿನಲ್ಲಿರಿಸಿದ ಬಳಿಕ ಕೊನೆಯಲ್ಲಿ ಸರಿಯಾದ ಪುರಾವೆಗಳಿಲ್ಲದ ಕಾರಣಕ್ಕೆ ನ್ಯಾಯಾಲಯಗಳಿಂದ ಖುಲಾಸೆಗೊಳ್ಳುವ ವಿದ್ಯಮಾನ ನಡೆಯುತ್ತದೆ. ಅದೇವೇಳೆ ಭಯೋತ್ಪಾದನೆ, ಕೋಮುದಂಗೆ ಪ್ರಕರಣಗಳಲ್ಲಿ ಆರೋಪಿಗಳಾಗಿರುವ ಕೇಸರಿ ಉಗ್ರರು ಒಂದೊ ತಲೆಮರೆಸಿಕೊಳ್ಳುತ್ತಾರೆ ಅಥವಾ ಅವರ ವಿರುದ್ಧ ಪ್ರಕರಣಗಳು ದಾಖಲಾಗುವುದಿಲ್ಲ ಅಥವಾ ವಿಚಾರಣೆಯ ಗತಿ ಕುಂಟುತ್ತಲೆ ಸಾಗುತ್ತದೆ ಅಥವಾ ಮೋದಿ ಸರ್ಕಾರದ ಕೃಪಾಕಟಾಕ್ಷದಿಂದಾಗಿ ಅವರನ್ನು ಆರೋಪ ಮುಕ್ತರಾಗಿಸಲು ಸಕಲ ಸಿದ್ಧತೆಗಳಾಗುತ್ತವೆ. ನಮ್ಮಲ್ಲಿನ ಇನ್ನೊಂದು ವಿಶೇಷವೆಂದರೆ ನಕಲಿ ಎನ್ಕೌಂಟರ್ ಆರೋಪ ಹೊತ್ತಿರುವ ಪೊಲೀಸ್ ಅಧಿಕಾರಿಗಳು ಜೈಲಿನಿಂದ ಹೊರಬೀಳುವುದರೊಂದಿಗೆ ಮುಂಬಡ್ತಿಯ ಬೋನಸ್ ಕೂಡ ಪಡೆಯುತ್ತಾರೆ!

ಸಂಸತ್ ದಾಳಿ ಪ್ರಕರಣದಲ್ಲಿ ಗಲ್ಲಿಗೇರಿಸಲ್ಪಟ್ಟ ಶಂಕಿತ ಉಗ್ರ ಅಫ್ಜಲ್ ಗುರು ಓರ್ವ ಬಲಿಪಶು ಎಂಬ ಬಲವಾದ ಆಪಾದನೆಗಳಿವೆ. ಅಕ್ಷರಧಾಮ ಮಂದಿರ ದಾಳಿ ಪ್ರಕರಣದಲ್ಲಿ 12 ವರ್ಷಗಳ ನಂತರ ಆರೂ ಮಂದಿ ಆರೋಪಿಗಳು ಖುಲಾಸೆಗೊಂಡಿದ್ದಾರೆ. ಗುಜರಾತಿನಲ್ಲಿ ನಕಲಿ ಎನ್ಕೌಂಟರ್‌ಗಳಲ್ಲಿ ಸಾಯಿಸಲ್ಪಟ್ಟ ಉಗ್ರರು ವಾಸ್ತವದಲ್ಲಿ ಉಗ್ರರೆ ಅಲ್ಲವೆಂದು ತನಿಖಾ ವರದಿಗಳು ಹೇಳಿವೆಯಾದರೂ ಮೋದಿ ಸರ್ಕಾರ ಒಬ್ಬೊಬ್ಬರೆ ಆರೋಪಿತ ಪೊಲೀಸರನ್ನು ಬಂಧಮುಕ್ತಗೊಳಿಸುತ್ತ ಇದೆ. ಲಷ್ಕರ್ ಕಾರ್ಯಕರ್ತ ಎನ್ನಲಾದ ಅಬ್ದುಲ್ ಕರೀಂ ತುಂಡಾ ಮತ್ತು ಪುಣೆಯ ಜರ್ಮನ್ ಬೇಕರಿ ಸ್ಫೋಟ ನಡೆಸಿದಾತ ಎನ್ನಲಾದ ಮಿರ್ಜಾ ಹಿಮಾಯತ್ ಬೇಗ್ ಮೇಲಿನ ಆರೋಪಗಳು ಆಧಾರರಹಿತ ಎಂದಿರುವ ನ್ಯಾಯಾಲಯಗಳು ಆ ಪ್ರಕರಣಗಳನ್ನೆ ರದ್ದುಗೊಳಿಸಿವೆ. ಸಂಜೋತಾ ಎಕ್ಸ್‌ಪ್ರೆಸ್ ಮುಂತಾದ ಸ್ಫೋಟ ಪ್ರಕರಣಗಳಲ್ಲಿ ಕೇಸರಿ ಉಗ್ರರೆ ನೈಜ ಆರೋಪಿಗಳೆಂದು ತಿಳಿದಿದ್ದರೂ ಅವರ ಬದಲು ಅಮಾಯಕ ಮುಸ್ಲಿಮರನ್ನು ಬಂಧಿಸಿ ಜೈಲಿಗೆ ತಳ್ಳಲಾಗಿತ್ತು. ಅಲ್ಪಸಂಖ್ಯಾತರ ವಿರುದ್ಧ ನಡೆದಿರುವ ಅನೇಕಾನೇಕ ಕೋಮು ದಂಗೆಗಳಿಗೆ ಕಾರಣಕರ್ತರಾದ ಸಂಘ ಪರಿವಾರದ ಮೇಲೆ ಯಾವ ಗುರುತರ ಪ್ರಕರಣಗಳೂ ದಾಖಲಾಗಿಲ್ಲ. ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳಲ್ಲಿ ವರ್ಷಾನುಗಟ್ಟಲೆಯಿಂದ ಜಾರಿಯಲ್ಲಿರುವ ಸೇನಾಪಡೆಗಳ ವಿಶೇಷಾಧಿಕಾರಕಾಯ್ದೆ ವಿಪರೀತ ದುರುಪಯೋಗಕ್ಕೊಳಗಾಗಿದೆ. ಬಹುಮಾನ ಕ್ಕೋಸ್ಕರ ಉಗ್ರರ ಹೆಸರಲ್ಲಿ ಅನೇಕ ಅಮಾಯಕ ಪ್ರಜೆಗಳನ್ನು ಕೊಂದುಹಾಕಿರುವ ಘಟನೆಗಳು ನಡೆದಿವೆ. ಅಮಾಯಕ ಮುಸ್ಲಿಮರನ್ನು ಬಂಧಿಸಿ ವರ್ಷಗಳ ಕಾಲ ಸೆರೆಮನೆಯೊಳಗೆ ಕೊಳೆಯಿಸುವುದು ದೆಹಲಿಯ ವಿಶೇಷ ಪೊಲೀಸ್ ತಂಡದ 'ಹೆಚ್ಚುಗಾರಿಕೆ' ಆಗಿದೆ. ಇತ್ತೀಚಿನ ದಾಬೋಲ್ಕರ್, ಪನ್ಸಾರೆ, ಕಲಬುರ್ಗಿಯಂತಹ ವಿಚಾರವಾದಿಗಳ ಹತ್ಯೆಯ ತನಿಖೆಗಳನ್ನು ನಮ್ಮಲ್ಲಿ ಉದ್ದೇಶಪೂರ್ವಕವಾಗಿ ಹಳ್ಳಹಿಡಿಸಲಾಗುತ್ತದೆ. ಭಾರತದ ಗುಪ್ತಚರ, ತನಿಖಾ ಮತ್ತು ಭದ್ರತಾ ಸಂಸ್ಥೆಗಳ ಅದಕ್ಷತೆ ಮತ್ತು ಪಕ್ಷಪಾತವನ್ನು ಬಯಲಿಗೆಳೆಯುವ ಇಂತಹ ಪ್ರಕರಣಗಳ ಪಟ್ಟಿ ಸಾಕಷ್ಟು ದೊಡ್ಡದಿದೆ. ಒಂದೆಡೆ ಅಸಲಿ ಆರೋಪಿಗಳನ್ನು ರಕ್ಷಿಸುತ್ತ ಇನ್ನೊಂದೆಡೆ ಅಮಾಯಕರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸುತ್ತ ಜನಮಾನಸದಲ್ಲಿ ತಪ್ಪು ಅಭಿಪ್ರಾಯಗಳನ್ನು ಮೂಡಿಸುವ ಕಾನೂನುಬಾಹಿರ ಕಾರ್ಯಗಳಿಗೆ ಅಪಾರ ಮೊತ್ತದ ಸಾರ್ವಜನಿಕ ಹಣವನ್ನು ವ್ಯಯಿಸಲಾಗುತ್ತದೆ. ಈ ವಿಚಾರಗಳೆಲ್ಲವೂ ಜಗತ್ತಿಗೆ ತಿಳಿದರೆ ದೊಡ್ಡ ಮುಖಭಂಗವಲ್ಲವೆ? ಹೀಗಾಗಿ ಜನವಿರೋಧಿ ಕಾಯ್ದೆಗಳು, ಸುಳ್ಳು ಪ್ರಕರಣಗಳು, ಘೋರ ಮಾನವ ಹಕ್ಕು ಉಲ್ಲಂಘನೆಗಳು ಮತ್ತು ಕೇಸರಿ ಭಯೋತ್ಪಾದನೆ ಎಂಬ ನಮ್ಮ ಅಡುಗೆಮನೆಯ ಗುಟ್ಟು ಎಲ್ಲಿ ವಿಶ್ವಾದ್ಯಂತ ಬಯಲಾಗಿಬಿಡುತ್ತದೊ ಎಂಬ ಭಯವೆ ಟಿಸಿಎಸ್ ಸೇರಲು ಹಿಂಜರಿದಿರುವುದಕ್ಕೆ ಮುಖ್ಯಕಾರಣ ಅನಿಸುತ್ತದೆ.



ಬಾಯಲ್ಲಿ ಅಂಬೇಡ್ಕರ್, ಬಗಲಲ್ಲಿ ಟೋಪಿ

ಆಡಳಿತದ ಮೇಲಿನ ಹಂತಗಳಲ್ಲಿ ದಲಿತ ಪ್ರಾತಿನಿಧ್ಯ ತೀರಾ ನಿರಾಶೆ ಮೂಡಿಸುವಂತಿದೆ; ಕಾರ್ಯದರ್ಶಿಗಳ ಮಟ್ಟದಲ್ಲಿ ಒಬ್ಬನೆ ಒಬ್ಬ ದಲಿತನಾದರೂ ಇಲ್ಲ ಎನ್ನುತ್ತದೆ ದಲಿತ ಕಲ್ಯಾಣ ಸಮಿತಿಯ 26ನೆ ವರದಿ. ಇದಕ್ಕೆ ಸಂಬಂಧಿಸಿದಂತೆ ಎಲ್ಲ ರಾಜ್ಯಗಳ ಮಾಹಿತಿಗಳನ್ನು ಒಂದೆ ಕಡೆ ಕಲೆಹಾಕಬೇಕೆಂದು ಸಮಿತಿ ಸೂಚಿಸಿದೆ. ಇತ್ತ ಮಾರ್ಚ್ 21ರಂದು ಅಂಬೇಡ್ಕರ್ ರಾಷ್ಟ್ರೀಯ ಸ್ಮಾರಕ ಭವನದ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸಿದ ಮೋದಿ, ಖುದ್ದು ಅಂಬೇಡ್ಕರರೆ ಪುನರ್ಜನ್ಮವೆತ್ತಿ ಮೀಸಲಾತಿಯನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರೂ ತನ್ನ ಸರ್ಕಾರ ಮುಂಬಡ್ತಿಯಲ್ಲಿ ಮೀಸಲಾತಿ ನೀತಿಯನ್ನು ತೆಳುಗೊಳಿಸುವುದಿಲ್ಲ ಎಂದು ಘೋಷಿಸಿದ್ದಾನೆ. ಆದರೆ ಇದೇ ಮೋದಿಯ ಸರ್ಕಾರ ಸಂಸತ್ತಿನಲ್ಲಿ ತೀರ ತದ್ವಿರುದ್ಧವಾದ ಕೆಲಸ ಮಾಡುತ್ತಿದೆ.



ರಾಜ್ಯ ಸಭೆ 2012ರಲ್ಲಿ ಅಂಗೀಕರಿಸಿರುವ 117ನೆ ತಿದ್ದು... ಮಸೂದೆಯನ್ನು ಅದು ಇನ್ನೂ ಅನುಮೋದನೆ... ಲೋಕಸಭೆಯ ಮುಂದೆ ಇರಿಸಿಲ್ಲ, ಅಷ್ಟೆ ಅಲ್ಲ, ಶಿ... ಸಂಸ್ಥೆಗಳೂ ಸೇರಿದಂತೆ ಖಾಸಗಿ ವಲಯದಲ್ಲಿ ಮೀಸಲ... ಒದಗಿಸುವ ಬಗ್ಗೆ ಏನೇನೂ ಉತ್ಸಾಹ ತೋರುತ್ತಿಲ್ಲ... 10 ವರ್ಷಗಳಿಗೊಮ್ಮೆ ಲೋಕ ಸಭೆ ಮ... ವಿಧಾನಸಭೆಗಳಿಗೆ ದಲಿತ ಮೀಸಲಾತಿ ಯ... ನವೀಕರಿಸಬೇಕೆಂದಿದ್ದರೂ ಅಲ್ಲೂ ನ್ಯಾಯಾಲಯಕ್ಕೆ ಸ... ದತ್ತಾಂಶಗಳನ್ನು ಒದಗಿಸುತ್ತಿಲ್ಲ. ಈ ಹೊತ್ತು ತಮ... ಸರ್ಕಾರ ಅಧಿಕಾರಕ್ಕೆ ಬಂದಿರುವ ಸಂದರ್ಭದಲ್ಲಿ ಈ ... ಪದ್ಧತಿಯ ಸಮರ್ಥಕರು ಅಂಬೇಡ್ಕರ್ ಭಾವಚಿ... ಹಾರತುರಾಯಿ ಸಮರ್ಪಣೆ ಮತ್ತು ಹೊಗಳುವಿಕೆ... ಹೊಸಾ ನಾಟಕವೊಂದನ್ನು ಪ್ರಾರಂಭಿಸಿದ್ದಾರೆ. ಆ... ಮೀಸಲಾತಿ ನೀತಿ ವಿರುದ್ಧ ಕಿಡಿಕಾರುವ ಹೇಳಿಕೆ... ಮಾತ್ರ ಎಂದಿನಂತೆ ಮುಂದುವರಿದಿವೆ. ಆರೆಸ್ಸೆಸ್ ಪ್ರ... ಜಾಟ್, ಪಟೇಲ್ ಸಮುದಾಯಗಳ ಮೀಸಲ... ಆಂದೋಳನದ ಅಂತಿಮಗುರಿಯೆ ಮೀಸಲಾತಿ ನೀತಿ... ನಿರ್ಮೂಲನ.

ಆಧಾರ್ ವಿಷಯದಲ್ಲಿ ಉಲ್ಟಾ ಹೊಡೆದ ಮೋದಿ

ಅಂದು ಆಧಾರ್ ಯೋಜನೆಯನ್ನು ಅಷ್ಟೊ... ತೀವ್ರವಾಗಿ ವಿರೋಧಿಸಿದ್ದ ಮೋದಿ ಇಂದು ಒಂದಿ... ನಾಚಿಕೆಯಿಲ್ಲದೆ ಅದೊಂದು ಹಣಕಾಸಿನ ಮಸೂದೆ ಎ... ಅದಕ್ಕೆ ಲೋಕಸಭೆಯ ಅನುಮೋದನೆಯನ್... ಪಡೆದುಕೊಂಡಿದ್ದಾನೆ! ಇದೇ ಮೋದಿ ಹಿಂದೆ ಅಕ್ಟೋಬ... 2011ರಲ್ಲಿ ಪ್ರಧಾನಿ ಮನಮೋಹನ್ ಸಿಂಗ್‌ಗೆ ಬರೆ... ಪತ್ರವೊಂದರಲ್ಲಿ, ಸಂಬಂಧಪಟ್ಟ ಕಾಯ್ದೆ ಅಥ... ನಿಯಮಗಳಲ್ಲಿ ಬಯೊಮೆಟ್ರಿಕ್ ಬಗ್ಗೆ ಪ್ರಸ್ತಾಪ ಇಲ್ಲದಿರುವ... ರಾಷ್ಟ್ರೀಯ ಜನಸಂಖ್ಯಾ ದಾಖಲೆ (ಎನ್‌ಪಿಆರ್) ಮ... ಆಧಾರ್‌ಗಳಿಗಾಗಿ ಬಯೊಮೆಟ್ರಿಕ್ ದತ್ತಾಂಶ ಸಂಗ್ರಹ ಯ... ಎಂದು ಕೇಳಿದ್ದ. ಬಳಿಕ ಮೋದಿ ನೇತೃತ್ವದ ಗುಜರಾ... ಸರ್ಕಾರ ಗೃಹ ಸಚಿವಾಲಯಕ್ಕೆ ಸೆಡ್ಡು ಹೊಡೆ... ಎನ್‌ಪಿಆರ್‌ಗಾಗಿ ದತ್ತಾಂಶ ಸಂಗ್ರಹವನ್ನು ನಿಲ್ಲಿಸಿತ್ತು. ಆಧಾ... ಕಡ್ಡಾಯ ಮಾಡಿರುವುದಕ್ಕೆ ಸರ್ವೋಚ್ಚ ನ್ಯಾಯಾಲ... 2013ರಲ್ಲಿ ಯುಪಿಎ ಸರಕಾರವನ್ನು ತರಾಟ... ತೆಗೆದುಕೊಂಡಿದ್ದ ಸಂದರ್ಭದಲ್ಲಿಯೂ ಮೋದಿ ಟ್ವಿಟ... ಮೂಲಕ ಸರಕಾರವನ್ನು ಪ್ರಶ್ನಿಸಿದ್ದ. "ಸರ್ವೋ... ನ್ಯಾಯಾಲಯ ಈ ಅಂಶಗಳನ್ನು ಎತ್ತಿರುವಾಗ ಆಧಾರ... ಎಲ್ಲಾ ರಾಜ್ಯಗಳು ಮತ್ತು ಇಲಾಖೆಗಳು ಒಪ್ಪಿಗೆ ಸೂಚಿಸಿವೆ... ಎಂದು ಪ್ರಧಾನಿ ದೇಶಕ್ಕೆ ತಿಳಿಸಬೇಕು. ನಾನು ಮೂ... ವರ್ಷಗಳ ಕೆಳಗೆ ಇದೇ ವಿಷಯವನ್ನು ಎತ್ತಿದ್ದೆ. ರಾಷ್ಟ್ರೀ... ಮಟ್ಟದ ಸಭೆ ಕರೆದು ಎಲ್ಲ ಮುಖ್ಯಮಂತ್ರಿಗಳನ್ನು ಕ... ಎಂದು ಸಲಹೆ ಕೊಟ್ಟಿದ್ದೆ. ಈಗ ಆಧಾರ್‌ಕಾರ್ಡ್‌ಗ... ಎಷ್ಟು ದುಡ್ಡು ಖರ್ಚಾಗಿದೆ, ಅದರಿಂದ ಯಾರ... ಪ್ರಯೋಜನವಾಯಿತೆಂದು ದೇಶ ಕೇಳಬಯಸುತ್ತಿದೆ... ಎಂದಾತ ಹೇಳುತ್ತಿದ್ದಂತೆ ಅತ್ತ ಗುಜರಾತ್‌ನಲ್ಲಿ ರಾ... ಸರ್ಕಾರ ಯುಐಡಿ ಪ್ರಾಧಿಕಾರದ ಜೊತೆ ಮಾಡಿಕೊಂಡಿ... ಒಪ್ಪಂದದನ್ವಯ ಆಧಾರ್ ನೋಂದಣಿ ಕೆಲಸ ಅವ್ಯಾಹತವ... ಸಾಗಿತ್ತು! ವಾಸ್ತವದಲ್ಲಿ ಗುಜರಾತ್ ಸರ್ಕಾರ ಯುಐ... ಆಧಾರ್ ಯೋಜನೆಗೆ 2012ರಷ್ಟು ಹಿಂದೆಯೆ ಚಾ... ನೀಡಿದೆ. ಆಗ ಸಂಗ್ರಹಿಸಿದ್ದ ಮೊದಲ ಬಯೊಮೆಟ್ರಿ... ದತ್ತಾಂಶ ಮೋದಿಯದೆ ಆಗಿತ್ತು! ಈಗ ಮೋ... ಪ್ರಧಾನಿಯಾದ ಬಳಿಕ ಆತನ ಸರ್ಕಾರವೆ ಎನ್‌ಪಿಆ... ಮತ್ತು ಯುಐಡಿ ದತ್ತಾಂಶಗಳನ್ನು ತಾಳೆ ನೋಡುವುದ... ಅಧಿಕೃತ ಒಪ್ಪಿಗೆ ನೀಡಿದೆ! ಪರಿಣಾಮವಾಗಿ ಮೋದಿ... ಬಯೊಮೆಟ್ರಿಕ್ಸ್ ಅಂದು ಆತ ವಿರೋಧಿಸುತ್ತಿ... ಎನ್‌ಪಿಆರ್‌ಗೂ ಲಭ್ಯವಾಗಿದೆ! ಅರ್ಥಾತ್ ಅಂ... ಅಪಥ್ಯವೆನಿಸಿದ್ದು ಇಂದು ಪಥ್ಯವಾಗಿದೆ! ಅಂತೂ ರಾಜಕಾರಣದ 'ಜುಮ್ಲಾ'ದಲ್ಲಿ ಒಟ್ಟಾರೆಯಾಗಿ ಮೋ... ಹೋದವರೆಂದರೆ ಬಡಪಾಯಿ ಮತದಾರರು.

ಲಂಕೇಶ್ ವಾರ್ಷಿಕ ಚಂದಾ ವಿವರ


ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ.

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ.
ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು–560 004.

ಹೆಚ್ಚಿನ ಮಾಹಿತಿಗಾಗಿ: 9880302817 / 080-26676427



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸ್ವರ್ಗ ಮತ್ತು ನರಕಗಳ ಮೂಲ

ಯಾವುದೇ ಸ್ಥಾಪಿತ ಧರ್ಮವಾಗಲಿ, ಯಾವುದೇ ತದ ಕವಲುಗಳಾಗಲಿ ಹುಟ್ಟುವುದೇ ಸಂಘರ್ಷದ ವಾಗಿ. ಆಯಾ ಕಾಲಘಟ್ಟದ ಮೌಢ್ಯ, ಧಾರ್ಮಿಕ ಥವಾ ಸಾಂಪ್ರದಾಯಕ ವಿಧಿವಿಧಾನಗಳು ಸಮಂಜಸವಾಗಿಲ್ಲ ದು ಎತ್ತಿದ ದನಿಗಳು ಮತ್ತು ಪರ್ಯಾಯ ಮಾರ್ಗಗಳು ಸ ಧರ್ಮಗಳಾದವು ಅಥವಾ ಹೊಸ ಪಂಥಗಳಾದವು. ಪಿತ ವ್ಯಕ್ತಿ ಅಥವಾ ಸಮೂಹದ ಜೀವಿತಾವಧಿಯ ತರದ ಕಾಲಘಟ್ಟಗಳಲ್ಲಿ ಅದೇ ಹೊಸ ಪಂಥದ ಸದಸ್ಯರೇ ಟ್ಟರ್ ಧೋರಣೆಗಳನ್ನು ಅನುಸರಿಸುತ್ತಾ, ತಮ್ಮದೇ ಪಂಥ ಥವಾ ಧರ್ಮ ಉದಯಿಸಿದ್ದ ವೈಶಾಲ್ಯದ ಕಾರಣವನ್ನು ದು ಚೌಕಟ್ಟಿಗೆ ಒಳಪಡಿಸಿ ಸಂಕುಚಿತಗೊಳಿಸುತ್ತಾರೆ. ಸತರ ಆಕರ್ಷಣೆ ಅಥವಾ ಅದರಲ್ಲಿರುವ ವ್ಯಕ್ತಿಗಳ ಲಿನ ತಮ್ಮ ಗೌರವದಿಂದ ಪಂಥವನ್ನು ಪ್ರವೇಶಿಸಿದ್ದರೂ ಯ ಸಾಂಪ್ರದಾಯಕ ಮನಸ್ಥಿತಿಗಳು ಬದಲಾಗಿರುವುದಿಲ್ಲ, ಗಾಗಿ ಹಳೆಯ ಪಂಥದಲ್ಲಿದ್ದಂತಹ ಮನಸ್ಥಿತಿಗಳನ್ನು ಸದರಲ್ಲೂ ಮುಂದುವರಿಸುತ್ತಾರೆ. ಮುಖ್ಯವಾಗಿ ಅವರಿಗೆ ಪಕರ ಮೂಲ ಆಶಯವೇ ತಿಳಿದಿರುವುದಿಲ್ಲ.

ಸ್ಯ ನಿಷ್ಠೆಯನ್ನು, ನ್ಯಾಯಪರತೆಯನ್ನು ಕಾದುಕೊಳ್ಳುತ್ತಾ ಬರುವುದು ಕೂಡ ನೇಮವೇ. ಆದೇ ಇಲ್ಲಿ ನಾವು ಸ್ಪಷ್ಟತೆಯನ್ನು ಕಂಡುಕೊಳ್ಳಬೇಕಾಗಿರುವುದು. ಯಾವ ನೇಮವನ್ನು ಮಾಡಿಕೊಂಡಿದ್ದೇವೆ. ಅದರ ಆಶಯವೇನು? ಅದು ಯಾವ ಪರವಾಗಿದೆ? ಅದು ವಿಶಾಲಾರ್ಥದಲ್ಲಿ ಸಮಾಜಮುಖಿಯಾಗಿದೆಯೋ, ಜೀವನ್ಮುಖಿಯಾಗಿದೆಯೋ, ಜೀವಪರವಾಗಿದೆಯೋ, ತಮ್ಮದೇ ಪಂಥದ ಪ್ರತಿಷ್ಠೆ ಅಥವಾ ಅಹಂಭಾವದ ಧೋರಣೆಯಾಗಿದೆಯೋ, ಶ್ರೇಷ್ಠತೆಯ ವ್ಯಸನದಿಂದ ಕೂಡಿದೆಯೋ; ಇಂಥವನ್ನೆಲ್ಲಾ ತಿಳಿಯಬೇಕಾದರೆ ಒಬ್ಬಾತನಿಗೆ ವ್ಯಕ್ತಿಗತವಾಗಿ ಪರಾಮರ್ಶೆ ಮಾಡಿಕೊಳ್ಳುವ ಗುಣವಿರಬೇಕು. ತಾನೇ ನಿರ್ಧಾರಗಳನ್ನು ತೆಗೆದುಕೊಳ್ಳುವಂತಹ ಆತ್ಮವಿಶ್ವಾಸದಿಂದ ಕೂಡಿರುವ ಧೈರ್ಯವಿರಬೇಕು. ತನ್ನ ಒಲವು, ನಿಲುವುಗಳಲ್ಲಿ ಸ್ಪಷ್ಟತೆ ಇದ್ದ ಪಕ್ಷದಲ್ಲಿ ಯಾವುದೇ ಧರ್ಮ, ಮತ ಅಥವಾ ಪಂಥದಲ್ಲಿದ್ದರೂ ಅದರ ಕೆಲವು ಅಂಶಗಳನ್ನು ಒಪ್ಪುವ ಅಥವಾ ನಿರಾಕರಿಸುವ, ಕೆಲವನ್ನು ಅಚ್ಚುಕಟ್ಟಾಗಿ ಪಾಲಿಸುವ ಅಥವಾ ತಿರಸ್ಕರಿಸುವ ನಿರ್ಧಾರಗಳನ್ನು ತಾನೇ ತೆಗೆದುಕೊಳ್ಳುತ್ತಾನೆ. ಅಲ್ಲದೇ ತನ್ನ ಧೋರಣೆ ಮತ್ತು ಆಶಯದ ಬಗ್ಗೆ ಸ್ಪಷ್ಟತೆಯನ್ನು ತಳೆದಿರುವ ಕಾರಣ ಕಾಳು ಹೊಟ್ಟುಗಳನ್ನು ಬೇರ್ಪಡಿಸುವ, ಅಗತ್ಯ ಮತ್ತು ಅನಗತ್ಯಗಳನ್ನು ಸ್ಪಷ್ಟವಾಗಿ ನೋಡುವಂತಹ ದೃಷ್ಟಿಯನ್ನು ಹೊಂದಿರುತ್ತಾರೆ. ಇದರಿಂದಾಗಿಯೇ ಸ್ಥಾಪಿತ ಧರ್ಮಗಳಲ್ಲಿದ್ದು ದೇವರಿಗೆ ವಿಮುಖವಾಗಿ ಮಾಡುವಂತಹ ಕೆಲಸ "ದೋಸೆ ಮುಗುಚಿ ಹಾಕಿದಂತೆ" ಈಗಲೇ, ಈ ಒಂದು ಜನ್ಮದಲ್ಲೇ ಅನುಭವಕ್ಕೆ ಬರುತ್ತದೆ ಎಂಬ ನಂಬಿಕೆ ಗಾಢವಾಗಿದೆ. ಇದು ನೇರ ಕರ್ಮ ಸಿದ್ಧಾಂತದ ಪ್ರಭಾವ.


ಕರ್ಮ ಸಿದ್ಧಾಂತದ ಬೇರು

ಕರ್ಮ ಸಿದ್ಧಾಂತವು ಭಾರತದ ಕೊಡುಗೆ ಎಂದು ಬಹಳಷ್ಟು ವಿದ್ವಾಂಸರು ಹೇಳುವುದುಂಟು. ಹಾಗೆಯೇ ಸಾಮಾನ್ಯರಲ್ಲಿ ಒಂದು ನಂಬುಗೆ ಉಂಟು. ಆದರೆ ಹಾಗೇನೂ ಇಲ್ಲ. ಕರ್ಮ ಸಿದ್ಧಾಂತದ ಬೇರು ಪ್ರಪಂಚದ ಶ್ರದ್ಧಾಕ್ಷೇತ್ರದ ಮೂಲೆ ಮೂಲೆಯಲ್ಲಿದೆ. ಎಲ್ಲಾ ಧಾರ್ಮಿಕತೆಗಳಲ್ಲೂ, ಸಂಸ್ಕೃತಿ, ಆಧ್ಯಾತ್ಮಿಕತೆಗಳಲ್ಲೂ ಕರ್ಮ ಸಿದ್ಧಾಂತವು ಒಂದಿಲ್ಲೊಂದು ರೀತಿಯಲ್ಲಿ ನುಸುಳಿಕೊಂಡಿವೆ. ಆದರೆ ಈ ಕರ್ಮ ಸಿದ್ಧಾಂತದ ಮೂಲವನ್ನು ಮನಸ್ಸಿನ ಮೂಲ ದೊಂದಿಗೆ ಗುರುತಿಸಿದವನು ಮತ್ತು ಸಮೀಕರಿಸಿದವನು ಬುದ್ಧ.

ಭಗವದ್ಗೀತೆಯ ಕರ್ಮಯೋಗದಲ್ಲಿ ಮತ್ತು ಇತರ ಅಧ್ಯಾಯಗಳಲ್ಲಿ ಕರ್ಮಸಿದ್ಧಾಂತವನ್ನು ಬಹಳ ಸೂಕ್ಷ್ಮವಾಗಿ ಮತ್ತು ಯೋಗ್ಯವಾಗಿ, ಕೆಲವೊಮ್ಮೆ ಆಗ್ರಹಕ್ಕೊಳಗಾಗಿ ಚಿತ್ರಿಸಿದ್ದಾರೆ. ಅವು ನಿಜಕ್ಕೂ ಅಧ್ಯಯನ ಯೋಗ್ಯ. ಆದರಿಂದ ನಮ್ಮ ಪೂರ್ವಿಕರ ಒಲವು ನಿಲುವುಗಳು ಹಾಗೂ



ಸಾವಿರಾರು ವರ್ಷಗಳ ಕಾಲ ಆಳಿದೆ ಎಂಬುದು ಸುಳ್ಳಲ್ಲ. ಈ ಪರಿಕಲ್ಪನೆಗಳನ್ನು ಒಮ್ಮಿಂದೊಮ್ಮೆಲೇ ಸುಳ್ಳು ಎಂದು ತಳ್ಳಿ ಹಾಕಿಬಿಡುವುದರಿಂದ ಸಮಸ್ಯೆಯೇ ಇಲ್ಲ, ಕೆಲಸವೇ ಇಲ್ಲ. ಆದರೆ, ಇಂತಹದ್ದೊಂದು ಸುಳ್ಳು ಏಕಾಗಿ ಮತ್ತು ಹೇಗೆ ಇಷ್ಟೊಂದು ಕಾಲ, ಅಷ್ಟು ವ್ಯಾಪಕವಾಗಿ ಸಮೂಹಗಳಲ್ಲಿ ಜೀವಂತವಾಗಿತ್ತು, ಅವರನ್ನು ಆಳುತ್ತಿತ್ತು, ಅವರ ಮನಸ್ಸುಗಳನ್ನು, ಬದುಕುಗಳನ್ನು, ಶಕ್ತಿಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿತ್ತು ಎಂದು ವಿಚಾರಿಸಲು ಹೋದರೆ






ಬೌದ್ಧ ಜೈನ, ಕ್ರೈಸ್ತ ಇಸ್ಲಾಂ, ಲಿಂಗಾಯತ ಮೊದಲಾದ ರ್ಮಗಳು, ಹಿಂದೂ ಜೀವನ ಪದ್ಧತಿಯ ಪಂಥಗಳು ಲ್ಲವೂ ಇದೇ ರೀತಿಯಲ್ಲಿ ಸೊರಗಿವೆ. ಜೈನ ಮತ್ತು ಂಗಾಯತ ಮೊದಲ್ಗೊಂಡು ಕೆಲವು ಧರ್ಮಗಳು ತನ್ನ ಮೂಲ ಆಶಯವನ್ನು ಜೀವಂತವಾಗಿರಿಸಿಕೊಳ್ಳಲು ಫಲವಾಗಿವೆ.

ಸಾಮಾನ್ಯವಾಗಿ ಧರ್ಮಗಳಲ್ಲಿ ಆಶಯದ ಅನುಷ್ಠಾನಕ್ಕೆ ಗತ್ಯವಿರುವ ನೇಮ, ನಿಯಮಗಳನ್ನು ಸಂಪ್ರದಾಯ ಳನ್ನಾಗಿಸಿ, ಅವುಗಳನ್ನು ಉಳಿಸಿಕೊಳ್ಳಲು ಅವುಗಳ ಬಗ್ಗೆ ಯ ಮತ್ತು ಆಸೆಗಳನ್ನು ಹುಟ್ಟುಹಾಕುವುದು ಆ ಂಪ್ರದಾಯಸ್ಥ ಮನಸ್ಥಿತಿಗಳ ಕೆಲಸ. ಭಯ ಮತ್ತು ಆಸೆಗಳನ್ನು ಟ್ಟು ಹಾಕಲು ಅವರು ಬಳಸುವ ತಂತ್ರವೇ ಕಥನಕಲೆ.

ಸಾಮಾನ್ಯವಾಗಿ ಕಥನ ನಿರೂಪಣೆಗಳಿಗೆ ಸಾಮಾನ್ಯರ ನಸ್ಸುಗಳು ಸೋಲುತ್ತವೆ. ಅದರಲ್ಲೂ ಆ ನಿರೂಪಣೆಗಳು ಾವನಾತ್ಮಕವಾಗಿ ನಾಟಕೀಯವಾಗಿ ಪ್ರಸ್ತುತವಾಗಿಬಿಟ್ಟರಂತೂ ವರು ಸಂಪೂರ್ಣ ಮರುಳಾಗಿಬಿಡುತ್ತಾರೆ. ತಮ್ಮದೇ ದುಃಕಿನ ಪ್ರತಿಫಲನದಂತೆ ಆರಂಭವಾಗುವ ಆ ಕಥೆಗಳು ೂರದ್ದೋ ಆಗಿರುತ್ತವೆ. ಆದರೆ ನೋವು, ಸಂಕಟ, ಕಷ್ಟಗಳ ಮ್ಯತೆ ಇರುತ್ತದೆ. ಆ ಕಥೆಗಳಲ್ಲಿ ಅದ್ಯಾವುದೋ ಾರ್ಗದಿಂದ ಆ ಕಷ್ಟನೋವುಗಳು ಪರಿಹಾರವಾಗುತ್ತವೆ. ಾಗಾಗಿ ತಾವೂ ಅಂತೆಯೇ ವ್ರತವನ್ನು ಮಾಡಬೇಕು ಂದು ಜನ ತಿಳಿಯುತ್ತಾರೆ. ವ್ರತ ಎಂದರೇನೇ ನೇಮ. ಯಮವನ್ನು ಅಚ್ಚುಕಟ್ಟಾಗಿ ಪಾಲಿಸುವುದು. ಇದರಿಂದ ಾಂಪ್ರದಾಯಿಕ ಚೌಕಟ್ಟುಗಳು ಬಲಗೊಳ್ಳುತ್ತಾ ಬರುವವು.

ಹಾಗೆಂದು ನೇಮ ನಿಷ್ಠೆಗಳನ್ನು ನಕಾರಾತ್ಮಕವಾಗಿ ನೋಡುವ ಗತ್ಯವಿಲ್ಲ. ಯಾವುದೇ ಸಂದರ್ಭದಲ್ಲಿ ಕೇಡಿನೊಂದಿಗೆ, ಸತ್ಯದೊಂದಿಗೆ, ಪರಿಸ್ಥಿತಿಗೆ ಅನುಗುಣವಾಗಿ ವ್ಯವಸ್ಥೆಯೊಂದಿಗೆ ಾಜಿ ಮಾಡಿಕೊಳ್ಳದೇ ತನ್ನ ಜೀವನ್ಮುಖಿ ಧೋರಣೆಯನ್ನು,



ಅದೇ ಧರ್ಮದ ನೇಮ ನಿಷ್ಠೆ ಶ್ರದ್ಧೆಗಳನ್ನು ಹೊಂದಿದ್ದರೂ ಅವರು ಕ್ರಾಂತಿಕಾರಿಗಳಂತೆ ಕಾಣುತ್ತಾರೆ. ಏಕೆಂದರೆ ಬರಿಯ ಸಾಂಪ್ರದಾಯಿಕ ಮನಸ್ಥಿತಿಗಳ ಸಮೂಹವು ನಡೆದುಕೊಳ್ಳುವುದಕ್ಕಿಂತ ಭಿನ್ನವಾಗಿ ಇವರು ಕಾಣುತ್ತಾರೆ. ಅವರನ್ನು ಒಪ್ಪಬಹುದು, ನಿರಾಕರಿಸಬಹುದು, ನಿವಾರಿಸಿಯೇಬಿಡಬಹುದು. ಅದು ಸಾಂಪ್ರದಾಯಕ ಮನಸ್ಥಿತಿಯವರ ರೋಗಗ್ರಸ್ತದ ಗಾಢತೆ ಮತ್ತು ಪ್ರಭಾವಗಳ ಮೇಲೆ ಆಧಾರಿತವಾಗಿರುತ್ತದೆ. ಸ್ಪಷ್ಟವಾಗಿ ನಮಗೆ ಎಲ್ಲಾ ಧರ್ಮಗಳಲ್ಲೂ ಕಾಣಬರುವುದೇನೆಂದರೆ ಅದೇ ಧರ್ಮದ ನೇಮವನ್ನು ಆಚರಿಸುತ್ತಲೇ ಅದೇ ಧರ್ಮದ ಸಾಂಪ್ರದಾಯಿಕ ಧೋರಣೆಗಳ ಬಗ್ಗೆ ಧ್ವನಿ ಎತ್ತಿರುವಂತಹದ್ದು. ಆದರೆ ಇವರ ಸಂಖ್ಯೆ ಬಹಳ ಕಡಿಮೆ. ಕೆಲವೊಮ್ಮೆ ಇಲ್ಲವೇ ಇಲ್ಲ ಎಂದೆನಿಸುವಷ್ಟು ಕಡಿಮೆ.

ಸ್ವರ್ಗ ನರಕಗಳ ಜನಕರು ಸಂಪ್ರದಾಯವಾದಿಗಳು

ಮೂಲಭೂತ ಆಶಯವನ್ನು ಉಳಿಸಿಕೊಳ್ಳಲು ಹಾಕಿಕೊಟ್ಟಿರುವ ಮಾರ್ಗವನ್ನು ಬಿಡಲೇಬಾರದೆಂಬಂತಹ ವಿಚಾರಕ್ಕೆ ಬದ್ಧರಾಗಿರುವ ಕಾರಣದಿಂದ ಸಂಪ್ರದಾಯಕ್ಕೆ ಶರಣುಹೋಗುವುದು. ಇತರರನ್ನು ಅದರ ತೆಕ್ಕೆಯಲ್ಲಿ ಸೆಳೆಯಲು ಅಥವಾ ಈಗಾಗಲೇ ಇರುವವರು ಬಿಟ್ಟು ಹೋಗದಿರಲು ಸ್ವರ್ಗದ ಗಳಿಕೆ ಮತ್ತು ನರಕದ ಭೀತಿಯನ್ನು ಇಟ್ಟಿರುವವರು.

ಕನ್ನಡದ 'ನಾಗರಹೊಳೆ' ಚಿತ್ರದಲ್ಲಿ "ಇಲ್ಲೇ ಸ್ವರ್ಗ, ಇಲ್ಲೇ ನರಕ ಮೇಲೆ ಇಲ್ಲ ಸುಳ್ಳು. ಹುಟ್ಟು ಸಾವು ಎರಡರ ಮಧ್ಯೆ ಮೂರು ದಿನದ ಬಾಳು" ಎಂಬ ಹಾಡು ಬಹಳ ಜನಪ್ರಿಯ. ಈ ಸ್ವರ್ಗ ಮತ್ತು ನರಕ ಸುಳ್ಳು ಎಂಬ ಧೋರಣೆ ತಳೆಯುವಂತಹ- ಇಂತಹದ್ದೊಂದು ವಿಚಾರ ಬರಲು ಬಹಳಷ್ಟು ಕಾಲ ಬೇಕಾಯ್ತು. ಈಗ, ಈ ಕಾಲಘಟ್ಟದಲ್ಲಂತೂ ಸ್ವರ್ಗ ಮತ್ತು ನರಕದ ಭಯ ಬಹುತೇಕ ಯಾರಿಗೂ ಇಲ್ಲ, ಈಗ ಮಾಡಿದ್ದು ಈಗಲೇ ಎಂಬ ಮನಸ್ಥಿತಿಗೆ ತಲುಪಿಯಾಗಿದೆ. ಮರಣಾನಂತರದ ಜೀವನದಲ್ಲಿ, ದೇವರ ಸಾಮ್ರಾಜ್ಯದಲ್ಲಿ ಎಂದೇನೆಲ್ಲಾ ಯಾರಾದರೂ ಸತ್ತಾಗ ಹೇಳಬಹುದು. ಅದು ಬರಿಯ ಆಗಿನ ನಂಬಿಕೆಯ ಉಳಿಕೆಯ ಮಾತಾಗಿದೆಯೇ ಹೊರತು ಯಾರಿಗೂ ಅದರ ಮೇಲೆ ಗಾಢವಾದ ನಂಬಿಕೆಯೇನೂ ಅಷ್ಟಿಲ್ಲ, ಕನಿಷ್ಠಪಕ್ಷ ಸಂಖ್ಯಾಸಾರು ದೃಷ್ಟಿಯಿಂದಾದರೂ ಈ ಹಿಂದೆಲ್ಲಾ ಇರುವಷ್ಟು ಪ್ರಮಾಣದಲ್ಲಿ ಖಂಡಿತ ಇಲ್ಲ. ಆದರೆ, ಕಾಯುವ, ಮುನಿಯುವ ದೇವರ ಕಲ್ಪನೆ ಮಾತ್ರ ಜೀವಂತವಾಗಿದೆ. ಅದೂ ನಾವು ಮಾಡುವ ಭಕ್ತಿ ಅಥವಾ ಗೀತೆಯನ್ನು ತಮ್ಮ ಬಳಕೆಗೆ ತಂದುಕೊಳ್ಳುವಂತಹ ಮನಸ್ಥಿತಿಯವರ ಗುಪ್ತ ಆಶಯ ಅಥವಾ ಗೀಳುಗಳೂ ನಮಗೆ ಅರಿವಾಗುತ್ತಾ ಹೋಗುತ್ತದೆ. ಅಂತಹ ಅರಿವಿಗೆ ತೆರೆದುಕೊಳ್ಳುವುದರಿಂದಲೇ ಮಾರ್ಗಕ್ಕೆ ಸ್ಪಷ್ಟತೆಯೂ, ಗಮ್ಯಕ್ಕೆ ನಿಖರತೆಯೂ ಲಭ್ಯವಾಗುತ್ತದೆ.

ಅತ್ಯಂತ ಆಶ್ಚರ್ಯದ ಸಂಗತಿಯೆಂದರೆ ಸ್ವರ್ಗನರಕಗಳ ಪರಿಕಲ್ಪನೆ ಮತ್ತು ನರಕದಲ್ಲಿ ಇರುವಂತಹ ಒಂದು ಕೆಟ್ಟದಾದ ನದಿಯ ಪರಿಕಲ್ಪನೆಯು ವಿಶ್ವದ ಬಹುಪಾಲು ಎಲ್ಲಾ ಸಂಸ್ಕೃತಿಗಳಲ್ಲಿ ಇರುವುದು. ಹಾಗೆಯೇ ಬಹುಪಾಲು ಪ್ರಾಚೀನ ಧಾರ್ಮಿಕ ಅಥವಾ ಆಧ್ಯಾತ್ಮಿಕ ಸಿದ್ಧಾಂತಗಳಲ್ಲಿ ಮತ್ತು ಪೌರಾಣಿಕ ನಿರೂಪಣೆಗಳಲ್ಲಿ ಜಗತ್ತಿನ ಸೃಷ್ಟಿ ಮತ್ತು ಪ್ರಳಯಗಳ ಬಗ್ಗೆ ಜಿಜ್ಞಾಸೆಗಳಿವೆ. ಅಂದರೆ ಎಲ್ಲರೂ ಒಂದು ಉತ್ಪತ್ತಿ ಮತ್ತು ನಾಶದ ಬಗ್ಗೆ ಅವಧಾನವನ್ನು ಹೊಂದಿದ್ದು, ಪ್ರಸ್ತುತ ಸ್ಥಿತಿಯಲ್ಲಿ ಹೆಚ್ಚಿನ ಮಟ್ಟದ ಗಮನ ನೀಡುವ ಅಭಿಲಾಷೆಯನ್ನು ಹೊಂದಿದ್ದರು. ಅದರಿಂದಾಗಿಯೇ ತಮ್ಮ ಕಣ್ಣಿಗೆ ಕಾಣುವ ಜೀವಸೃಷ್ಟಿಯ ಹಿಂದಿನದರ ಬಗ್ಗೆ ಮತ್ತು ಜೀವನಾಶದ ನಂತರದ ಬಗ್ಗೆ ಅತೀವ ಆಸಕ್ತಿಯನ್ನೂ ಹೊಂದಿದ್ದಲ್ಲದೇ, ಅವರ ಕಾಲಘಟ್ಟದ ದಾರ್ಶನಿಕರು, ಬುದ್ಧಿವಂತರು, ಸೂಕ್ಷ್ಮವಿಚಾರವಾದಿಗಳು ಹೇಳುವುದನ್ನು ಶ್ರದ್ಧಾಭಕ್ತಿಗಳಿಂದ ಕೇಳಿದ್ದೇ ಅಲ್ಲದೇ ಒಪ್ಪಿರುತ್ತಿದ್ದರು.

ಜಡ್ಜ್‌ಮೆಂಟ್ ಡೇ

ಸ್ಪಷ್ಟವಾಗಿ ದಾಖಲಾಗಿರುವ ಯಾವುದೇ ಧಾರ್ಮಿಕ ಗ್ರಂಥಗಳಲ್ಲಿ ತೀರ್ಮಾನದ ದಿನ (ಜಡ್ಜ್‌ಮೆಂಟ್ ಡೇ) ಎಂಬುದು ಜಗತ್ತಿಗೂ ಇರುತ್ತದೆ. ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಗೂ ಕೂಡ ಆ ಜಡ್ಜ್‌ಮೆಂಟ್ ಅವಧಿ ಬಂದಿರುತ್ತದೆ. ಅದೇ ಅವನ ಪಾಪಪುಣ್ಯಗಳ ವಿಚಾರಣಾ ದಿನವೂ ಹೌದು. ಅವನು ಮಾಡಿರುವ ಪಾಪಪುಣ್ಯಗಳ ಅನುಸಾರವಾಗಿ ಅವನು ಸ್ವರ್ಗಕ್ಕೆ ಅಥವಾ ನರಕಕ್ಕೆ ಹೋಗುವನು. ಹಾಗೆಯೇ ಎರಡನ್ನೂ ತೂಕ ಮಾಡಿ ನೋಡಲು ಮಾಡಿರುವ ಪಾಪಕ್ಕಿಂತ ಪುಣ್ಯವೇ ಹೆಚ್ಚಾಗಿದ್ದ ಪಕ್ಷದಲ್ಲಿ ಸ್ವರ್ಗಕ್ಕೆ ಹೋಗುವನು. ಕೆಲವೊಮ್ಮೆ ಮಾಡಿರುವ ಪಾಪಕ್ಕೆ ಶಿಕ್ಷೆ ಅನುಭವಿಸುವಂತೆ ಮಾಡಿ, ಆ ಪಾಪಕರ್ಮದ ಫಲವನ್ನು ಕಳೆದುಕೊಂಡು ಸ್ವರ್ಗಕ್ಕೆ ಕಳುಹಿಸಲಾಗುವುದು. ಕೆಲವೊಮ್ಮೆ ಮಾಡಿದ ಪಾಪಗಳನ್ನೆಲ್ಲಾ ಒಮ್ಮಿಂದೊಮ್ಮೆಲೇ ಶುದ್ಧಗೊಳಿಸಿ, ಆತ್ಮವನ್ನು ಶುದ್ಧಾತ್ಮವನ್ನಾಗಿಸಿ ಏಕ್‌ದಂ ಸ್ವರ್ಗಕ್ಕೆ ಕಳುಹಿಸುವಂತಹ ಕೆಲವು ಸೂಕ್ಷ್ಮ ತಂತ್ರಗಾರಿಕೆಗಳು ಉಂಟು. ಅವೇನೇ ಇರಲಿ, ಈ ಪಾಪ ಪುಣ್ಯ ಮತ್ತು ಸ್ವರ್ಗ ನರಕಗಳ ಪರಿಕಲ್ಪನೆಯು ಮನುಷ್ಯನನ್ನು ಅತ್ಯಂತ ಸುದೀರ್ಘ ಕಾಲ, ಬಹಳ ಸೂಕ್ಷ್ಮವಾದ ವಿಷಯಗಳು ಅನಾವರಣಗೊಳ್ಳುತ್ತಾ ಹೋಗುವವು. ಅದೇನೇ ಆಗಲಿ, ಒಬ್ಬ ವ್ಯಕ್ತಿಯ ಜೀವನಾವಧಿಯಲ್ಲಿ ವಿಕಾಸದ ಘಟ್ಟಗಳನ್ನು ಗುರುತಿಸಿಕೊಳ್ಳುತ್ತಾ, ಹಿಂದಕ್ಕೆ ನಡೆಯುತ್ತಾ ಭೂತದಲ್ಲಿ ಆದ ಪ್ರಭಾವಗಳನ್ನು ಗುರುತಿಸುವಷ್ಟೇ ಸುಂದರವಾದ ಮತ್ತು ಅಗತ್ಯವಾದ ಕೆಲಸ ಇದಾಗಿರುತ್ತದೆ.

ಸ್ವರ್ಗ ಮತ್ತು ನರಕಗಳ ಪರಿಕಲ್ಪನೆಗಳನ್ನು ಉಪಚರಿಸಿದ ಬಗೆಗಳಲ್ಲಿ ನಾನಾ ರೀತಿಗಳಿವೆ. ಆದರೆ ಪ್ರಾಚೀನ ಸಮಾಜಗಳು ಅವನ್ನು ಸ್ವೀಕರಿಸಿದ್ದವು. ಅವನ್ನು ಗ್ರಹಿಸುತ್ತಿದ್ದ ರೀತಿಗಳಲ್ಲಿ ಮತ್ತು ಪರಿಗಣಿಸುತ್ತಿದ್ದ ಮತಿಗಳಲ್ಲಿ ವೈರುಧ್ಯತೆಗಳಿರುತ್ತಿದ್ದವು.

ನಾನು ಸಣ್ಣವನಿರುವಾಗ ಅನೇಕ ವಿಷಯಗಳನ್ನು ಕೇಳುತ್ತಿದ್ದೆ.

"ಯಾರಾದರೂ ಸತ್ತಾಗ ಅತಿಯಾಗಿ ಅಳಬಾರದು. ನಮ್ಮೆಲ್ಲರ ಕಣ್ಣೀರು ಸತ್ತವರ ಸ್ವರ್ಗಾವರೋಹಣಕ್ಕೆ ಪ್ರವಾಹವಾಗಿ ಅಡ್ಡ ಬಂದು ತೊಡಕಾಗುವುದು."

"ವಿಚಾರಣಾ ಸ್ಥಳದಿಂದ (ಯಮಲೋಕ) ಸ್ವರ್ಗಕ್ಕೆ ಹೋಗುವ ದಾರಿ ಬಹಳ ಸೂಕ್ಷ್ಮ. ಬೆಕ್ಕು ಅದನ್ನು ಕಡಿದು ಹಾಕಿದರೆ, ನಾಯಿಯು ತನ್ನ ಬಾಲದಿಂದ ದಾರಿಯು ತುಂಡಾಗದಂತೆ ಅಥವಾ ನಡೆಯುವಿಕೆಗೆ ತೊಡಕಾಗದಂತೆ ನೋಡಿಕೊಳ್ಳುತ್ತದೆ."

"ಸತ್ತಮೇಲೆ ಮಾಡುವ ಸರಿಯಾದ ಸಂಸ್ಕಾರದಿಂದ, ಅವರ ಹೆಸರಿನಲ್ಲಿ ಮಾಡುವ ದಾನಧರ್ಮಗಳ ಪುಣ್ಯ ಸಂಚಯದಿಂದ ವಿಚಾರಣೆಯಲ್ಲಿರುವ ಮೃತವ್ಯಕ್ತಿಯ ಖಾತೆಗೆ ಪುಣ್ಯವು ಜಮಾಆಗಿ ಆವನು ಸ್ವರ್ಗಕ್ಕೆ ಹೋಗುವಂತಹ ಅರ್ಹತೆಗಳನ್ನು ಪಡೆಯುತ್ತಾನೆ."

"ದೇವಸ್ಥಾನದಲ್ಲಿ ದೇವರ ದುಡ್ಡನ್ನು ಕದಿಯುವವನು, ದೈವೀಕಾರ್ಯದಲ್ಲಿ ವಂಚಿಸಿ ಧನಸಂಗ್ರಹ ಮಾಡುವವನು ಮುಂದಿನ ಜನ್ಮದಲ್ಲಿ ನಾಯಿಯಾಗುತ್ತಾನೆ." (ನಾನು ಸಣ್ಣವನಿದ್ದಾಗ ಇದನ್ನು ತಿಳಿದ ಮೇಲೆ ಬಹಳ ಗಂಭೀರವಾಗಿ ನಂಬಿದ್ದೇ ಅಲ್ಲದೇ ಎದುರಾಗುವ ಪ್ರತಿ ನಾಯಿಗೂ ಯಾವ ದೇವಸ್ಥಾನದ ಪೂಜಾರಿಯಾಗಿದ್ದೆ? ಯಾವ ದೇವರ ಅರ್ಚಕನಾಗಿದ್ದೆ? ಎಂದು ವಿಚಾರಿಸುತ್ತಿದ್ದೆ)

"ಕಬ್ಬಿಣವನ್ನು ಕದ್ದವನು ಮುಂದಿನ ಜನ್ಮದಲ್ಲಿ ಬಿಳಿಯ ಮಚ್ಚೆಗಳನ್ನು ಹೊಂದಿರುವಂತಹ ತೊನ್ನಿನ ರೋಗವನ್ನು ಪಡೆಯುತ್ತಾನೆ." ಇತ್ಯಾದಿ. ಈ ಬಗೆಯ ಮಾತುಗಳೆಲ್ಲವುದ ಹಿಂದೆ ಕಾರಣಗಳಿವೆ, ಪ್ರಭಾವಗಳಿವೆ ಮತ್ತು ಉದ್ದೇಶಗಳೂ ಸ್ಪಷ್ಟವಾಗಿವೆ. ■

ದಲಿತರಿಗೆ ಸ್ವಾಭಿಮಾನ ಬರುವುದು ಎಂದು

ಸಂಘ ಪರಿವಾರದವರು ದಿನಕ್ಕೊಂದು ಹೊಸ ಷಡ್ಯಂತ್ರಗಳ ಬಗ್ಗೆ ಹೇಳಿಕೆ ನೀಡಿ ದಲಿತರನ್ನು ಮತ್ತು ಅಲ್ಪ ಸಂಖ್ಯಾತರನ್ನು ಅವಮಾನಿಸುತ್ತಲೇ ಇರುತ್ತಾರೆ. ಆದರೆ ದಲಿತ ಸಂಘಟನೆಗಳು ಬಾಯಿಮುಚ್ಚಿ ಕುಳಿತಿವೆ. ವಿಪರ್ಯಾಸವೆಂದರೆ ನಮ್ಮ ಕರ್ನಾಟಕದಲ್ಲಿ ಮನುವಾದಿ ಸಂಘ ಪರಿವಾರ ದೊಳಗೂ ಒಂದು ದಲಿತರ ಅಂಗಸಂಸ್ಥೆ ಹುಟ್ಟಿಕೊಂಡಿದೆ. ಹಿಂದೂ ಮಹಾಸಭಾದಂತೆ ಅದಕ್ಕೆ ದಲಿತ ಮಹಾಸಭಾ ಎಂದು ಹೆಸರಿಡಲಾಗಿದೆ. ಕೆಲವು ಸಮಯಸಾಧಕ ದಲಿತರು ಮನುವಾದಿಗಳೊಂದಿಗೆ ಕೈಜೋಡಿಸಿ ಮನುವಾದದ ಬದ್ಧವೈರಿಯಾದ ಡಾ.ಅಂಬೇಡ್ಕರರಿಗೇ ನೇರ ಅವಮಾನ ಮಾಡುತ್ತಿದ್ದಾರೆ.

ನಿನ್ನೆ ಲಕ್ನೋದಲ್ಲಿ ಯೂಪಿಯ ಮಹಿಳಾ ಮೋರ್ಚಾದ ನಾಯಕಿ ಮಧು ಮಿಶ್ರ ಎಂಬ ಕೋಣಿಪಿ ಹೇಳಿದ್ದೇನು ಗೊತ್ತೇ? "ಇಂದು ಸಂವಿಧಾನದ ನೆರವಿನೊಂದಿಗೆ ನಮ್ಮನ್ನು ಆಳುತ್ತಿರುವವರು ಹಿಂದೊಮ್ಮೆ ನಮ್ಮ ಚಪ್ಪಲಿಯನ್ನು ಶುಚಿಗೊಳಿಸುತ್ತಿದ್ದರು. ಒಂದು ಕಾಲದಲ್ಲಿ ನಾವು ಈ ಜನರ ನೆರಳು ಸಹ ನಮ್ಮ ಮೇಲೆ ಬಿದ್ದರೂ ಸಹಿಸುತ್ತಿರಲಿಲ್ಲ. ಆದರೂ ಮುಂದೊಂದು ದಿನ ನಮ್ಮ ಮಕ್ಕಳು ಇವರನ್ನು ಜೀ ಹುಜೂರ್ ಎಂದು ಕರೆಯ ಬೇಕಾಗಬಹುದು. ಹಾಗಾಗಿ ದಲಿತರಂತಹ ಹಿಂದುಳಿದವರ ಅಭಿವೃದ್ಧಿಯ ವಿರುದ್ಧ ನಾವು ಸವರ್ಣೀಯರು ಯುದ್ಧ ಸಾರಬೇಕಾಗಿದೆ" ಎಂಬ ಅಣಿಮುತ್ತುಗಳನ್ನು ಈ ಮನುವಾದಿ ಮಹಿಳೆ ಉದುರಿಸಿದಳು.

ಕೇವಲ ಬಾಯಿ-ನಾಲಿಗೆ ಮಾತ್ರ ಈ ಮೂರ್ಖ ಮಧು ಮಿಶ್ರಾಳದ್ದು ಆದರೆ ಮೆದುಳು ಸಂಘಪರಿವಾರದ್ದು. ಅಂದರೆ ಅವಳು ಹೇಳಿದ್ದು ನಾಗಪುರ ಹೆಡ್ ಆಫೀಸಿನವರ ಮನದಾಳದ ಮಾತು. ಕಾಫೀ ಫಿಲ್ಟರ್‌ನಂತಹ ಮೀಸೆ



ಹಾಸನ ಜಿಲ್ಲೆಯ ಸಿಗರನಹಳ್ಳಿಯಲ್ಲಿ ದಲಿತರ ದೇವಸ್ಥಾನ ಪ್ರವೇಶ ಮೇಲ್ಜಾತಿಯವರು ನಿಷೇಧಿಸಿದರು. ತಮಿಳುನಾಡಿನಲ್ಲಿ ದಲಿತ ಇಂಜಿನಿಯರ್ ಮೇಲ್ಜಾತಿ ಹುಡುಗಿಯನ್ನು ಪ್ರೇಮಿಸಿ ಮದುವೆಯಾದದ್ದಕ್ಕಾಗಿ ಅವನನ್ನು ನಡುಬೀದಿಯಲ್ಲಿ ಕೊಚ್ಚಿ ಕೊಲ್ಲಲಾಯಿತು. ಕರ್ನಾಟಕದ ಮುಜರಾಯಿ ಇಲಾಖೆಗೂ ಮೀಸಲಾತಿ ನೀತಿ ಅನ್ವಯ ಆಗುತ್ತಿದ್ದರೂ ಕರಾವಳಿಯಲ್ಲಿ ದಲಿತ ಸರಕಾರಿ ಅಧಿಕಾರಿಯನ್ನು ಯಾವುದೇ ವೈದಿಕ ದೇವಸ್ಥಾದಲ್ಲಿ ಆಡಳಿತಾಧಿಕಾರಿಯಾಗಿ ಬೇಕೆಂದೇ ನೇಮಿಸುತ್ತಿಲ್ಲ. ದೇವಸ್ಥಾನದಲ್ಲಿಯ ಇತರ ನೌಕರಿಯಲ್ಲೂ ಮೀಸಲಾತಿ ನೀತಿ ಅನುಸರಿಸುತ್ತಿಲ್ಲ. ದೇವಸ್ಥಾನದ ಕಸಗುಡಿಸುವುದಕ್ಕೂ ಬ್ರಾಹ್ಮಣರೇ ಬೇಕು. ಭಾರತದ ಪ್ರತಿಯೊಂದು ರಾಜ್ಯದಲ್ಲೂ ದಲಿತರ ಜೀವನ ದಿನೇದಿನೇ ದುರ್ಭರ ಆಗುತ್ತಾ ಹೋಗುತ್ತಿರುವಾಗ ದಲಿತರು 'ಭಾರತ್ ಮಾತಾಕಿ ಜೈ' ಎನ್ನಬೇಕಂತೆ. ಇವತ್ತು ಡಾ.ಅಂಬೇಡ್ಕರರು ಇದ್ದಿದ್ದರೆ ಖಂಡಿತಾ ಅವರು 'ಭಾರತೀಯನಾಗಿ ಹುಟ್ಟಿದ್ದೇನೆ



ಇರುವ ಮನು ಭಾಗವತನ ಹೃದಯದ ಮಾತಿದು. ಚಪ್ಪಲಿ ಶುಚಿಗೊಳಿಸುತ್ತಿದ್ದವರು ದೇಶ ಆಳುವುದು ತಪ್ಪಾದರೆ ಲೈಸನ್ಸ್ ಇಲ್ಲದೇ ಟ್ರೇನಿನಲ್ಲಿ ಚಹಾ ಮಾರುತ್ತಿದ್ದವನೂ ದೇಶ ಆಳುವುದು ತಪ್ಪಲ್ಲವೇ? ಮೇಲಾಗಿ ನರೇಂದ್ರ ಮೋದಿ ಹಿಂದುಳಿದ ಗಾಣಿಗ ಜಾತಿಯವರು. ಗುಜರಾತಿನಲ್ಲಿ ಬ್ರಾಹ್ಮಣರು, ಜೈನರು ಮತ್ತು ವೈಶ್ಯರು ಈಗಲೂ ಗಾಣಿಗರ ಮನೆಯಲ್ಲಿ ನೀರು ಕುಡಿಯುವುದಿಲ್ಲ. ಬಾಬಾ ರಾಮ್ ದೇವ್ ಸಹ ಹಿಂದುಳಿದ ಯಾದವ ಜಾತಿಯವನು. ಉತ್ತರ ಪ್ರದೇಶದ ಮೇಲ್ಜಾತಿಯವರು ಈಗಲೂ ಯಾದವ ಜಾತಿಯವರ ಮನೆಯಲ್ಲಿ ನೀರು ಕುಡಿಯುವದಿಲ್ಲ. ಆದರೂ ಈತ ವೈದಿಕ ಪರಶುರಾಮನ ಮರಿಯಂತೆ ಹಾಗೂ ಭಾರತ ದೇಶದ ಏಕೈಕ ರಕ್ಷಕನಂತೆ 'ಭಾರತ್ ಮಾತಾ ಕಿ ಜೈ' ಅನ್ನದವರ ಲಕ್ಷಾಂತರ ತಲೆ ಕಡಿಯುತ್ತಾನಂತೆ. ಎಂತಹ ರಕ್ತಪಿಪಾಸುಗಳ ಗುಂಪು ಈಗ ನಮ್ಮ ದೇಶದ ಮೇಲೆ ಹತೋಟಿ ಸಾಧಿಸಿದೆ ನೋಡಿ.

ಆದರೆ ಭಾರತೀಯನಾಗಿ ಸಾಯಲಾರೆ' ಎಂದೂ ಹೇಳುತ್ತಿದ್ದರೇನೋ!

ನಾನು ದಲಿತರೆಲ್ಲರ ಕ್ಷಮೆ ಕೇಳುತ್ತಾ ಒಂದು ಕಹಿ ವಿಷಯ ಹೇಳಬೇಕೆಂದರೆ ದಲಿತರಲ್ಲಿ ಈಗಲೂ ಸ್ವಾಭಿಮಾನ ಇಲ್ಲವೇ ಇಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಒಂದುವೇಳೆ ದಲಿತರಲ್ಲಿ ಸ್ವಾಭಿಮಾನವಿದ್ದಿದ್ದರೆ ಅವರು ಹಿಂದೂ ಧರ್ಮವು ತಮ್ಮನ್ನು ಇಷ್ಟೊಂದು ಹೀನಾಯವಾಗಿ ಸಾವಿರಾರು ವರ್ಷಗಳಿಂದ ನಡೆಸಿಕೊಳ್ಳುತ್ತಿದೆ ಎಂದು ಮನವರಿಕೆ ಆಗಿರುವಾಗ ಹಾಗೂ ಕನಿಷ್ಠ ಮುಂದಿನ ಇನ್ನೂರು ವರ್ಷಗಳವರೆಗೂ ದಲಿತರನ್ನು ಹಿಂದೂ ಮೇಲ್ಜಾತಿ ಹೀಗೆಯೇ ಹೀನಾಯವಾಗಿ ನಡೆಸಿಕೊಳ್ಳುತ್ತದೆ ಎಂದು ಖಾತ್ರಿಯಾಗಿರುವಾಗ ಅವರು ಇನ್ನೂ ಹಿಂದೂಧರ್ಮಕ್ಕೆ ಜೋತು ಬಿದ್ದಿರುವುದು ಅವರಲ್ಲಿ ಸ್ವಾಭಿಮಾನ ಇನ್ನೂ ಮೂಡಿಲ್ಲ ಎನ್ನುವುದಕ್ಕೆ ಸಾಕ್ಷಿ. ಜತೆಗೆ ಡಾ.ಅಂಬೇಡ್ಕರರು ತೋರಿಸಿದ ಹಾದಿಯ ಮೇಲೆ ದಲಿತರಿಗೆ ಇನ್ನೂ ಭರವಸೆ ಮೂಡಿಲ್ಲ ಎಂಬುದಕ್ಕೆ ಪುರಾವೆಯಿದು. ಹೆತ್ತ ತಂದೆಯೇ ಮಗನನ್ನು ಕೆಟ್ಟದಾಗಿ ನಡೆಸಿಕೊಂಡು ದಿನಾಲೂ ಅವಮಾನಿಸುತ್ತಿದ್ದರೆ ಸ್ವಂತ ಮಗನೇ ತಂದೆಯ ಮನೆ ಬಿಟ್ಟುಹೋಗುತ್ತಾನೆ. ಹಿರಿಯರಿಂದ ಬಳುವಳಿಯಾಗಿ ಬಂದ ಮನೆ ಎಷ್ಟೇ ಭವ್ಯವಾಗಿರಲಿ ಅದರೊಳಗೆ ವಿಷಕಾರಿ ಹಾವುಚೇಳುಗಳು ತುಂಬಿಕೊಂಡಿದ್ದರೆ ಹಾಗೂ ಆ ಹಿರಿಯರ ಮನೆ ರಿಪೇರಿ ಮಾಡಲಾಗದಷ್ಟು ಗೆದ್ದಲು ಹಿಡಿದಿದೆ ಎಂದು ಗೊತ್ತಾದರೆ ಯಾರೇ ಆಗಲಿ ಅದು ತಮ್ಮ ಹಿರಿಯರ ಮನೆ ಎಂಬ ಅಂಧಾಭಿಮಾನ ತೊರೆದು ಒಂದು ಸಣ್ಣ ಬಾಡಿಗೆ ಮನೆಗೆ ವಲಸೆ ಹೋಗುವುದು ಖಂಡಿತ. ಆದರೆ ಭಾರತದ ದಲಿತರು ಮಾತ್ರ ಇಷ್ಟೊಂದು ಘೋರ ಅವಮಾನ ಶತಮಾನಗಳಿಂದ ಆಗುತ್ತಿದ್ದರೂ ಅವರು ಇನ್ನೂ ಹಿಂದೂ ಧರ್ಮಕ್ಕೆ ಅಂಟಿಕೊಂಡಿರುವುದು ಅವರಲ್ಲಿ ಸ್ವಾಭಿಮಾನ ಇಲ್ಲವೇ ಇಲ್ಲ ಎಂಬುದಕ್ಕೆ ಸಾಕ್ಷಿ.

- ವೀರಪ್ಪ ದಿ.ಎನ್. ಮಂಗಳೂರು

ಉಂಡ ಮನೆಯ ಗಳ ಎಣಿಸ್ಲೋ ಚಾಳಿಯ ಚೆಡ್ಡಿಗಳು


ಗೆದ್ದಲು ಕಷ್ಟಪಟ್ಟು ಕಟ್ಟಿದ ಹುತ್ತದಲ್ಲಿ ಹಾವು ಬಂದು ಕೂತಿತೆಂಬ ಗಾದೆಯ ಅರ್ಥ ಮೇಲಿನ ಉಂಡ ಮನೆ ಗಾದೆಗೂ ಇದೆ. ಪ್ರಸ್ತುತ ದೇಶದಲ್ಲಿ ನಡೆಯುತ್ತಿರುವ ಚೆಡ್ಡಿನಾಟಕಗಳನ್ನೆಲ್ಲ ನೋಡುತ್ತಿದ್ದಾಗ ಗೋಲ್ವಾಲ್ಕರ್ ಅನುಯಾಯಿಗಳ ನಾಟಕಗಳಿಗೆ ಈ ಮೇಲಿನ ಗಾದೆ ಸರಿಯಾಗೇ ಹೊಂದುತ್ತದೆನ್ನಿಸುತ್ತಿದೆ.

ಯಾರೋ ಒಬ್ಬ ಸದ್ಗೃಹಸ್ಥನ ಮನೆಗೆ ರಾತ್ರಿ ಕಾಲದಲ್ಲಿ ಡ್ರೆಸ್ಸು ಮೈಬಣ್ಣ ಚೆನ್ನಾಗಿ ಒಳ್ಳೆಯವನಂತೆ ತೋರುವ ವ್ಯಕ್ತಿಯೊಬ್ಬ ಬಂದನಂತೆ. ಬಂದು ಕತ್ತಲಾಯಿತು ಇಲ್ಲೇ ರಾತ್ರಿ ಕಳೆದು ಬೆಳಗ್ಗೆ ಹೋಗುತ್ತೇನೆ ಎಂದವನನ್ನು ಆತ ಅಪರಿಚಿತನಾಗಿದ್ದರೂ 'ಕಳ್ಳ'ನಂತೆ ತೋರದ ಕಾರಣಕ್ಕೆ ಮನೆಯ ಮಾಲಿಕ ಅವನನ್ನು ಒಳಗೇ ಬರಲು ಬಿಟ್ಟು ಊಟೋಪಚಾರವನ್ನೂ ಮಾಡಿಸಿ ಮಲಗಲು ಬಿಟ್ಟನಂತೆ. ಆದರೆ ಬೆಳಗಾದ ಮೇಲೆ ಅತಿಥಿಹೋಗುವ ಸೂಚನೆಯನ್ನೇ ತೋರದೇ ದಿನಕಳೆದರೂ ಅಲ್ಲೇ ಇದ್ದನಂತೆ. ಕೊನೆಗೆ ಮನೆಮಾಲಿಕ ನೇರವಾಗೇ ಹೋಗೆಂದರೂ ಆತ "ಇ... ನನ್ನದ್ದೇ ಮನೆ. ಹೋಗುವುದಿದ್ದರೆ ನೀನೇ ಹೋಗ... ಎಂದನಂತೆ. ಕೊನೆಗೆ ರಾದ್ಧಾಂತ ಬೇಡವೆಂದು ಊ... ಪಂಚಾಯ್ತಿ ಕರೆದು ನ್ಯಾಯ ನಿಷ್ಕರ್ಷೆ ಮಾಡಿದಾಗ ... ಮನೆ ಅಪರಿಚಿತ ಅತಿಥಿಗೇ ಹೋಯಿತಂತೆ. ಇದೇ ಉ... ಮನೆಯ ಗಳ ಎಣಿಸಿದ ಕಥೆ.

ಅಂದರೆ ಊರ ಪಂಚಾಯತಿಯಲ್ಲಿ ಆ ಅಪರಿಚಿ... ಮನೆಯ ನಿಜ ಮಾಲಿಕನಿಗೆ ಪ್ರತಿ ಸವಾಲು ಹಾಕಿದನ... "ನೀನು ಇದು ನಿನ್ನ ಮನೆ, ಅದನ್ನ ನೀನೇ ಕಟ್ಟಿ... ಅನ್ನುತ್ತೀಯಲ್ಲ. ಹಾಗಾದರೆ ನೀನಾಗಲೀ ನಿನ್ನ ಹೆಂ... ಮಕ್ಕಳಾಗಲೀ ಆ 'ನಿನ್ನ' ಮನೆಯ ಮಾಡಿನಲ್ಲಿ ಎ... ಗಳ (ಹಂಚು ಅಥವ ಹುಲ್ಲು ಹಾಕಲು ಸಪೋರ್ಟಿಗಾ... ಹಾಕಿದ ಬಿದಿರುಕಂಬ) ಇದೆ ಹೇಳಿ ನೋಡುವಾ... ಅಂದನಂತೆ. ಮನೆ ಮಾಲಿಕ ಅಂದಾಜು ಇಷ್ಟಿರಬಹು... ಎಂದರೆ ಹೆಂಡತಿ ಮಕ್ಕಳು ಗೊತ್ತಿಲ್ಲ ಎಂ... ತಲೆಯಾಡಿಸಿದರು. ಆದರೆ ಈತ ಮಾತ್ರ ಸರಿಯಾದ ಸಂ... ಹೇಳಿದನಂತೆ. ಅದನ್ನು ಪರಿಶೀಲಿಸಿದಾಗ ಅದು ನೂ... ನೂರು ಸರಿಯಾಗಿದ್ದು ಮನೆ ಮಾಲಿಕ ಸೋಲೊಪ್ಪ... ಬೇಕಾಯಿತಂತೆ. ದಿನಾ ಮಲಗುವಾಗ ಮಾಡಿನಲ್ಲಿರು... ಈ ಗಳಗಳನ್ನು ಲೆಕ್ಕ ಮಾಡಿದ್ದ ಈ ವಂಚಕ ಅಪರಿ... ಮನೆಯ ಮಾಲಿಕ ಮತ್ತು ಆತನ ಕುಟುಂಬವ... ಒದ್ದೋಡಿಸಿ ಶ್ರಮವಿಲ್ಲದೇ ಪರರ ಮನೆಯನ್ನು ತನ್ನ ಕೈ... ಮಾಡಿಕೊಂಡಿದ್ದ.

ಈ ಕಥೆಯ ಸಾರಾಂಶವೆಂದರೆ ಇಲ್ಲಿ ನಿಮ್ಮ ಪ್ರಾಮಾ... ಅರ್ಹತೆಗಿಂತ ನಯವಂಚಕತನದ ಮಾತು ನಡೆಗಳೇ ತ... ಖದರನ್ನು ತೋರುತ್ತಿರುತ್ತವೆ. ದೇಶದಲ್ಲಿ ವ್ಯಾಪಿಸುತ್ತಿರು... ಚೆಡ್ಡಿಗಳ ಕಥೆಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ...

ಮೊಗಲರ ಕಾಲದಲ್ಲಿ ಆಸ್ಥಾನ ವಿದೂಷಕನಾ... ಮಂತ್ರಿಯಾಗಿ ತಾಳಕ್ಕೆ ತಕ್ಕಂತೆ ಕುಣಿದ (ಅಕ್ಬರನ ಆಸ್ಥಾನದ... ಬೀರಬಲ್ಲ ಮೂಲತಃ ಬ್ರಾಹ್ಮಣ) ಸ್ವಾತಂತ್ರ್ಯ ಹೋರಾಟದ... ಬ್ರಿಟಿಷರ ಚೇಲಾಗಿರಿ ಮಾಡಿಕೊಂಡು ಹೊಟ್ಟೆ ಬರಿ... ಉಂಡವರ ಸಂತಾನ ಈ ಚೆಡ್ಡಿಗಳು. ದೇಶದ ಹಿತಕ... ಇನ್ನಿನ ಜನರ ಹಿತಕ್ಕಾಗಿ ಎಂದೂ ದನಿಯೆತ್ತಿ ಹೋರಾ... ದಿದ್ದರೂ, ತಮ್ಮ ಕಚೇರಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸ...








ನರೇಶ್ ಶೆಣೈನ ಚೆಡ್ಡಿ ಪಡೆ

ಮಂಗಳೂರಿನ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾರ ಕೊಲೆಯಲ್ಲಿ ಶಂಕಿತನಾಗಿರುವ ನರೇಶ್ ಶೆಣೈ ಸಾಮಾಜಿಕ ಜಾಲತಾಣದಲ್ಲಿ ಸಂಘ ಪರಿವಾರದ ಪರ ಬ್ಯಾಟಿಂಗ್ ಮಾಡುವ ಅತ್ಯಂತ ಸಕ್ರಿಯ ಗುಂಪು ಕಟ್ಟಿಕೊಂಡು ಬಿಜೆಪಿ ಪರ ಹಾಗೂ ಮೋದಿ ಪರ ಸಾಕಷ್ಟು ಕೊಳಕು ಕೆಲಸ ಮಾಡಿದ್ದಾನೆ. ಯಾವುದೇ ಸಂಜೆ ಪತ್ರಿಕೆಯಲ್ಲಿಯೂ ಸಂಘ ಪರಿವಾರದ ವಿರುದ್ಧ ಅಥವಾ ಮೋದಿಯ ವಿರುದ್ಧ ಒಂದು ಸಣ್ಣ ಪತ್ರ ಪ್ರಕಟವಾದರೂ ಸಾಕು ಅದಕ್ಕೆ ಅತಿ ಹೊಲಸು ಭಾಷೆಯಲ್ಲಿ ಯಾವ ಯಾವುದೋ ಕೆಳಜಾತಿಯವರ ನಕಲಿ ಹೆಸರಲ್ಲಿ ಮಾರುತ್ತರ ಕೊಟ್ಟು ಆ ಲೇಖಕನನ್ನು ವೈಯಕ್ತಿಕ ನೆಲೆಯಲ್ಲಿ ಅಪಮಾನಿಸಿ ಬರೆದು ವಿಕೃತ ಆನಂದ ಪಡೆಯುವ ಮೂರು ಕೇಸರಿ ಗುಂಪುಗಳಲ್ಲಿ ಮಂಗಳೂರಿನ ಈ ನರೇಶ್ ಶೆಣೈಯದೂ ಒಂದು ಗುಂಪು. ಕೆಳಜಾತಿಯವರೂ ಸಂಘಪರಿವಾರದ ಪರವಾಗಿದ್ದಾರೆ ಎಂದು ತಪ್ಪು ಅಭಿಪ್ರಾಯ ಹುಟ್ಟಿಸುವ ಉದ್ದೇಶದಿಂದ ಕೆಳಜಾತಿಯವರ ಕಾಲ್ಪನಿಕ ಹೆಸರು ಉಪಯೋಗಿಸಿ ಜಾಲತಾಣಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಪತ್ರ ಅಥವಾ ಕಾಮೆಂಟ್ ಬರೆಯುವುದರಲ್ಲಿ ಇವರದ್ದು ಎತ್ತಿದ ಕೈ.



ಮಂಗಳೂರು-ಉಡುಪಿಯಲ್ಲಿ ಜನಪ್ರಿಯವಾಗಿರುವ ಕರಾವಳಿ ಕರ್ನಾಟಕ ಡಾಟ್ಕಾಂ ಎಂಬ ಕನ್ನಡ ಸುದ್ದಿ ಪೋರ್ಟಲ್ ಮತ್ತು ದಾಯ್ಜಿವರ್ಲ್ಡ್ ಡಾಟ್ಕಾಂ ಎಂಬ ಇಂಗ್ಲಿಷ್ ಪೋರ್ಟಲುಗಳಲ್ಲಿ ಬರುವ ಸುದ್ದಿ ಹಾಗೂ ಓದುಗರ ಕಾಮೆಂಟ್ ಮೇಲೆ ಹದ್ದಿನ ಕಣ್ಣು ಇಟ್ಟಿರುವ ಕೇಸರಿ ಗುಂಪುಗಳು ಮಂಗಳೂರಿನಲ್ಲಿವೆ. ಸಂಘ ಪರಿವಾರವನ್ನು ಸಮರ್ಥಿಸಿ ಹಾಗೂ ವಿರೋಧಿಗಳನ್ನು ಅವಮಾನಿಸಿ ಬರೆಯುವ ಪ್ರತಿ ಕಾಮೆಂಟಿಗೂ ಈ ಗುಂಪುಗಳು ಕಾಮೆಂಟ್ ಬರೆಯುವಾತನಿಗೆ ನೂರು ರೂಪಾಯಿಯಂತೆ ಪೇಮೆಂಟ್ ಮಾಡುತ್ತವೆ. ಈ ಹಣದ ಮೂಲ ಬಜರಂಗದಳದಂತಹ ಕೇಸರಿ ಗೂಂಡಾಪಡೆಗಳು ಮಾಡುವ ಹಫ್ತಾ ವಸೂಲಿ. ಈ ಕೇಸರಿ ಪಡೆಗಳು ಮೀಡಿಯಾದ... ಬರೆಯುವ ತುಚ್ಛ ಒಕ್ಕಣೆಯ ಪತ್ರಗಳಿಂದಾಗಿ ಹಾಗೂ ಹೊಲಸು ಭಾಷೆ... ಕಾಮೆಂಟುಗಳಿಂದಾಗಿ ಕೆಲವೊಂದು ಸಂಜೆ ಪತ್ರಿಕೆಗಳು ಇಂಟರ್ನೆಟ್‌ನಲ್ಲಿ ತಮ್ಮ ಪತ್ರಿಕೆ... ಇ-ಪೇಪರ್ ಆವೃತ್ತಿಯ ಪ್ರಕಟಣೆಯನ್ನು 8-9 ತಿಂಗಳ ಹಿಂದೆ ನಿಲ್ಲಿಸಿಬಿಟ್ಟಿವೆ. ಯಾಕೆಂದ... ಸೆಕ್ಯೂಲರ್ ಓದುಗರು ಈ ಪತ್ರಿಕೆಗಳಿಗೆ ಬರೆಯುವ ಲೇಖನಗಳನ್ನು ಹೊರನಾಡ... ಕನ್ನಡಿಗರು ಅಥವಾ ವಿದೇಶದ ಕನ್ನಡಿಗರು ಇ-ಪೇಪರ್ ಮುಖಾಂತರ ಓದಬಾರದೆಂ... ಈ ಕೇಸರಿ ಪಡೆಗಳ ಒಳಉದ್ದೇಶವಾಗಿದೆ.

ಸಂಘ ಪರಿವಾರದ ಮುಖವಾಡ ಕಳಚುವ ಕೆಲಸವನ್ನು ಸತತವಾಗಿ ಮಾಡುತ್ತಿರು... ಕನ್ನಡದ ಏಕೈಕ ಘನ ಪತ್ರಿಕೆಯಾದ ತಮ್ಮ ಗೌರಿ ಲಂಕೇಶ್ ಇದ... ಇ-ಪೇಪರ್ ಆವೃತ್ತಿ ಇಲ್ಲದಿರುವುದು ಮಂಗಳೂರಿನ ಕೇಸರಿ ಪಡೆಗ... ತುಂಬಾ ಸಮಾಧಾನದ ವಿಷಯ ಎಂದು ಕೆಲವು ಕೇಸರಿ ಸದಸ್ಯರು ... ಎದುರಿಗೇ ಹೇಳಿದ್ದಾರೆ. ಗೌರಿ ಲಂಕೇಶ್ ವಾರಪತ್ರಿಕೆಯನ್ನು ಕಂಡ... ಕೇಸರಿ ಪಡೆಗಳಿಗೆ ಅದೆಷ್ಟು ಭಯ ಎಂದು ಇದರಿಂದ ಸಾಬೀತಾಗುತ್ತ...

ಈಗ ತಲೆ ತಪ್ಪಿಸಿಕೊಂಡಿರುವ ಈ ಕೊಲೆ ಶಂಕಿತ ನರೇಶ್ ಶೆಣೈನ... ಬೆಂಬಲಿಸಲು ಹಾಗೂ ಅವನು ನಿರಪರಾಧಿ ಎಂದು ಬಿಂಬಿಸಲು ಅವ... ಕೊಕ್ಕೆ-ಕೇಸರಿ ಬೆಂಬಲಿಗರು ಈಗ ಅವನ ಹೆಸರಲ್ಲಿ ಸೋಷಿಯ... ಮೀಡಿಯಾದಲ್ಲಿ ಎರಡು ಹಾಶ್‌ಟ್ಯಾಗ್ ಶುರು ಮಾಡಿದ್ದಾರೆ. ಒಟ್ಟ... ಮನೆಯಲ್ಲಿ ಕುಳಿತೇ ಜನಸಾಮಾನ್ಯರಲ್ಲಿ ಹಿಂದೂತ್ವದ ದುರಭಿಮಾ... ಹುಟ್ಟಿಸುವುದು ಮತ್ತು ಮುಸ್ಲಿಂ-ಕ್ರೈಸ್ತ-ದಲಿತರ ವಿರುದ್ಧ ದ್ವೇಷಪೂರ್ಣ ಅಭಿಪ್ರಾ... ರೂಪಿಸುವುದು ಸೋಷಿಯಲ್ ಮೀಡಿಯಾ ಮುಖಾಂತರ ಸಾಧ್ಯ ಎನ್ನುವ ತ... ಕಲ್ಪನೆಯುಳ್ಳ ಗುಂಪು ಈ ನರೇಶ್ ಶೆಣೈನದ್ದು. ಆದರೆ ಈಗ ಮಂಗಳೂರು ಪೊಲೀಸ... ಈತನ ಭವಿಷ್ಯವನ್ನೇ ರೂಪಿಸುವ ಕೆಲಸದಲ್ಲಿ ತೊಡಗಿರುವುದು ಒಳ್ಳೆಯ ಬೆಳವಣಿ...

- ಅಭಿಷೇಕ್ ಪಡಿವಾಳ್, ಸು...

ದ್ದರೂ ಉಳಿದವರು ವಂದೇ ಮಾತರಮ್ ಹೇಳಬೇಕು, ರಾಷ್ಟ್ರ ಧ್ವಜ ಹಾರಿಸಬೇಕು, ಭಾರತ್ ಮಾತಾ ಕಿ ಜೈ ಎನ್ನಬೇಕು ಎಂದು ದೇಶಭಕ್ತಿಯ ಸೋಗುಹಾಕಿ ತಾವೇ ದೇಶಭಕ್ತಿಯ ಗುತ್ತಿಗೆ ಹೊತ್ತವರೆಂದು ಮೆರೆಯುತ್ತಿವೆ. ಆರೆಸ್ಸೆಸ್ ಮುಖಂಡ ಭಯ್ಯಾಜಿ ಜೋಷಿ, ಮಹಾರಾಷ್ಟ್ರ ಮುಖ್ಯಮಂತ್ರಿ ಫಡ್ನವೀಸ್, ಸಂಸದ ಆದಿತ್ಯನಾತ ಅಷ್ಟೇ ಯಾಕೆ ಕಳ್ಳ ಯೋಗಿ ರಾಮದೇವನಂತವರು ರಾಜ್ಯವೊಂದರ ರಾಜ್ಯಪಾಲರೆದುರಿಗೇ ಭಾರತ್ ಮಾತಾ ಕಿ ಜೈ ಎನ್ನದವರ ತಲೆ ತೆಗೆಯುವಂತಹ ಸಂವಿಧಾನ ವಿರೋಧಿ ಹೇಳಿಕೆಗಳನ್ನು ಕೊಡುತ್ತಾರೆಂದರೆ ಅವರ ದಾರ್ಷ್ಟ್ಯತನ ಎಂತದ್ದಿರಬೇಕು?

ಕಾನೂನಾತ್ಮಕವಾಗಿ ಜನವಿರೋಧಿ ಹೇಳಿಕೆಗಳನ್ನು ನೀಡಿದ ಇವರೆಲ್ಲ ಜೈಲು ಪಾಲಾಗಲು ಯೋಗ್ಯರು. ಲೋಕ ಹಾಗು ಲೋಗ್ ಎನ್ನುವುದು ಒಂದೇ ಮೂಲದಿಂದ ಬಂದಂತಹ ಪದ. ಜನರನ್ನು ಜನರ ಭಾವನೆಯನ್ನು ಗೌರವಿಸದವರು ಲೋಕವನ್ನು ದೇಶವನ್ನು ಹೇಗೆ ಪ್ರೀತಿಸಿಯಾರು? ದೇಶಭಕ್ತಿಯನ್ನು ಆಜ್ಞೆ-ಫತ್ವಾಗಳಿಂದ ಅಳವಡಿಸಲಾಗದು. ಇದು ಮನಸಾರೆ ಬರುವಂತಾಗಿರಬೇಕು.

"ನಮ್ಮ ವ್ಯಾಪಾರಿಗಳು ಸಿಯಾಚಿನ್ ಕಾರ್ಗಿಲ್ ಗಡಿ ಕಾಯುವ ಸೈನಿಕರಿಗಿಂತ ಹೆಚ್ಚು ಸಾಹಸಿಗಳು" ಎಂದಿದ್ದು, ಜೀವದ ಹಂಗು ತೊರೆದು ನಮ್ಮ ದೇಶ ಕಾಯುವ ಸೈನಿಕರ ರಕ್ತ ಹೀರುವ ಈ ಕಾಳಸಂತೆ ವ್ಯಾಪಾರಿಗಳು ದೇಶದ್ರೋಹಿಗಳಲ್ಲವೇ?

ಉತ್ತರ ಭಾರತದಲ್ಲಿ ಬಿಜೆಪಿ ಅಂದರೆ ಬನಿಯಾ-ಜೈನ್-ಪಾರ್ಟಿ ಎಂದು ಎಲ್ಲರಿಗೂ ಗೊತ್ತಿದೆ. ಬಾಯಲ್ಲಿ ಭಾರಿ ಅಹಿಂಸೆಯ ಮಂತ್ರ ಜಪಿಸುತ್ತಾ ಮನದಲ್ಲಿ ವಿಪರೀತ ದುರಾಸೆ ಇಟ್ಟುಕೊಂಡು ಆಹಾರಧಾನ್ಯಗಳ ಕಾಳಸಂತೆ ಮಾಡಿ ಕೋಟ್ಯಾಂತರ ಬಡವರ ರಕ್ತ ಹೀರುವ ವ್ಯಾಪಾರಿಗಳಷ್ಟು ದೊಡ್ಡ ದೇಶದ್ರೋಹಿಂಗಳು ಈ ಭಾರತದಲ್ಲಿ ಬೇರೆ ಯಾರೂ ಇಲ್ಲ. ಆದರೂ ಅವರು ಬಾಯಲ್ಲಿ ಭಾರತ್ ಮಾತಾಕಿ ಜೈ ಎನ್ನುತ್ತಿದ್ದಾರೆ. ಅಷ್ಟೇ ಸಾಕು ಅಮಿತ್ ಷಾನಿಗೆ ತನ್ನ ಜಾತಿ ಬಾಂಧವರನ್ನು ರಕ್ಷಿಸಲು. ಇದರ ಒಟ್ಟಾರೆ ನೀತಿ ಪಾಠ ಇಷ್ಟೇ: ನೀವು ಬೇಕಾದಷ್ಟೂ ದುಷ್ಟ ಕೆಲಸ ಮಾಡಿ, ಭಾರತೀಯ ಸಮಾಜವನ್ನು ಎಷ್ಟು ಬೇಕಾದರೂ ಶೋಷಣೆ ಮಾಡಿ ಹಣ ಗಳಿಸಿ, ಆದರೆ ಕೊನೆಗೆ ಭಾರತ್ ಮಾತಾ ಕಿ



ಜೈ ಎಂದು ಕೂಗಿ, ಅಷ್ಟೇ ಸಾಕು, ನಿಮ್ಮ ಎಲ್ಲಾ ಘೋರ ಅಪರಾಧಗಳೂ ಮಾಫ್.

ಈಗ ದಿನಾಲೂ ಎಲ್ಲಾ ಟಿವಿ ಚಾನೆಲ್ಲುಗಳಲ್ಲೂ ಸ್ವಚ್ಛ ಭಾರತದ ಬಗ್ಗೆ ಮೋದಿಯವರ 56 ಇಂಚು ಅಗಲ ಬಾಯಿಂದ ಒಂದು ಆರ್ಭಟೆ ಕೇಳಿಸುತ್ತದೆ. ಅದು ಹೀಗಿದೆ: "ಭಾರತದ 125 ಕೋಟಿ ಜನರು ತಾವು ಭಾರತವನ್ನು ಸ್ವಚ್ಛವಾಗಿ ಇರಿಸುತ್ತೇವೆ ಎಂದು ಒಮ್ಮೆ ನಿರ್ಧರಿಸಿದರೆ ಸಾಕು ನಂತರ ನಮ್ಮ ಭಾರತವನ್ನು ಜಗತ್ತಿನ ಯಾವುದೇ ಶಕ್ತಿಯೂ ಹೊಲಸು ಮಾಡಲು ಸಾಧ್ಯವಿಲ್ಲ!"

ಮಾತುಮಾತಿಗೆ "ದುನಿಯಾಕಾ ಕೋಯಿಭೀ ತಾಕತ್" ಎನ್ನುತ್ತಾ ನಾಟಕೀಯ ಭಾಷಣ ಶುರು ಮಾಡುವ ಮೋದಿಯ ಪೌರುಷದ ಮಾತು ಹಾಗೂ ಬಡಾಯಿ ಕೇಳಿ ಕೇಳಿ ನಮಗೆ ಅಭ್ಯಾಸವಾಗಿ ಹೋಗಿದೆ ನಿಜ. ಆದರೆ ಅವರು ಈ ಸ್ವಚ್ಛ ಭಾರತ್ ಟಿವಿ ಜಾಹೀರಾತಿನಲ್ಲಿ ಹೇಳುತ್ತಿರುವುದು ಮಾತ್ರ ತಮಾಷೆಯಾಗಿ ಕಾಣುತ್ತದೆ. ಯಾಕೆಂದರೆ ಭಾರತವನ್ನು ಹೊಲಸು ಮಾಡುತ್ತಿರುವವರು ಭಾರತೀಯರೇ ಹೊರತು ವಿದೇಶೀಯ ತಾಕತ್ ಅಲ್ಲ. ನಾವು ಭಾರತಕ್ಕೆ ಬರುವ ವಿದೇಶದ ಪ್ರವಾಸಿಗಳನ್ನು ಗಮನಿಸಿದರೆ ಒಂದು ಮುಖ್ಯ ಅಂಶ ನಮ್ಮ ಕಣ್ಣಿಗೆ ರಾಚುತ್ತದೆ. ಆಂದರೆ ನಾನೇ ಗೋಕರ್ಣ ಹಾಗೂ ಮಂಗಳೂರು-ಮೈಸೂರಿನಲ್ಲಿ ಕಂಡಿರುವಂತೆ ವಿದೇಶಿಯರು ಬೀಚಿನಲ್ಲಿಯೇ ಆಗಲಿ, ರಸ್ತೆಯಲ್ಲಿಯೇ ಆಗಲಿ ಅಥವಾ ಬಸ್ಸು-ಟ್ರೇನಿನಲ್ಲಿಯೇ ಆಗಲಿ, ಅವರು ಬಿಸ್ಕೀಟು ಅಥವಾ ಹಣ್ಣು ಹಂಪಲ ತಿಂದರೆ ಅದರ ಕವರನ್ನು ಅಥವಾ ಸಿಪ್ಪೆಯನ್ನು ಅಲ್ಲಿಯೇ ಬಿಸಾಡಿ ಮುಂದೆ ಹೋಗುವುದಿಲ್ಲ. ಅದಕ್ಕೆ ಬದಲು ಅವರು ಅಂತಹ ಬಿಸ್ಕೀಟ್ ಕವರ್ ಅಥವಾ ಹಣ್ಣಿನ ಸಿಪ್ಪೆಯನ್ನು ತಮ್ಮ ಬ್ಯಾಗು ಅಥವಾ ಕಿಸೆಯಲ್ಲಿ ಇಟ್ಟುಕೊಂಡು ಮುಂದೆ ಹೋಗಿ ಯಾವುದಾದರೂ ಕಸದ ಡಬ್ಬಿಯಲ್ಲಿಯೇ ಹಾಕಿ ಮುಂದೆ ಹೋಗುತ್ತಾರೆ. ಆದರೆ ವಿದ್ಯಾವಂತ ಭಾರತೀಯರು ಮಾತ್ರ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಕವರ್, ಸಿಪ್ಪೆ ಸಿಗರೇಟಿನ ತುಂಡು ಬಿಸಾಕಿ ಹೊಲಸು ಮಾಡುತ್ತಾರೆ. ಹಾಗಾದರೆ ಮೋದಿಯವರೇ ನೀವೇ ಹೇಳಿ ಭಾರತವನ್ನು ಹೊಲಸು ಮಾಡುತ್ತಿರುವವರು ವಿದೇಶಿಯರೇ ಅಥವಾ ಭಾರತ್ ಮಾತಾ ಕಿ ಜೈ ಅನ್ನುವ ನಿಮ್ಮ ದೇಶಪ್ರೇಮಿ ಭಾರತಿಯರೇ? ಭಾರತ ವಿಶ್ವಗುರು ಆಗುತ್ತಿದೆ ಎಂಬ ಬಾಲಿಶ ಬಡಾಯಿಗೆ ಸಮ ಈ ಸ್ವಚ್ಛ ಭಾರತ್ ಮತ್ತು ಹೊಲಸು ವಿದೇಶಿ ತಾಕತ್!

ಮೂಲತಃ ಕಾಂಗ್ರೆಸ್ ಸರಕಾರದ ಯೋಜನೆಯಾಗಿದ್ದ ನಿರ್ಮಲ್ ಭಾರತ್ ಯೋಜನೆಯ ಹೆಸರು ಬದಲಿಸಿದ ಮಾತ್ರಕ್ಕೆ, ಅದು ಮೋದಿಯವರ ಹೊಸ ಯೋಜನೆ ಆಗುವುದಿಲ್ಲ, ಕೇವಲ ಸ್ವಚ್ಛ ಭಾರತ್ ಹೆಸರಲ್ಲಿ ಎಲ್ಲಾ ತೆರಿಗೆದಾರರ ಮೇಲೆ ಒಂದು ಪರ್ಸೆಂಟ್ ಹೊಸ ತೆರಿಗೆ ಹಾಕಿದ್ದಷ್ಟೇ ಸೀಮಿತ ಮೋದಿಯವರ ನಕಲಿ ದೇಶಭಕ್ತಿಯ ಡಿಕ್ಷಾ.

- ಹರೀಶ್ ಎಮ್.ಆರ್, ಉಡುಪಿ

ದೇಶವನ್ನು ಪ್ರೀತಿಸುವವರು ಎದೆಮೇಲೆ ಲೇಬಲ್ ಇಟ್ಟುಕೊಂಡು ಡಂಗುರ ಸಾರುವುದಿಲ್ಲ. ಅದು ಹೃದಯದಲ್ಲೇ ಇರುತ್ತದೆ. ಅದನ್ನು ಉದ್ದೀಪಿಸುವಂತಹ ಕೆಲಸಗಳಾಗಬೇಕೇ ಹೊರತು ತಲೆ ಕಡಿಯಬೇಕು, ಪಾಕಿಸ್ತಾನಕ್ಕೆ ಕಳಿಸಬೇಕು ಎನ್ನುವಂತಹ ದುಷ್ಟತನದ ಮಾತುಗಳಲ್ಲ. ಇವುಗಳನ್ನು ಚೆಡ್ಡಿ ದೇಶದ್ರೋಹಿಗಳು ಅರ್ಥಮಾಡಿಕೊಳ್ಳುವುದೊಳ್ಳೆಯದು.

- ಅವಿನಾಶ ಎಮ್.ಎಸ್. ನೆಲ್ಲಿಕಾರ್

ಯುಪಿಎ ಸರಕಾರದ ಅವಧಿಯಲ್ಲಿ ತೊಗರಿಬೇಳೆಯ ಕ್ರಯ ಕೆಜಿಗೆ ಕೇವಲ 75 ರೂಪಾಯಿ ಇತ್ತು, ಎನ್‌ಡಿಎ ಅಧಿಕಾರಕ್ಕೆ ಬಂದಕೂಡಲೇ ಅದು ಕೆಜಿಗೆ ರೂ.220 ಕ್ಕೆ ಜಿಗಿಯಿತು. ಕಾರಣ ಆಹಾರದ ಕಾಳಸಂತೆ ಮಾಡುತ್ತಿರುವವರೆಲ್ಲಾ ಬಿಜೆಪಿಯ ಸದಸ್ಯರಾಗಿರುವ ವ್ಯಾಪಾರಿಗಳೇ ಆಗಿದ್ದಾರೆ. ಅದಾನಿ-ವಿಲ್ಮರ್ ಎಂಬ ಕಂಪನಿ ಆಫ್ರಿಕಾದಿಂದ ಕೆಜಿಗೆ ಕೇವಲ 40 ರೂಪಾಯಿಯಲ್ಲಿ ತೊಗರಿ ಬೇಳೆ ಆಮದು ಮಾಡಿ ಇಲ್ಲಿ ಚಿಲ್ಲರೆ ಮಾರುಕಟ್ಟೆಯಲ್ಲಿ ಅದನ್ನು ಕೆಜಿಗೆ 220/- ರೂಪಾಯಿಗೆ ಮಾರುತ್ತಿದೆ. ಇದು ನೇರಾನೇರ ಲೂಟಿಯಲ್ಲದೇ ಇನ್ನೇನು?


ನಮ್ಮ ದೇಶದ ಅತ್ಯಂತ ಬಡವರ ಆಹಾರವಾದ ಬೇಳೆಕಾಳುಗಳನ್ನು ಕಳ್ಳ ದಾಸ್ತಾನು ಮತ್ತು ಕಾಳಸಂತೆ ಮಾಡುವ ಗುಜರಾತಿ, ರಾಜಸ್ಥಾನಿ ವ್ಯಾಪಾರಿಗಳು ಬಿಜೆಪಿಗೆ ಸಲಗ್ನವಾಗಿದ್ದು ಅವರೆಲ್ಲಾ 'ಭಾರತ್ ಮಾತಾ ಕಿ ಜೈ' ಎನ್ನುತ್ತಲೇ ಬಡವರ ರಕ್ತ ಹೀರುತ್ತಿರುವುದು. ಅಣುವಿನಷ್ಟೂ ಮಾನವತೆ ಇಲ್ಲದ ಈ ಶತನೀಚ ವ್ಯಾಪಾರಿಗಳೂ ಸಂಘಪರಿವಾರದ ದೃಷ್ಟಿಯಲ್ಲಿ ಅಪ್ಪಟ ದೇಶಪ್ರೇಮಿಗಳು!! ದೇಶಭಕ್ತಿಯ ಬಗ್ಗೆ ದೊಡ್ಡದಾಗಿ ಭೋಂಗು ಬಿಡುವ ಬಾಬಾ ರಾಮ್ ದೇವ್ ಇತ್ತೀಚೆಗೆ ಮಾರುಕಟ್ಟೆಗೆ ತಂದಿರುವ ಪತಂಜಲಿ ನೂಡಲ್ಸ್‌ನಲ್ಲಿ ಅತೀಹೆಚ್ಚು ಬೂದಿ ಅಂಶವಿದ್ದು ಅದು ಆರೋಗ್ಯಕ್ಕೆ ಹಾನಿಕಾರಕ ಎಂದು ಆಹಾರ ಸುರಕ್ಷೆ ಮತ್ತು ಔಷಧಿ ಪ್ರಾಧಿಕಾರ (ಎಫ್‌ಎಸ್‌ಡಿ) ಕಳವಳಕಾರಿ ಸಂಗತಿ ಬಯಲು ಪಡಿಸಿದೆ. ದೇಶದ ಜನರ ಆರೋಗ್ಯದೊಂದಿಗೆ ಆಟವಾಡುವ ಈ ಕಾವಿ ಉದ್ಯಮಿ ದೊಡ್ಡ ದೇಶಪ್ರೇಮಿಯಂತೆ!

ಇದೇ ಕಳ್ಳ ವ್ಯಾಪಾರಿಗಳು ಹೀಗೆ ಕಳ್ಳ ದಾಸ್ತಾನು ಮತ್ತು ಕಾಳಸಂತೆ ಮಾಡಿ ನಮ್ಮ ಸೈನಿಕರ ಮಿಲಿಟರಿ ಕ್ಯಾಂಪುಗಳಿಗೂ ದುಬಾರಿ ಆಹಾರ ಧಾನ್ಯ ಪೂರೈಸಿ ದೇಶದ ಮಿಲಿಟರಿಯವರ ರಕ್ತವನ್ನೇ ಕುಡಿಯುತ್ತಿದ್ದಾರೆ. ಅದಕ್ಕಾಗಿಯೇ ಎರಡು ವರ್ಷಗಳ ಹಿಂದೆ ನರೇಂದ್ರ ಮೋದಿ ಗುಜರಾತಿನ ಮುಖ್ಯಮಂತ್ರಿ ಆಗಿದ್ದಾಗ ಒಂದು ವ್ಯಾಪಾರಿಗಳ ಸಭೆಯಲ್ಲಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಪುನೀತ್ ಬ್ರಿಲಿಯಂಟ್ ನಟ: ರಚಿತಾ ರಾಮ್

ಪುನೀತ್ ರಾಜ್‌ಕುಮಾರ್ ಜತೆ ರಚಿತಾ ರಾಮ್ ನಟಿಸುವುದು ಡೌಟು ಎನ್ನಲಾಗುತ್ತಿತ್ತು. ಆದರೆ 'ಚಕ್ರವ್ಯೂಹ' ಸಿನಿಮಾದಲ್ಲಿ ಇವರೇ ನಾಯಕಿ ಅಂದಾಗ ಪುನೀತ್ ಅಭಿಮಾನಿಗಳು ಗರಂ ಆಗಿದ್ದರು. ಈ ಎಲ್ಲಾ ಗೊಂದಲದ ನಡುವೆಯೂ ರಚಿತಾ ನಟಿಸಿದ್ದಾರೆ. ಈ ಕುರಿತು ಅವರು ಇಲ್ಲಿ ಮಾತಾಡಿದ್ದಾರೆ.



ಮೊದಲ ಚಿತ್ರದಲ್ಲೇ ಸ್ಟಾರ್ ನಟರ ಜತೆ ತೆರೆ ಹಂಚಿಕೊಂಡ ಹೆಗ್ಗಳಿಕೆ ರಚಿತಾ ರಾಮ್ ಅವರದ್ದು. ಆನಂತರವೂ ಅವರಿಗೆ ಹೆಸರಾಂತ ನಟರ ಚಿತ್ರಗಳೇ ಸಿಕ್ಕವು. ಹೀಗಾಗಿ ಇವರನ್ನು ಸ್ಯಾಂಡಲ್‌ವುಡ್ ಲಕ್ಕಿ ಕ್ವೀನ್ ಎನ್ನುತ್ತಿದೆ. ದರ್ಶನ್ ಗ್ಯಾಂಗ್ ಜತೆ ಗುರುತಿಸಿಕೊಂಡಿದ್ದವರನ್ನು ಪುನೀತ್ ಚಿತ್ರದಲ್ಲಿ ನಟಿಸುವಂತೆ ಕೇಳಲಾಯಿತು. ರಚಿತಾ ಒಪ್ಪಲಿಲ್ಲ ಅನ್ನುವ ಮಾತು ಸಖತ್ ಸುದ್ದಿ ಮಾಡಿತ್ತು. ಕೊನೆಗೂ ಪುನೀತ್ ಅವರ ಜತೆ ರಚಿತಾ ನಟಿಸಿದ್ದಾರೆ. ಆ ಚಿತ್ರದ ಬಗ್ಗೆ ಮಾತಾಡಿದ್ದಾರೆ.

** ಪುನೀತ್ ಜತೆ ನಟಿಸದಂತೆ ನಿಮ್ಮ ಮೇಲೆ ಒತ್ತಡ ಹೇರಲಾಗಿತ್ತು. ಆಗ ನಿಮಗೆ ಟೆನ್‌ಷನ್ ಆಗಿತ್ತಾ?*

ಈ ಕುರಿತು ನಾನು ಸಾಕಷ್ಟು ಬಾರಿ ಮಾತಾಡಿದ್ದೇನೆ. ಒತ್ತಡ ಹೇರಿದ್ದು ಅಭಿಮಾನಿಗಳು. ಅವರಿಗೆ ನಿಜ ಏನು ಅಂತ ಗೊತ್ತಿರಲಿಲ್ಲ. ಆಮೇಲೆ ಗೊತ್ತಾಗಿ ಸುಮ್ಮನಾದರು. ನಾನು ಯಾರ ಮನಸ್ಸನ್ನೂ ನೋಯಿಸಿಲ್ಲ. ಹೀಗಾಗಿ ಟೆನ್‌ಷನ್ ಆಗುವ ವಿಚಾರವೇ ಬರುವುದಿಲ್ಲ. ಪುನೀತ್ ಜತೆ ನಟಿಸಬೇಕು ಅನ್ನುವುದು ನನ್ನ ಕನಸೂ ಆಗಿತ್ತು. ಅದು 'ಚಕ್ರವ್ಯೂಹ' ಸಿನಿಮಾದಲ್ಲಿ ಕೂಡಿಬಂದಿದೆ.

** ಹೀರೋಯಿನ್ ಆಗಿ ಗುರುತಿಸಿಕೊಂಡ ನೀವು ಸಡನ್ನಾಗಿ 'ಅಂಬರೀಷ' ಸಿನಿಮಾದಲ್ಲಿ ಪುಟ್ಟ ಪಾತ್ರ ಒಪ್ಪಿಕೊಂಡಿದ್ದು ಯಾಕೆ?*

ತೆರೆಯ ಮೇಲೆ ಪಾತ್ರ ಎಷ್ಟು ಹೊತ್ತು ಇರುತ್ತದೆ ಅಂತೆ ಯಾವತ್ತೂ ನಾನು ಲೆಕ್ಕ ಹಾಕುವುದಿಲ್ಲ. 'ಅಂಬರೀಷ' ಸಿನಿಮಾದಲ್ಲಿ ಪಾತ್ರ ಒಪ್ಪಿಕೊಳ್ಳಲು ಹಲವು ಕಾರಣಗಳಿವೆ. ನನಗೆ ಪ್ರಿಯಾಮಣಿ ಅವರ ಜತೆ ನಟಿಸಬೇಕು ಅನ್ನುವ ಆಸೆ ಇತ್ತು. ಅಲ್ಲದೇ ಆ ಪಾತ್ರ ಕೂಡ ಕ್ಯೂಟ್ ಆಗಿತ್ತು. ದರ್ಶನ್ ಅವರ ಜತೆ ನಟಿಸೋಕೆ ನನಗೆ ಯಾವಾಗಲೂ ಇಷ್ಟ. ಇವೆಲ್ಲ ಕಾರಣದಿಂದಾಗಿ ನಾನು ನಟಿಸಿದೆ. ಸಿನಿಮಾದ ಗೆಲುವು ಮತ್ತು ಸೋಲು ನಮ್ಮ ಕೈಯಲ್ಲಿ ಇಲ್ಲ. ಹೀಗಾಗಿ ನಾನು ಆ ಕುರಿತು ಮಾತಾಡಲಾರೆ.



** ಸ್ಟಾರ್‌ಗಳ ಜತೆ ಅವಕಾಶ ಸಿಕ್ಕಿತು ಅನ್ನುವ ಕಾರಣಕ್ಕೆ ಬೇಗ ಗುರುತಿಸಿಕೊಂಡೆ ಅಂತ ಅನಿಸ್ತಿಲ್ಲವಾ?*

ನೋಡಿ, ಹೆಸರಾಂತ ನಟರ ಜತೆ ನಟಿಸಿದೆ ಅನ್ನುವ ಕಾರಣಕ್ಕೆ ಯಾರೂ ಕರೆದು ಕೆಲಸ ಕೊಡುವುದಿಲ್ಲ. ನನ್ನ ಮೊದಲ ಸಿನಿಮಾ ಸೋತಿದ್ದರೆ, ನನಗೆ ಅವಕಾಶ ಸಿಗುತ್ತಿದ್ದವೋ ಇಲ್ಲವೋ ಗೊತ್ತಿಲ್ಲ. ಸ್ಟಾರ್ ನಟರ ಜತೆ ಆಕ್ಟ್ ಮಾಡಿದ್ದರೂ, ನನ್ನದೂ ಅಲ್ಲಿ ಎಫರ್ಟ್ ಇದೆ. ನಾನೂ ಕೂಡ ನಟಿಸಿದ್ದೇನೆ. ಕೆಟ್ಟದ್ದಾಗಿ ಆಕ್ಟ್ ಮಾಡಿದ್ದರೆ, ಮತ್ತೆ ದರ್ಶನ್ ಅವರು ನನಗೆ ಅವಕಾಶ ಕೊಡ್ತಾ ಇರಲಿಲ್ಲ. ಸುದೀಪ್, ಗಣೇಶ್, ಶ್ರೀಮುರಳಿ ಜತೆ ನಾನು ನಟಿಸ್ತಾ ಇರಲಿಲ್ಲ.

** ಹಾಗಾದರೆ, ಸ್ಟಾರ್ ನಟರ ಜತೆಗಿನ ಅಭಿನಯ ನಿಮ್ಮ ವೃತ್ತಿ ಬದುಕಿಗೆ ಸಹಾಯನೇ ಮಾಡಿಲ್ಲವಾ?*

ಮಾಡಿಲ್ಲ ಅಂತ ಹೇಳೋಕೆ ಆಗಲ್ಲ. ನಾನು ಅವರಿಂದ ಸಾಕಷ್ಟು ಕಲಿತಿದ್ದೇನೆ. ಅವರು ಈ ಮಟ್ಟಕ್ಕೆ ಬರೋಕೆ ಎಷ್ಟೆಲ್ಲ ಕಷ್ಟ ಪಟ್ಟಿದ್ದಾರೆ ಅಂತ ನನಗೆ ಗೊತ್ತಿದೆ. ಹೀಗಾಗಿ ಪ್ರತಿಯೊಬ್ಬ ನಟರ ಜತೆಗೂ ನಾನು ಕಲಿತಿದ್ದೇನೆ. ನನ್ನೊಟ್ಟಿಗೆ ಸಿನಿಮಾರಂಗಕ್ಕೆ ಬಂದ ಧ್ರುವ ಅವರಿಂದಲೂ ನಾನು ಕಲಿತಿದ್ದೇನೆ. ಇದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

** 'ಭರ್ಜರಿ' ಸಿನಿಮಾದಲ್ಲಿ ನಿಮ್ಮದು ಎಂತಹ ಪಾತ್ರ?*

ತುಂಬಾ ಬಬ್ಲಿ ಪಾತ್ರವದು. ಸಖತ್ ಕಲರ್‌ಫುಲ್ ಆಗಿ ಸಿನಿಮಾ ಮೂಡಿಬಂದಿದೆ. ಡಿಂಪಲ್ ಕೆನ್ನೆಯ ಹುಡುಗಿ ನಾನು ಅನ್ನುವ ಕಾರಣಕ್ಕೆ ಆ ಪಾತ್ರ ನನಗೆ ಸಿಕ್ಕಿದೆ. ಧ್ರುವ ಮತ್ತು ನನ್ನ ಜೋಡಿಯು ಖಂಡಿತಾ ಪ್ರೇಕ್ಷಕರಿಗೆ ಮೋಡಿ ಮಾಡಲಿದೆ. ಇಡೀ ಸಿನಿಮಾವನ್ನು ಹೊಸದಾಗಿಯೇ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕರು.

** ಪುನೀತ್ ಜತೆಗೆ 'ಚಕ್ರವ್ಯೂಹ' ಸಿನಿಮಾದಲ್ಲಿ ನಟಿಸಿದ್ದೀರಿ. ಆ ಅನುಭವದ ಬಗ್ಗೆ ಹೇಳಿ?*

ನಿಜಕ್ಕೂ ನಾನು ಹೆಮ್ಮೆ ಪಟ್ಟಿದ್ದೇನೆ. ಪುನೀತ್ ಸಾರ್ ಜತೆ ನಟಿಸಲು ಅವಕಾಶ ಸಿಗುವುದು ಕಷ್ಟ. ನನಗೆ ಸಿಕ್ಕಿದೆ. ಹೀಗಾಗಿ ಅದನ್ನು ಸಮರ್ಥವಾಗಿ ಬಳಸಿಕೊಂಡಿದ್ದೇನೆ. ಅವರು ಬ್ರಿಲಿಯಂಟ್ ನಟ. ಬಾಲ್ಯದಲ್ಲೇ ರಾಷ್ಟ್ರ ಪ್ರಶಸ್ತಿ ಪಡೆದಿದ್ದಾರೆ. ಡಾ.ರಾಜ್‌ಕುಮಾರ್ ಪುತ್ರ. ಈಗಾಗಲೇ ಸಾಕಷ್ಟು ಪಾತ್ರಗಳನ್ನು ಪುನೀತ್ ನಿರ್ವಹಿಸಿದ್ದಾರೆ. ಅಂಥವರ ಜತೆ ನಾನು ಕಾಣಿಸಿಕೊಂಡಿದ್ದೇನೆ ಅನ್ನುವುದೇ ಹೆಮ್ಮೆ.

** 'ಚಕ್ರವ್ಯೂಹ'ದಲ್ಲಿ ನಿಮ್ಮ ಪಾತ್ರ ಎಂಥದ್ದು? ಏನೆಲ್ಲ ತಯಾರಿ ಮಾಡಿಕೊಂಡಿದ್ದೀರಿ?*


ಇಲ್ಲಿ ನನ್ನದು ಒಂದು ರೀತಿಯ ಬಜಾರಿ ಪಾತ್ರವೇ ಎನ್ನಬಹುದು. ನಾಯಕನನ್ನು ಕಾಡಿಸುವಂತಹ ಪಾತ್ರ. ಸಖತ್ ಮಾತಾಡುತ್ತೇನೆ. ಈವರೆಗೂ ನಾನು ಇಂತಹ ಪಾತ್ರ ಮಾಡಿರಲಿಲ್ಲ. ಮೊದಲ ಬಾರಿಗೆ ಕಾಣಿಸಿಕೊಂಡಿದ್ದೇನೆ. ಅಲ್ಲದೇ ನಾನು ಈಗ ಹೇಗಿದ್ದೇನೋ ಪಾತ್ರವೂ ಹಾಗೇ ಇದೆ. ಹೀಗಾಗಿ ತಯಾರಿ ಮಾಡಿಕೊಳ್ಳುವಂತಹ ಸನ್ನಿವೇಶವೇ ಬರಲಿಲ್ಲ.

** ಪುನೀತ್ ಜತೆ ಅವಕಾಶ ಸಿಕ್ಕರೆ ಮತ್ತೆ ನಟಿಸುತ್ತೀರಾ?*

ಯಾಕಾಗಬಾರದು? ಮತ್ತೆ ಮತ್ತೆ ಅವಕಾಶ ಸಿಗಲಿ ಅಂತ ಕೇಳಿಕೊಳ್ಳುತ್ತೇನೆ. 'ಚಕ್ರವ್ಯೂಹ' ಸಿನಿಮಾದಲ್ಲಿ ನನಗೆ ಅವಕಾಶ ಸಿಕ್ಕಿದ್ದು ಆಕಸ್ಮಿಕವೇ. ಯಾರೋ ಮಾಡಬೇಕಿದ್ದ ಪಾತ್ರ ನನಗೆ ಸಿಕ್ಕಿತು. ಹೀಗಾಗಿ ನನಗೆ ಅವಕಾಶ ಸಿಗುವಂತೆ ಮಾಡಿದ ನಟಗೆ ನಾನು ಥ್ಯಾಂಕ್ಸ್ ಹೇಳುತ್ತೇನೆ. ಅಲ್ಲದೇ, ಕನ್ನಡದ ಎಲ್ಲ ನಟರ ಜತೆಯೂ ನನಗೆ ನಟಿಸುವುದಕ್ಕೆ ಇಷ್ಟ. ನನಗೆ ಪಾತ್ರ ಒಪ್ಪಿಗೆ ಆಗಬೇಕು. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 20-04-2016 RNI No. KARKAN20

ಗರಂ ಆದ ಯಶ್



ಯಶ್ ಕೋಪಗೊಂಡಿದ್ದಾರೆ. ಅವರ ಮತ್ತು ಅವರ ಸಿನಿಮಾ ಬಗ್ಗೆ ಗೊಂದಲ ಸೃಷ್ಟಿಸುವವರ ವಿರುದ್ಧ ಸಿಡಿಮಿಡಿಗೊಂಡಿದ್ದಾರೆ. ಆರೇಳು ತಿಂಗಳಿಂದ ಯಶ್ ಯಾವುದೇ ಸಿನಿಮಾ ಮಾಡುತ್ತಿಲ್ಲ. ಆಗಬೇಕಿದ್ದ ಹೊಸ ಸಿನಿಮಾ ಹಲವು ಕಾರಣಗಳಿಂದ ಮುಂದೆ ಸಾಗುತ್ತಲೇ ಇದೆ. ಈ ಮಧ್ಯೆ ಹೊಸ ಸಿನಿಮಾಗೆ ನಾನಾ ಹೆಸರುಗಳು ಕೇಳಿಬಂದಿವೆ. ಇದೆಲ್ಲವೂ ಗಾಂಧಿನಗರದ ಸೃಷ್ಟಿ ಅನ್ನುತ್ತಿದ್ದಾರೆ ಯಶ್.

ಮಹೇಶ್ ರಾವ್ ನಿರ್ದೇಶನದಲ್ಲಿ ಮೂಡಿಬರಬೇಕಿರುವ ಹೊಸ ಚಿತ್ರಕ್ಕೆ 'ಮೈಸೂರು-ಹುಲಿ', 'ಮಾಂಜಾ' ಸೇರಿದಂತೆ ಹಲವು ಟೈಟಲ್ ಇಡಲಾಗಿದೆ ಅನ್ನುವ ಸುದ್ದಿ ಗಾಂಧಿನಗರದಲ್ಲಿ ಹರಿದಾಡುತ್ತಿತ್ತು. ಇದರಿಂದ ಯಶ್‌ಗೆ ಸಹಜವಾಗಿಯೇ ಬೇಸರವಾಗಿದೆ. ಹೀಗಾಗಿ "ಚಿತ್ರಕ್ಕೆ ಯಾವುದೇ ಟೈಟಲ್ ಇಟ್ಟಿಲ್ಲ. ಗಾಸಿಪ್‌ಗಳನ್ನು ನಂಬಬೇಡಿ. ಯುಗಾದಿಯ ದಿನದಂದು ಹೊಸ ಶೀರ್ಷಿಕೆ ಇಡಲಾಗುವುದು" ಎಂದಿದ್ದಾರೆ ಯಶ್. ಅಂದಹಾಗೆ ಯಶ್ ನಟನೆಯ 'ಮಾಸ್ಟರ್‌ಪೀಸ್' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಅಂದುಕೊಂಡಂತೆ ಗೆಲ್ಲಲಿಲ್ಲ. ಹೀಗಾಗಿ ಬಹುಬೇಗ ಟಿವಿಯಲ್ಲೂ ಅದು ಪ್ರಸಾರ ಕಾಣುತ್ತಿದೆ. ಇದರಿಂದ ಯಶ್‌ಗೆ ಸಹಜವಾಗಿ ಬೇಸರವಾಗಿದೆ. ಈ ಬೇಸರವನ್ನು ಅವರು ಗಾಂಧಿನಗರದವರ ಮೇಲೆ ತೀರಿಸಿಕೊಳ್ಳುತ್ತಿದ್ದಾರೆ.

ಜಗ್ಗುದಾದ ಈ ತಿಂಗಳು ಡೌಟು

ದರ್ಶನ್ ನಟನೆಯ 'ಜಗ್ಗುದಾದ' ಸಿನಿಮಾ ಇದೇ ತಿಂಗಳು ರಿಲೀಸ್ ಅನ್ನುವ ಮಾತು ಕೇಳಿಬಂದಿತ್ತು, ಆದರೆ, ಈ ತಿಂಗಳು ರಿಲೀಸ್ ಆಗುವುದು ಅನುಮಾನ ಎನ್ನಲಾಗುತ್ತಿದೆ. ಇನ್ನೂ ಹಾಡುಗಳ ಚಿತ್ರೀಕರಣ ಮುಗಿದಿಲ್ಲ, ಅಲ್ಲದೇ ಸಾಕಷು ಸನ್ನಿವೇಶಗಳೂ ಶೂಟ್ ಆಗಬೇಕಿವೆ. ಸದ್ಯ ಹಾಡಿನ ಚಿತ್ರೀಕರಣಕ್ಕಾಗಿ ತಂಡ ವಿದೇಶಕ್ಕೆ ಪ್ರಯಾಣ ಬೆಳೆಸಿದೆ. ಅಂದುಕೊಂಡಂತೆ ನಡೆದರೆ, ಮೇನಲ್ಲಿ ಬಿಡುಗಡೆ ಆಗುವ ಸಾಧ್ಯತೆ ಇದೆ.

'ಜಗ್ಗುದಾದ' ಸರಿಯಾದ ಟೈಮ್‌ಗೆ ಬಾರದೇ ಇರುವ ಕಾರಣ, ದರ್ಶನ್‌ರ ವೈಯಕ್ತಿಕ ಜೀವನದಲ್ಲಿ ನಡೆಯುತ್ತಿರುವ ಗಲಾಟೆ. ಇದರಿಂದಾಗಿ ಅವರು ಶೂಟಿಂಗ್‌ನಲ್ಲಿ ಭಾಗವಹಿಸುವುದಕ್ಕೆ ಆಗಲಿಲ್ಲ. ಹೀಗಾಗಿ ಒಂದು ತಿಂಗಳು ತಡವಾಗಿ 'ಜಗ್ಗು' ಥಿಯೇಟರ್‌ಗೆ ಬರುತ್ತಿದ್ದಾನೆ.



ದರ್ಶನ್‌ರ ವೃತ್ತಿಜೀವನದಲ್ಲೇ ಇದು ವಿಶೇಷ ಸಿನಿಮಾ. ಇದೇ ಮೊದಲ ಬಾರಿಗೆ ಇವರ ಕಾಮಿಡಿ ವಿತ್ ಆಕ್ಷನ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ದರ್ಶನ್‌ಗಾಗಿಯೇ ವಿಶೇಷ ಗೆಟಪ್ ಕೂಡ ಇದೆ. ಅಲ್ಲದೇ ಈ ಚಿತ್ರಕ್ಕಾಗಿ ವಿ.ಹರಿಕೃಷ್ಣ ಮೆಲೊಡಿ ಹಾಡುಗಳನ್ನು ಕೊಟ್ಟಿದ್ದಾರಂತೆ.

ತೂಕ ಇಳಿಸಿಕೊಂಡ ಶುಭಾ


ಸಿನಿಮಾಗಳಲ್ಲಿ ಅವಕಾಶ ಕಡಿಮೆ ಆಗುತ್ತಿದ್ದಂತೆಯೇ ವರ್ಕೌಟ್ ಮಾಡಲು ಶುರು ಮಾಡಿದ್ದಾರೆ ಶುಭಾ ಪೂಂಜಾ. 'ಮೊಗ್ಗಿನ ಮನಸು', 'ಸ್ಲಂ ಬಾಲಾ' ಸೇರಿದಂತೆ ಹಲವು ಚಿತ್ರಗಳಲ್ಲಿ ಬಳುಕುವ ಬಳ್ಳಿಯಂತಿದ್ದ ಶುಭಾ ಅನಂತರ ಸಿಕ್ಕಾಪಟ್ಟೆ ದಪ್ಪಗಾದರು. ಪರಿಣಾಮವಾಗಿ ಅವಕಾಶಗಳು ಕೈ ತಪ್ಪಿದವು. ಅದರಲ್ಲೂ ಒಂದೆರಡು ಸಿನಿಮಾಗಳಲ್ಲಿ ನಟಿಸಿ, ಅವಮಾನಕ್ಕೂ ಒಳಗಾದರು. ಈಗ ಸಿನಿಮಾ ರಂಗದಲ್ಲಿ ಮತ್ತೆ ಎದ್ದು ನಿಲ್ಲುವ ಸಂಕಲ್ಪವನ್ನು ಮಾಡಿಕೊಂಡಿದ್ದಾರೆ ಮೊಗ್ಗಿನ ಮನಸಿನ ಹುಡುಗಿ. ಹೀಗಾಗಿಯೇ ಹಗಲುರಾತ್ರಿ ತೂಕ ಇಳಿಸಿಕೊಳ್ಳುವುದರಲ್ಲಿ ಬಿಜಿ ಆಗಿದ್ದಾರೆ.

ಈಗಾಗಲೇ ಐದಾರು ಕೇಜಿ ಕಡಿಮೆ ಆಗಿರುವ ಶುಭಾ 'ಜೈ ಮಾರುತಿ 800' ಚಿತ್ರದಲ್ಲಿ ನಟಿಸಿದ್ದಾರೆ. ಅದೂ ಶರಣ್ ಜತೆ. ಈ ವಾರ 'ಮಾರುತಿ' ತೆರೆಗೆ ಬರಲಿದೆ. ಅಲ್ಲದೇ ಭಕ್ತಿ ಪ್ರಧಾನ ಸಿನಿಮಾದಲ್ಲೂ ಇವರು ಕಾಣಿಸಿಕೊಂಡಿದ್ದಾರೆ. ಈ ಚಿತ್ರವೂ ಇದೇ ವಾರ ತೆರೆ ಕಾಣುತ್ತಿದೆ.

ಶುಭಾ ಅಂದರೆ ಹಾಗೆಯೇ. ಅವರು ಯಾವುದಕ್ಕೂ ತಲೆಕೆಡಿಸಿಕೊಳ್ಳದ ನಟಿ. ಬಿಂದಾಸ್ ಜೀವನವೇ ಅವರ ಮಂತ್ರ. ಹೀಗಾಗಿಯೇ ಅವರು ಸಿನಿಮಾ ಜೀವನದಲ್ಲಿ ಕೊಂಚ ಎಡವಟ್ಟು ಮಾಡಿಕೊಂಡರು. ಈಗ ಸರಿ ಹಾದಿಯಲ್ಲಿದ್ದಾರೆ. ಹೀಗಾಗಿ ಮತ್ತೆ ಅವರಿಗೆ ಸಿನಿಮಾಗಳು ಸಿಗುತ್ತಿವೆ.



ಐವತ್ತರ ಸಂಭ್ರಮದಲ್ಲಿ ಶಿವ



'ಶಿವಲಿಂಗ' ಸಿನಿಮಾ ಐವತ್ತು ದಿನಗಳನ್ನು ಪೂ... ಹೀಗಾಗಿ ಶಿವರಾಜ್‌ಕುಮಾರ್‌ಗೆ ಸಹಜವಾ... ಖುಷಿಯಾಗಿದೆ. ಇದೇ ಮೊದಲ ಬಾರಿಗೆ ಶಿ... ಕುಮಾರ್ ಸಿಬಿಐ ಆಫೀಸರ್ ಪಾತ್ರ ನಿರ್ವಹಿಸಿ... ಅಲ್ಲದೇ ಈ ಚಿತ್ರವು ಸಸ್ಪೆನ್ಸ್ ಮತ್ತು ಥ್ರಿಲ್ಲರ್ ... ಹೊಂದಿದೆ. ಹೀಗಾಗಿ ಚಿತ್ರ ಒಂದು ವಾರ ಓಡುವು... ಅನ್ನುವ ಮಾತೂ ಕೇಳಿಬಂದಿತ್ತು, ಆದರೆ ಸಿನಿಮಾದ ... ಎಲ್ಲವನ್ನು ಉಲ್ಟಾ ಮಾಡಿದೆ. ಬಾಕ್ಸ್ ಆಫೀ... ತಕ್ಕ ಮಟ್ಟಿಗೆ ಗೆಲುವು ಕಂಡಿದೆ.

ಮೊನ್ನೆಯಷ್ಟೇ ಗೆಲುವಿನ ಸಂಭ್ರಮ... ಆಚರಿಸಿತು ಸಿನಿಮಾ ತಂಡ. ಸಿನಿಮಾ ... ಅಭಿಮಾನಿಗಳನ್ನು ಭೇಟಿ ಮಾಡಲು ಸ್ವತಃ ಶಿವಣ್ಣ ಹಲವು ಊ... ಪ್ರವಾಸ ಮಾಡಿದರು. ಬೆಂಗಳೂರಿನ ಪ್ರಮುಖ ಚಿತ್ರಮಂದಿರದಲ್ಲಿ ಮಹಿಳೆ... ಸೀರೆ ಹಂಚಲಾಯಿತು. ಅಲ್ಲದೇ ಲಂಡನ್‌ಗೂ ಪ್ರವಾಸ ಬೆಳೆಸಿ, ಅಲ್ಲಿಯೂ ... ಸಿನಿಮಾ ತೋರಿಸಲಾಯಿತು. ಇತ್ತೀಚೆಗೆ ಶಿವಣ್ಣನಿಗೆ ಗೆಲುವು ಅನ್ನುವುದು ಮ... ಆಗಿತ್ತು. 'ಕಿಲ್ಲಿಂಗ್ ವೀರಪ್ಪನ್' ಕೊಂಚ ಗೆಲುವಿನ ನಗೆ ಮೂಡಿಸಿತ್ತು. 'ಶಿ... ಸಿನಿಮಾ ಗೆಲುವಿನ ಖುಷಿಯನ್ನು ಇಮ್ಮಡಿಗೊಳಿಸಿದೆ. ಹೀಗಾಗಿ ಇದೇ ನಿಮಾ... ಜತೆ ಮತ್ತೊಂದು ಸಿನಿಮಾ ಮಾಡುವುದಾಗಿ ಶಿವಣ್ಣ ಹೇಳಿಕೊಂಡಿದ್ದಾರೆ. ಇದೇ ಸಿನಿಮಾದ ನಿರ್ದೇಶಕರಿಗೂ ಕಾಲ್‌ಶೀಟ್ ಕೊಟ್ಟಿದ್ದಾರೆ.


ಮತ್ತೆ ಬಣ್ಣ ಹಚ್ಚಲಿದ್ದಾರೆ ಯೋಗೀಶ್ವ

ರಾಜಕಾರಣಿ ಸಿ.ಪಿ.ಯೋಗೀಶ್ವರ್ ಮತ್ತೆ ಬಣ್ಣ ಹಚ್ಚಲಿದ್ದಾರೆ. ಹೀರೋ ಆಗಿ. 'ಸೈನಿಕ' ಸಿನಿಮಾದ ಮೂಲಕ ಮನೆಮಾ... ಇವರು, ಈಗ ಅದೇ ಸಿನಿಮಾದ ಪಾರ್ಟ್-2 ಮಾಡಲು ಉತ್ಸುಕರಾ... ಹೀಗಾಗಿ ಚಿತ್ರಕ್ಕೆ 'ಸೈನಿಕ-2' ಎಂದು ಹೆಸರಿಡಲಾಗಿದೆ.

ಕಳೆದ ವರ್ಷವಷ್ಟೇ ಯೋಗೀಶ್ವರರ ಪುತ್ರಿ ಸಿನಿಮಾರಂಗಕ್ಕೆ ಕೊಟ್ಟಿದ್ದರು. ಅದು ದೊಡ್ಡ ಸುದ್ದಿ ಕೂಡ ಆಗಿತ್ತು, ಆದರೆ, ಅವರು ವೇಗದಲ್ಲೇ ಸಿನಿಮಾರಂಗದಿಂದ ಹಿಂದೆ ಸರಿದರು.

ಆರೇಳು ತಿಂಗಳ ಹಿಂದೆಯಷ್ಟೇ ಮತ್ತೆ ಇವರ ಹೆಸರು ತ... ಸಿನಿಮಾ ರಂಗದಲ್ಲಿ ಕೇಳಿಬರುತ್ತಿದೆ. ಈ ಮಧ್ಯೆ ಯೋಗೀಶ್ವರ್ ಕೂಡ ಹೀರೋ ಆಗಿ ರೀಎಂಟ್ರಿ ಪಡೆಯುತ್ತಿದ್ದಾರೆ. 'ಸೈನಿಕ' ಚಿತ್ರವನ್ನು ಮಹೇಶ್ ಸುಖಧರೆ ನಿರ್ದೇಶನ ಮಾಡಿದ್ದರು.

'ಸೈನಿಕ 2' ಚಿತ್ರಕ್ಕೆ ಯಾರು ಆಕ್ಷನ್ ಕಟ್ ಹೇಳಲಿದ್ದಾರೆ ಅನ್ನುವ ಮಾಹಿತಿ ಇನ್ನೂ ಹೊರಬಿದ್ದಿಲ್ಲ. ಆದರೆ ಸ್ಕ್ರಿಪ್ಟ್ ಕೆಲಸ ನಡೆಯುತ್ತಿದೆ. ಅಂದುಕೊಂಡಂತೆ ನಡೆದರೆ ಮುಂದಿನ ತಿಂಗಳು ಚಿತ್ರಕ್ಕೆ ಮುಹೂರ್ತ ಅನ್ನಲಾಗುತ್ತಿದೆ. ಅಲ್ಲದೇ ಯೋಗೀಶ್ವರ್ ಪುತ್ರಿಗೂ ಈ ಚಿತ್ರದಲ್ಲಿ ಪ್ರಮುಖ ಪಾತ್ರ ಇರಲಿದೆಯಂತೆ.



ಲಂಕೇಶ್ ಪ್ರಕಾಶನದ ಬಿಡುಗಡೆಯಾದ ಹೊಸ ಪುಸ್ತಕಗಳು



ಲೇಖಕರು: ಪಿ. ಲಂಕೇಶ್ — ಬೆಲೆ: ರೂ.250/-
ಸಂಪಾದನೆ: ಹರ್ಷಕುಮಾರ್ ಕುಗ್ವೆ — ಬೆಲೆ: ರೂ.150/-
ಲೇಖಕರು: ನೂರ್ ಶ್ರೀಧರ್ — ಬೆಲೆ: ರೂ.
ಲೇಖಕರು: ನಗರಿ ಬಾಬಯ್ಯ — ಬೆಲೆ: ರೂ.60/-
ಲೇಖಕರು: ಗಿರೀಶ್ ತಾಳಿಕಟ್ಟೆ — ಬೆಲೆ: ರೂ.80/-
ಅನುವಾದ: ಕೆ. ನಲ್ಲತಂಬಿ — ಬೆಲೆ: ರೂ.150/-
ಅನುವಾದ: ಕೆ. ನಲ್ಲತಂಬಿ — ಬೆಲೆ: ರೂ.80/-
ಸಂಪಾದನೆ: ಕುಮಾರ್ ಬುರಡಿಕಟ್ಟಿ — ಬೆಲೆ: ರೂ.80/-

ಗೈಡ್ ಪ್ರಕಾಶನದ ನೂತನ ಪುಸ್ತಕಗಳು

ಆಯಾ ಪರೀಕ್ಷೆಯ ನಿಗದಿತ ಸಿಲಬಸ್‌ಗೆ ಅನುಗುಣವಾಗಿ ಸಿದ್ಧಪಡಿಸಲಾದ ಸಮೃದ್ಧ ಅಧ್ಯಯನ ಸಾಮಗ್ರಿಗಳು ಮತ್ತು ಸರಳ ಕೈಪಿಡಿಗಳು

ಈಗಾಗಲೇ ಮಾರುಕಟ್ಟೆಯಲ್ಲಿವೆ

ಪ್ರತಿಗಳಿಗೆ ಸಂಪರ್ಕಿಸಿ 9880302817 080-26676427



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com